# ಕರ್ನಾಟಕ ವಿಕಾಸ

ಹೊಸ ವರ್ಷದ ಹಾರ್ದಿಕ ಶುಭಾಶಯಗಳು

ಜನವರಿ 2012

2012








ಹಳ್ಳಿಗಳ ಅಭಿವೃದ್ಧಿಗೆ
ಎಲ್ಲರೂ ಶ್ರಮಿಸೋಣ.
ದೇಶದ ಅಭಿವೃದ್ಧಿಗೆ
ಹೊಸ ಭಾಷ್ಯ ಬರೆಯೋಣ.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# 2012

## ಜನವರಿ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 ಉತ್ತರಾಯಣ ಪುಣ್ಯಕಾಲ | 16 | 17 | 18 | 19 | 20 | 21 |
| 22 | 23 | 24 | 25 | 26 ಗಣರಾಜ್ಯೋತ್ಸವ | 27 | 28 |
| 29 | 30 | 31 | | | | |

## ಫೆಬ್ರವರಿ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 ಈದ್ ಮಿಲಾದ್ | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 ಮಹಾಶಿವರಾತ್ರಿ | 21 | 22 | 23 | 24 | 25 |
| 26 | 27 | 28 | 29 | | | |

## ಮಾರ್ಚ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 ಚಾಂದ್ರಮಾನ ಯುಗಾದಿ | 24 |
| 25 | 26 | 27 | 28 | 29 | 30 | 31 |

## ಏಪ್ರಿಲ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 ಮಹಾವೀರ ಜಯಂತಿ | 5 | 6 ಗುಡ್‌ಫ್ರೈಡೇ | 7 |
| 8 | 9 | 10 | 11 | 12 | 13 | 14 ಅಂಬೇಡ್ಕರ್ ಜಯಂತಿ |
| 15 | 16 | 17 | 18 | 19 | 20 | 21 |
| 22 | 23 | 24 ಬಸವೇಶ್ವರ ಜಯಂತಿ | 25 | 26 | 27 | 28 |
| 29 | 30 | | | | | |

## ಮೇ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 ಕಾರ್ಮಿಕರ ದಿನಾಚರಣೆ | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಜೂನ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

ಸಾರ್ವತ್ರಿಕ ರಜಾ ದಿನಗಳನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ



# ಕರ್ನಾಟಕ ವಿಕಾಸ

**ಜನವರಿ 2012**

**ಸಂಪುಟ : 53** **ಸಂಚಿಕೆ : 2**

## ಈ ಸಂಚಿಕೆಯಲ್ಲಿ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಅಮಿತಾ ಪ್ರಸಾದ್ |
| 7 | ಕಾರ್ಯದರ್ಶಿಗಳ ಆಶಯ | – ಡಾ. ಶಾಲಿನಿ ರಜನೀಶ್ |
| 11 | ಸಂದರ್ಶನ | – ಡಾ. ವಿಜಯ ಅಂಗಡಿ |
| 13 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 14 | ಕಾವ್ಯ ವಿಕಾಸ | – ಸಿ.ಬಿ. ಪಲ್ಲೇದ |
| 15 | ಚಿಂತನೆ | – ಡಾ. ಎಂ.ಜಿ. ಬಸವರಾಜ |
| 21 | ನುಡಿ ನಿರ್ಮಲ | |
| 25 | ಲೇಖನಗಳು | – ಪ್ರೊ. ಎ.ಎಚ್. ಮಾಸಾಪತಿ |
| | | – ವಾಮನರಾವ್ |
| | | – ಆರ್. ಜಯರಾಮಯ್ಯ |
| | | – ಶರತ್‌ಕುಮಾರ. ಎ. |
| 35 | ಯಶೋಗಾಥೆ | – ಎನ್. ಕೃಷ್ಣಪ್ಪ ಕೋಡಿಪಾಳ್ಯ |
| 38 | ಕವಿಯ(ಕ್ಷ) ಪ್ರಶ್ನೆಗಳು | – ವಿ. ಶ್ರೀನಿವಾಸ |
| 39 | ಆರೋಗ್ಯ | – ಡಾ. ಬಿ. ರಮಣರಾವ್ |
| 40 | ಸುತ್ತೋಲೆಗಳು | |



ಪ್ರಕಾಶಕರು

**ಪಿ. ಕುಮಾರ್**

ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ|| ಎಂ.ಎಸ್. ಮಂಜುನಾಥ**

**ನಾಗರಾಜ್. ಬಿ. ವಾಗಾ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**


**ವಾರ್ಷಿಕ ಚಂದಾ :**


ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**

## ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

ನಮ್ಮ ಮೆಚ್ಚಿನ 'ಕರ್ನಾಟಕ ವಿಕಾಸ' ಡಿಸೆಂಬರ್–2011ರ ಡಾ॥ ಅಮಿತಾ ಪ್ರಸಾದ್‌ರವರ ಸಂದೇಶ 'ಗ್ರಾಮ ಸಭೆಯಲ್ಲಿ ಭಾಗವಹಿಸಿ ಹಳ್ಳಿಗಳ ಅಭಿವೃದ್ಧಿಗೆ ಸಹಕರಿಸಿ' ಬರಹ ನಮ್ಮ ಭಾರತಾಂಬೆಯ ಹೆಮ್ಮೆಯ ಪುತ್ರರತ್ನ. ನಮಗೆಲ್ಲ ಶಾಂತಿಯ ಮಂತ್ರದಿಂದ ಸ್ವಾತಂತ್ರ ದೊರಕಿಸಿದ ಮಹಾತ್ಮ ಗಾಂಧೀಜಿಯವರನ್ನು ನೆನಪಿಸಿದ ಬರಹ ನಮ್ಮ ಹಳ್ಳಿಯ ಮುಗ್ಧ ರೈತರು, ಕೂಲಿಕಾರರು, ಮಧ್ಯಮ ವರ್ಗದವರೆಲ್ಲಾ ಗ್ರಾಮಸಭೆಯಲ್ಲಿ ಭಾಗವಹಿಸಬೇಕು. ಅವರು, ಯಾವುದೇ ರಾಜಕೀಯ ವ್ಯಕ್ತಿ, ಅಧ್ಯಕ್ಷ, ಸದಸ್ಯರ ಕೈಗೊಂಬೆಯಾಗಬಾರದು ಅಂದರೆ ಸಾಧ್ಯ. ಏಕೆಂದರೆ, ಗ್ರಾಮಗಳಲ್ಲಿ ಅಧಿಕಾರ ಹಿಡಿದವರೆಲ್ಲರೂ ಹಣವಂತರು. ಇವರು ಬಡವರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬೆಳೆಸಿಕೊಳ್ಳುತ್ತಾರೆ. ನೀವ್ಯಾರು ಗ್ರಾಮಸಭೆಗೆ ಬರಬೇಡಿ ನಿಮ್ಮ ಕೆಲಸ ಮಾಡಿಕೊಡುತ್ತೇನೆ ಎನ್ನುತ್ತಾರೆ. ಡಾ॥ ಪಾಟೀಲ ಪುಟ್ಟಪ್ಪನವರ ಬದುಕುವ ಮಾತು ಬರಹ 'ಒಳ್ಳೆಯದನ್ನು ಮಾಡುವುದೇ ನಿಜವಾದ ಮನುಷ್ಯ ಧರ್ಮ' ಇಂದಿನ ಕಲಿಯುಗದ ಕಲಿಕೆಗಳಿಗೆ ಚನ್ನಾಗಿ ಅರ್ಥವಾಗಲಿ ಮನುಜ–ಮನುಜರೆಲ್ಲರು ಒಂದೇ ಗಾಳಿ, ನೀರು, ಸೇವಿಸಿದ ವ್ಯಕ್ತಿಗಳು ಹಿಂದಿನ ಕಾಲದಂತೆ ಬದುಕಬೇಕು. ಮುಖಪುಟ ವರದಿ 'ನವೀಕರಿಸಬಹುದಾದ ಇಂಧನಗಳು' ಬರಹ ತುಂಬಾ ವಿಚಾರದಿಂದ ಕೂಡಿದೆ. ಇಂತಹ ಬರಹ ಎಲ್ಲರಿಗೂ ತೃಪ್ತಿಯಾಗಲಿ. ಅವಶ್ಯಕ ಸಾಮಗ್ರಿಯಾದ ಇಂಧನ ಎಲ್ಲರಿಗೂ ಬೇಕಾದದ್ದು.

– **ರಾಜೇಂದ್ರ ಹೆಗಡೆ ಹಾವೇರಿ,** ಕಂದಾಯ ಇಲಾಖೆ, ಮಂಜುನಾಥನಗರ,
ಇಜಾರಿಲಕಮತೂರು ಗ್ರಾಮ, ಹಾವೇರಿ – 581110

ಡಾ॥ ಅಮಿತಾ ಪ್ರಸಾದ್ ಹಾಗೂ ಡಾ॥ ಶಾಲಿನಿ ರಜನೀಶ್ ಅವರ ಸಾರಥ್ಯದಲ್ಲಿ ಮೂಡಿಬರುತ್ತಿರುವ ಪತ್ರಿಕೆ ಉಪಯುಕ್ತ ಮಾಹಿತಿ, ಸುತ್ತೋಲೆಗಳೊಂದಿಗೆ ಗ್ರಾಮಾಭಿವೃದ್ಧಿಯ ದಿಶೆಯಲ್ಲಿ ಗಮನಾರ್ಹ ಲೇಖನಗಳಿಂದ ನಮಗೆಲ್ಲ ಅನುಕೂಲಕರ ಮಾಹಿತಿ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಆದರೆ ಈ ಎಲ್ಲಾ ಸೌಲಭ್ಯ ಹಾಗೂ ಸುತ್ತೋಲೆಗಳಲ್ಲಿಯ ಆದೇಶಗಳನ್ನು ಎಷ್ಟರಮಟ್ಟಿಗೆ ಈ ಪಂಚಾಯತಿಯ ಕಾರ್ಯದರ್ಶಿ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸುತ್ತಿದ್ದಾರೆ ಎಂಬುದು ಇದಕ್ಕಿಂತಲೂ ಮುಖ್ಯವಾದ ಸಂಗತಿಯಾಗಿದ್ದು ಈ ಕುರಿತು ವಿಶೇಷ ಗಮನಹರಿಸಿ ಸಂಪೂರ್ಣ ಕಾರ್ಯರೂಪಕ್ಕೆ ತರುವಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ. ಇಂಥ ಕ್ರಮ ತಾವು ತೆಗೆದುಕೊಂಡು ತಮ್ಮ ಈ ಆಶಾದಾಯಕ 'ಕರ್ನಾಟಕ ವಿಕಾಸ' ಪತ್ರಿಕೆಯಲ್ಲಿ ಲೇಖನಗಳ ಕಾರ್ಯವಾಸ್ತವದಲ್ಲಿ ಕಾರ್ಯರೂಪಕ್ಕೆ ಬರುವಂತಾಗಿ ನಾಡು ಮತ್ತು ಜನತೆ ಪ್ರಗತಿ ಹೊಂದುವಂತಾಗಲೆಂದು ಕೋರುವೆ, ಧನ್ಯವಾದಗಳು.

– **ಅನುರಾಧಾ ಶ್ರೀ ಜೋಶಿ,** ಅನವಾಲ ಅಂಚೆ, ಬಾಗಲಕೋಟೆ ಜಿಲ್ಲೆ.

ನವೀಕರಿಸಬಹುದಾದ ಇಂಧನಗಳ ಕಿರು ಯೋಜನೆಯ ಕುರಿತು ಮುಖಪುಟ ವರದಿಯು ಡಿಸೆಂಬರ್ 2011ರ ಪತ್ರಿಕೆಯಲ್ಲಿ ಸುಂದರವಾಗಿ ಮೂಡಿಬಂದಿದೆ. ವರದಿಯಲ್ಲಿನ ಮಾಹಿತಿಗಳು, ಗ್ರಾಮೀಣ ಜನರ ತಿಳುವಳಿಕೆ ಹೆಚ್ಚಿಸುವಲ್ಲಿ ಸಂದೇಹವಿಲ್ಲ. ಇಂತಹ ಮಹತ್ವದ ಮಾಹಿತಿಗಳನ್ನು ಜನರಿತೆ ಪತ್ರಿಕೆ ಮೂಲಕ ತಲುಪಿಸುತ್ತಿರುವ ಇಲಾಖೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

– **ರವಿಶಂಕರ್ ಬಿ.ಎ.** ನಂ. 19, ಸಪ್ತಗಿರಿ ನಿವಾಸ, 16ನೇ ಅಡ್ಡರಸ್ತೆ,
ಬಾಗಲಗುಂಟೆ, ಬೆಂಗಳೂರು – 560 073.

ಎನ್. ಅನುರಾಧ ಇವರ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಮಹಿಳೆಯರ ಸಬಲೀಕರಣ ಲೇಖನವು ಡಿಸೆಂಬರ್ ಮಾಹೆಯ ಪತ್ರಿಕೆಯು ಮಹತ್ವವನ್ನು ಇಮ್ಮಡಿಗೊಳಿಸಿದೆ. ಇಂತಹ ಲೇಖನಗಳು ಪತ್ರಿಕೆಗೆ ತುಂಬಾ ಅವಶ್ಯಕವಾಗಿವೆ. ಮುಂದೆಯೂ ಇಂತಹ ಲೇಖನಗಳ ಪ್ರಕಟಣೆಗೆ ಆದ್ಯತೆ ನೀಡುವಂತೆ ಸಂಪಾದಕರಲ್ಲಿ ಸವಿನಯ ಪ್ರಾರ್ಥನೆ. ಮಹಿಳೆಯರ ಕುರಿತು ಇಂತಹ ವಿಚಾರಪೂರ್ಣ ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

– **ಭವಾನಿ ಶಂಕರ್,** ಸಿ. ರೇಷ್ಮೆ ಕಛೇರಿ, ಆನೇಕಲ್ ರಸ್ತೆ, ಅತ್ತಿಬೆಲೆ, ಬೆಂಗಳೂರು ನಗರ ಜಿಲ್ಲೆ.

ಸಚಿವಾಲಯದಿಂದ ಸಂದೇಶ



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

ಪ್ರಿಯ ಬಂಧುಗಳೇ,

ಹೊಸ ಭರವಸೆ ಚಿಗುರುತಲಿವೆ
ಎಲೆಯುದುರಿದ ಕೊಂಬೆಗೆ
ಅರಳಿ ನಗುವ ಹೂಗಳಲ್ಲಿ
ಪುಟಿಯುತಲಿದೆ ನಂಬಿಕೆ.

– ಡಾ॥ ಜಿ.ಎಸ್. ಶಿವರುದ್ರಪ್ಪ, ರಾಷ್ಟ್ರಕವಿ

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು 1999 ರಿಂದ ಅನುಷ್ಠಾನಗೊಳಿಸುತ್ತಿದ್ದರೂ ಸಹ ನಿರೀಕ್ಷಿತ ಮಟ್ಟದಲ್ಲಿ ಬಡತನ ನಿರ್ಮೂಲನೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ದೇಶಾದ್ಯಂತ ಎಸ್‌ಜಿಎಸ್‌ವೈ ಕಾರ್ಯಕ್ರಮವನ್ನು ಪುನರ್ ರಚಿಸಿ ನ್ಯಾಷನಲ್ ರೂರಲ್ ಲೈವ್ಲಿ ಹುಡ್ ಮಿಷನ್ (ಎನ್‌ಆರ್‌ಎಲ್‌ಎಂ) ಜಾರಿಗೆ ತರಲು ಉದ್ದೇಶಿಸಿದೆ. ತನ್ಮೂಲಕ ನಮ್ಮ ರಾಜ್ಯದಲ್ಲಿಯೂ ಸಹ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಆರಂಭಿಸಲು ಹೆಜ್ಜೆ ಇಡಲಾಗಿದೆ. ಈ ಅಭಿಯಾನದಲ್ಲಿ ಇಲ್ಲಿಯವರೆವಿಗೂ ಜಾರಿಯಲ್ಲಿರುವ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ಪಡೆದುಕೊಂಡ ಅನುಭವಗಳನ್ನು ಗಮನದಲ್ಲಿಟ್ಟು ಕೊಂಡು ಗ್ರಾಮೀಣ ಪ್ರದೇಶದ ಬುಡಮಟ್ಟದ ಜನರನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಹೊಸ ಆಜೀವಿಕ ಅಭಿಯಾನವನ್ನು ವಿನೂತನವಾಗಿ ಪ್ರಾರಂಭಿಸಲಾಗುತ್ತಿದೆ.

ಬಡ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವಿಧ ಹಂತಗಳಲ್ಲಿ ಆಯಾ ಸಂಸ್ಥೆಗಳನ್ನು ನಿರ್ಮಿಸಿ ಮತ್ತು ಮುಂದುವರೆಸಲು ಅನುಕೂಲವಾಗುವಂತಹ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ರಾಷ್ಟ್ರೀಯ ಮಟ್ಟದಿಂದ ಜಿಲ್ಲೆ ಹಾಗೂ ಅದಕ್ಕೆ ಕೆಳಗಿನ ಹಂತದವರೆಗೆ ಒಂದು ಪ್ರತ್ಯೇಕ ಮತ್ತು ಸೂಕ್ಷ್ಮಗ್ರಾಹಿ ಬೆಂಬಲ ಸಂಸ್ಥೆಯನ್ನು ಸ್ಥಾಪಿಸುವ ಪ್ರಾಥಮಿಕ ಉದ್ದೇಶವನ್ನು ಹೊಂದಿರುವಂತಹ ಅಭಿಯಾನವಾಗಿ ಎನ್‌ಆರ್‌ಎಲ್‌ಎಮ್‌ನ್ನು ಪರಿಕಲ್ಪಿಸ ಲಾಯಿತು. ಪ್ರತಿ ಆಡಳಿತ ಮಟ್ಟದಲ್ಲಿರುವ ಬೆಂಬಲ ಸಂಸ್ಥೆಗಳಲ್ಲಿ ಮೂಲ ಭೂತ ಬದಲಾವಣೆಗಳನ್ನು ತರಲು ಹಾಗೂ ಗ್ರಾಮೀಣ ಬಡಜನರ ಬದುಕಿನ ಗುಣಮಟ್ಟವನ್ನು ಸುಧಾರಿಸುವ ಪ್ರಕ್ರಿಯೆ ಉದ್ದೇಶಿತ ಸುಧಾರಣೆಗಳನ್ನು ಜಾರಿಗೆತರಲು ಈ ಮಿಶನ್ ಉದ್ದೇಶಿಸಿರುತ್ತದೆ.

ಈ ಅಭಿಯಾನದ ಪ್ರಮುಖ ಲಕ್ಷಣವೆಂದರೆ ಸ್ವಯಂ ನಿರ್ವಹಣೆ ಮಾಡಬಹುದಾದ ಸಾಂಸ್ಥಿಕ ವೇದಿಕೆಗಳನ್ನು ನಿರ್ಮಿಸಲು ಗ್ರಾಮೀಣ ಬಡಜನರನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲ ಸಂಸ್ಥೆಗಳನ್ನು ಸ್ಥಾಪಿಸುವುದಾಗಿರುತ್ತದೆ. ಈ ಸಾಂಸ್ಥಿಕ ರೂಪದ ವೇದಿಕೆಗಳು, ಗುಂಪುಗಳು, ಒಕ್ಕೂಟಗಳು ಮತ್ತು ಉತ್ಪಾದಕ ಗುಂಪುಗಳಾಗಿದ್ದು ಇವು ಎನ್‌ಆರ್‌ಎಲ್‌ಎಮ್ ಸಂಪನ್ಮೂಲ

ಗಳನ್ನು ಒಳಗೊಂಡಂತೆ ವಿವಿಧ ಆರ್ಥಿಕ ಮತ್ತು ತಾಂತ್ರಿಕ ಸೇವೆಗಳನ್ನು ಎನ್‌ಆರ್‌ಎಲ್‌ಎಮ್ ಮಾದರಿಯ ಇತರ ಸರಕಾರಿ ಕಾರ್ಯಕ್ರಮಗಳಿಂದ ಪಡೆಯುತ್ತವೆ ಮತ್ತು ಮುಖ್ಯವಾಗಿ ವಾಣಿಜ್ಯ ಬ್ಯಾಂಕುಗಳಿಂದ ಸಾಲವನ್ನು ಪಡೆಯುತ್ತವೆ. ಇದರಿಂದ ಬಡಜನರಿಗೆ ಮಾರುಕಟ್ಟೆಯನ್ನು ತಲುಪಲು ಬಂಡವಾಳ ಹಾಗೂ ಸಾಮರ್ಥ್ಯಗಳನ್ನು ನೀಡುತ್ತದೆ ಮತ್ತು ಸಬಲೀಕರಣ ಮತ್ತು ಗುಂಪು ಬೆಂಬಲದಿಂದ ಅಂತಿಮ ಘಟ್ಟದವರೆಗೆ ಸೇವೆ ಪಡೆಯುವುದನ್ನು ಖಚಿತಗೊಳಿಸುತ್ತದೆ.

ಎನ್‌ಆರ್‌ಎಲ್‌ಎಮ್ ಅಡಿಯಲ್ಲಿ ಈ ಮಿಶನ್ ಈಗಿನ ಹಣ ಹಂಚಿಕೆ ಉಪಾಯವನ್ನು ಬಿಟ್ಟು ಬೇಡಿಕೆ ಆಧಾರಿತ ಉಪಾಯಕ್ಕೆ ವರ್ಗಾವಣೆಗೊಳಿಸುತ್ತದೆ ಮತ್ತು ಇದರಿಂದ ರಾಜ್ಯಗಳಿಗೆ ಸ್ಥಳೀಯ ಅಂಶಗಳನ್ನ ಗಣನೆಗೆ ತೆಗೆದುಕೊಂಡು ತಮ್ಮದೇ ಆದ ಬಡತನ ನಿರ್ಮೂಲನಾ ಕ್ರಿಯಾ ಯೋಜನೆಗಳನ್ನು ರೂಪಿಸಿಕೊಳ್ಳಲು ಸ್ವಾತಂತ್ರ್ಯ ನೀಡುತ್ತದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನಕ್ಕಾಗಿ ಈ ಕೆಳಕಂಡ ಮೂರು ಪ್ರಮುಖ ಅಂಶಗಳ ಅಧಾರದ ಮೇಲೆ ಉಪಾಯವನ್ನು ರೂಪಿಸಲಾಗಿದೆ.

- ಸಾಮಾಜಿಕ ಸೇರ್ಪಡೆ (ಬಡ ಜನರನ್ನು ಜೊತೆಗೂಡಿಸಿ ಅವರ ಸಂಸ್ಥೆಗಳನ್ನು ನಿರ್ಮಿಸುವುದು)
- ವಿತ್ತೀಯ ಸೇರ್ಪಡೆ (ಬ್ಯಾಂಕ್ ಸಂಪರ್ಕಗಳು, ವಿತ್ತೀಯ ಅರಿವು ಮತ್ತು ಬ್ಯಾಂಕುಗಳಿಲ್ಲದ ಪ್ರದೇಶಗಳಲ್ಲಿ ಬ್ಯಾಂಕ್ ಸೌಲಭ್ಯ)
- ಆರ್ಥಿಕ ಸೇರ್ಪಡೆ (ಜೀವನೋಪಾಯಗಳ ಪ್ರೋತ್ಸಾಹ)

ಇತರ ರಾಜ್ಯಗಳ ಅಭಿಯಾನದ ಅನುಭವ, ಬೆಂಬಲ ಮತ್ತು ಅಭಿಯಾನದ ವಾಸ್ತವಾಂಶಗಳನ್ನು ನಮಗೆ ಅರಿತುಕೊಳ್ಳಲು ಮತ್ತು ಈ ಕಾರ್ಯಕ್ರಮವನ್ನು ಇನ್ನೂ ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ ಎಂಬ ಆಶಯ ಹೊಂದಿರುತ್ತೇವೆ.

ಆಜೀವಿಕ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಆರಂಭಿಕವಾಗಿ ಬೆಳಗಾವಿ ಜಿಲ್ಲೆಯ ತಾಲ್ಲೂಕಗಳಾದ ಅಥಣಿ, ಗೋಕಾಕ, ಸೌದತ್ತಿ, ಹುಕ್ಕೇರಿ, ಧಾರವಾಡ ಜಿಲ್ಲೆಯ ಕಲಘಟಗಿ, ಕುಂದಗೋಳ, ನವಲಗುಂದ ಗುಲಬರ್ಗಾ ಜಿಲ್ಲೆಯ ಗುಲಬರ್ಗಾ, ಜೇವರ್ಗಿ, ಸೇಡಂ, ಆಳಂದ, ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ. ನರಸೀಪುರ ಹಾಗೂ ತುಮಕೂರು ಜಿಲ್ಲಾ ವ್ಯಾಪ್ತಿಯ ಗುಬ್ಬಿ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ ತಾಲ್ಲೂಗಳಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಬಡಜನರ ಸಂಸ್ಥೆಗಳನ್ನು ನಿರಂತರವಾಗಿ ಬೆಂಬಲಿಸಿ, ಸದೃಢಗೊಳಿಸಿ ಮತ್ತು ಸಬಲಗೊಳಿಸಬೇಕೆಂಬುದು ನಮ್ಮ ಪ್ರಾಮಾಣಿಕ ಪ್ರಯತ್ನವಾಗಿದ್ದು ಇದರಿಂದ ಅವರುಗಳ ಜೀವನೋಪಾಯಗಳು ಉತ್ತಮಗೊಳ್ಳುವಲ್ಲಿ ಪರಿಣಾಮಕಾರಿ ಕೊಡುಗೆಗಳನ್ನು ನೀಡಲು ಸಾಧ್ಯವಾಗುತ್ತದೆ. ಬಡಜನರು ತಮ್ಮ ಬಡತನದಿಂದ ಹೊರಬರಲು ಮತ್ತು ಉತ್ತಮ ಗುಣಮಟ್ಟದ ಜೀವನ ಬಾಳಲು ನಡೆಸುವ ಎಲ್ಲ ಪ್ರಯತ್ನಗಳಿಗೆ ಇದೇ ಚಾಲನಾ ಶಕ್ತಿಯಾಗಿರುತ್ತದೆ.

ರಾಜ್ಯದಲ್ಲಿನ ಅತಿ ಬಡವರು ಮತ್ತು ತೊಂದರೆಗೊಳಗಾಗಿರುವ ಜನರ ವಿತ್ತೀಯ ಹಾಗೂ ಆರ್ಥಿಕ ಸೇರ್ಪಡೆಗಳನ್ನು ಸಾಧಿಸಲು ಕಾರಣವಾಗುವ ಎನ್‌ಆರ್‌ಎಲ್‌ಎಮ್ ಯೋಜನೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಆಜೀವಿಕ ಯೋಜನೆಯ ಅನುಷ್ಠಾನದ ಸಾಧಕ–ಬಾಧಕಗಳ ವಾಸ್ತವಾಂಶಗಳನ್ನು ಅರಿತು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಿ ಯೋಜನೆಯನ್ನು ಜಾರಿಗೆ ತರುವ ಉದ್ದೇಶವಿದೆ. ಆದ್ದರಿಂದ ಪ್ರಥಮ ಹಂತದ ತಾಲ್ಲೂಕುಗಳ ಪಂಚಾಯತ್ ರಾಜ್ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಈ ಯೋಜನೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಯೋಜನೆಯ ಯಶಸ್ಸಿಗೆ ಶ್ರಮಿಸಲು ಆಶಿಸುತ್ತೇನೆ.

**ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.**

(ಡಾ. ಅಮಿತಾ ಪ್ರಸಾದ್)

ಕಾರ್ಯದರ್ಶಿಗಳ ಆಶಯ



ಡಾ. ಶಾಲಿನಿ ರಜನೀಶ್, ಐ.ಎ.ಎಸ್.

ಪಂಚಾಯತ್ ರಾಜ್ ಸಂಸ್ಥೆ ಒಂದು ಬೃಹತ್ ಸಂಸ್ಥೆಯಾಗಿದ್ದು, ಇದರಡಿ ಸಮಾಜದ ಕಟ್ಟ ಕಡೆಯ ಅವಶ್ಯಕತೆ ಇರುವ ಸಾಮಾನ್ಯ ಜನರಿಗೆ ಈ ಸಂಸ್ಥೆಯ ಮೂಲಕ ಅವನ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧಿಸಲು ಮತ್ತು ಆತನು ಸಬಲತೆ ಹೊಂದಿ ಒಂದು ಹಂತಕ್ಕೆ ಬರಲು ಸಹಾಯ ಕಲ್ಪಿಸುವ ಮಹತ್ ಉದ್ದೇಶ ಇಟ್ಟುಕೊಂಡಿದೆ.

# ಬೀದರ್ – ಒಂದು ಭೇಟಿಯ ಸುತ್ತ .... ಅಭಿವೃದ್ಧಿ ಎಂದರೆ ಹೇಗಿರಬೇಕು?

ವಿಕೇಂದ್ರೀಕರಣ ತತ್ವದ ಹಿನ್ನೆಲೆಯಲ್ಲಿ ಅಧಿಕಾರ, ಅನುದಾನ ಹಾಗೂ ಆಡಳಿತದ ಕಾರ್ಯಕಲಾಪಗಳು ನಮ್ಮ ರಾಜ್ಯದ ಮೂರು ಹಂತದ ಪಂಚಾಯತ್ ವ್ಯವಸ್ಥೆಯಲ್ಲಿ ಆಚರಣೆಯಲ್ಲಿದ್ದು, ದೇಶದಲ್ಲೇ ಮಾದರಿಯಾಗಿರುವುದು ನಮ್ಮೆಲ್ಲರ ಹೆಮ್ಮೆಯ ವಿಷಯ. ಸ್ಥಳೀಯ ಸರ್ಕಾರಗಳೆಂದೇ ಗುರುತಿಸಲ್ಪಟ್ಟಿರುವ ರಾಜ್ಯದ ಗ್ರಾಮ ಪಂಚಾಯತ್‌ಗಳಿಗೆ ಅಭಿವೃದ್ಧಿಗಾಗಿ ಕೇಂದ್ರ, ರಾಜ್ಯ ಹಾಗೂ ವಿದೇಶಿ ನೆರವಿನ ಮೂಲಕ ಅನುದಾನ ಮೊದಲಿಗಿಂತಲೂ ಬೃಹತ್ ಪ್ರಮಾಣದಲ್ಲಿ ಹರಿದು ಬರುತ್ತಿದ್ದು ಇವೆಲ್ಲದರ ಸಮರ್ಪಕ ನಿರ್ವಹಣೆಗಾಗಿ ರಾಜ್ಯದ ಪ್ರತೀ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಲು 'ಪಂಚಾಯತ್ ಅಭಿವೃದ್ಧಿ ಅಧಿಕಾರಿ' ಎಂಬ ಹುದ್ದೆಯನ್ನು ಸೃಜಿಸಿ, ಸ್ಥಳೀಯ ವಿದ್ಯಾವಂತ ಅಭ್ಯರ್ಥಿಗಳನ್ನು ಪಾರದರ್ಶಕವಾಗಿ ಆಯ್ಕೆಮಾಡಿ, ಯುವ ಸಮುದಾಯದ ಈ ಕ್ರಿಯಾಶೀಲ ಯುವ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಸೂಕ್ತ ತರಬೇತಿ/ನಿರ್ದೇಶನಗಳನ್ನು ನೀಡುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸದುದ್ದೇಶಗಳನ್ನು, ನಾವಿಲ್ಲಿ ಗಮನಿಸಬಹುದಾಗಿದೆ.

ಸರ್ಕಾರದ ಈ ಬೃಹದಾಕಾಂಕ್ಷಿ ಆಶಯಗಳಿಗೆ ಕಪ್ಪು ಚುಕ್ಕೆಯಂತೆ ರಾಜ್ಯದ ಅಲ್ಲಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ) ಹಾಗೂ ಸ್ಥಳೀಯ ಚುನಾಯಿತ



ಪಿ.ಡಿ.ಓ.ಗೆ ಶ್ರದ್ಧಾಂಜಲಿ ಅರ್ಪಿಸುತ್ತಿರುವ ಸಚಿವರು ಹಾಗೂ ಗಣ್ಯರು

* ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.



ದುಃಖತಪ್ತ ಕುಟುಂಬದವರಿಗೆ ಸಾಂತ್ವನ ಹೇಳುತ್ತಿರುವ ಸಚಿವರು

ಪ್ರತಿನಿಧಿಗಳು/ಸದಸ್ಯರೊಂದಿಗೆ ಸಮನ್ವಯದ ಕೊರತೆಯಿಂದಾಗಿ ತಿಕ್ಕಾಟಗಳುಂಟಾಗಿ ಕೆಲವು ಅಹಿತಕರ ಘಟನೆಗಳು ನಡೆದಿರುವುದು ನಿಜಕ್ಕೂ ವಿಷಾದದ ಸಂಗತಿ.

ಈ ಗಂಭೀರ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಿದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಿನಾಂಕ 29.11.2011 ರಂದು ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್, ಬೀದರ್ ಇಲ್ಲಿ ನಡೆಸಿದ ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಮನ್ವಯ ಸಭೆಯಲ್ಲಿ ನಾನು ಸಹ ಪಾಲ್ಗೊಂಡಿದ್ದೆ. ಸಮಸ್ಯೆಗಳ ಬಗ್ಗೆ ಗಹನವಾದ ಚರ್ಚೆ ನಡೆಸಿ ಸರ್ಕಾರದ ವತಿಯಿಂದ ಕೆಲವು ಸ್ಪಷ್ಟನೆಗಳನ್ನು ಮಾನ್ಯ ಸಚಿವರು ನೀಡುತ್ತಾ ಇಡೀ ದೇಶದಲ್ಲಿಯೇ ಗ್ರಾಮ ಪಂಚಾಯತಿಗಳನ್ನು ಉನ್ನತ ದರ್ಜೆಗೆ ಏರಿಸುವ ನಿಟ್ಟಿನಲ್ಲಿ ಮತ್ತು ಗ್ರಾಮಾಂತರ ಭಾಗದಲ್ಲಿ ವಾಸಿಸುವ ಜನರಿಗೆ ಉತ್ತಮ ಸೌಲಭ್ಯಗಳನ್ನು ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಮಾಡಲಾಗಿದ್ದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಬಂದವರು. ಉನ್ನತ ಪದವಿ ಪಡೆದುಕೊಂಡು ಬಂದಿರುತ್ತಾರೆ. ಅವರಿಗೆ ಸರಿಯಾದ ರೀತಿಯಲ್ಲಿ ತರಬೇತಿ ನೀಡಲಾಗಿರುತ್ತದೆ. ಕೆಲಸಗಳು ಉತ್ತಮ ರೀತಿಯಲ್ಲಿ ಮಾಡಿಕೊಂಡು ಬರುತ್ತಿದ್ದಾರೆ ಆದರೆ ಕೆಳ ಹಂತದಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಕೆಲವೊಂದು ಕಡೆ ತೊಂದರೆಗಳು, ಜನಪ್ರತಿನಿಧಿಗಳ ಒತ್ತಡಗಳು ಬರುತ್ತಿವೆ ಎಂಬುದು ನನ್ನ ಗಮನಕ್ಕೆ ಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು.

ಇತ್ತೀಚೆಗೆ ಆತ್ಮಹತ್ಯೆಗೆ ಶರಣಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ವಿಜಯಕುಮಾರ ಸೂರ್ಯವಂಶಿಯವರ ಮನೆಗೆ ಭೇಟಿ ನೀಡಿ ಅವರ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳುತ್ತಾ "ಈ ತರಹದ ಘಟನೆ ಮುಂದೆ ಯಾವ ಕಾರಣಕ್ಕೂ, ರಾಜ್ಯದ ಯಾವ ಭಾಗದಲ್ಲಿಯೂ ಆಗಬಾರದು. ಆತ್ಮಹತ್ಯೆಯಂತಹ ನಿರ್ಧಾರ ಯಾರಿಗೂ ಶೋಭೆ ತರುವಂತದಹದಲ್ಲ. ಅಲ್ಲದೆ ಅದು ಇರುವ ಸಮಸ್ಯೆಗೆ ಪರಿಹಾರವು ಅಲ್ಲ" ಎಂದು ತಿಳಿಸಿದರು. ಮುಂದುವರೆದು ಸಮಸ್ಯೆಗಳು ಇದ್ದಲ್ಲಿ ನೇರವಾಗಿ ತಮ್ಮ ಗಮನಕ್ಕೆ ಅಥವಾ ಉನ್ನತ ಅಧಿಕಾರಿಗಳ ಗಮನಕ್ಕೆ ತಂದು ಎಲ್ಲರೂ ಕುಳಿತುಕೊಂಡು ತಿಳಿವಳಿಕೆಯಿಂದ ಬಗೆಹರಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಪಿ.ಡಿ.ಓ. ರವರು ಹೊಸಬರಾಗಿದ್ದು, ಹೊಸ ವಾತಾವರಣದಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ತೊಂದರೆಗಳು ಬರುವುದು ಸಹಜವಾಗಿದ್ದು, ತೊಂದರೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡು ಆಡಳಿತದಲ್ಲಿ ಸರಳೀಕರಣ ಮಾಡಲಾಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೇಲೆ ಒತ್ತಡಗಳು ಬಂದ ಹಿನ್ನೆಲೆಯಲ್ಲಿ ಈಗಾಗಲೆ ರಾಜ್ಯ ಮಟ್ಟದಲ್ಲಿ ದಿನಾಂಕ : 14–10–2011ರಂದು ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಮಾವೇಶ ಕರೆದು ಸೂಕ್ತ ಸೂಕ್ಷ್ಮ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಈ ನಿಟ್ಟಿನಲ್ಲಿ ತಾಲೂಕುವಾರು ಸಭೆಯನ್ನು ಆಯೋಜಿಸಿ ಸೂಕ್ತ ತಿಳಿವಳಿಕೆ ನೀಡಲು ಸುತ್ತೋಲೆ ಹೊರಡಿಸಲಾಗಿದೆ ಎಂದು ತಿಳಿಸಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಬರುವ ದಿವಸಗಳಲ್ಲಿ ಹೆಚ್ಚಿನ ತರಬೇತಿಗೆ ಒಳಪಡಿಸುವ ಉದ್ದೇಶ ಸರ್ಕಾರ ಹೊಂದಿದ್ದು, ಯಾರು ಒತ್ತಡಗಳಿಗೆ ಹೆದರದೆ ಮುಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳಾದ ಗ್ರಾಮ ಪಂಚಾಯತ್/ ತಾಲೂಕು ಪಂಚಾಯತ್/ಜಿಲ್ಲಾ ಪಂಚಾಯತ್‌ರವರು ಪಂಚಾಯತಿಯ ಸಿಬ್ಬಂದಿ/ಅಧಿಕಾರಿ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸೌಹಾರ್ದ ವಾತಾವರಣದಲ್ಲಿ ಗ್ರಾಮೀಣಾಭಿವೃದ್ಧಿಯ ಕನಸನ್ನು ನನಸಾಗಿ ಮಾಡಲು ಎಲ್ಲರು ಕೆಲಸ ನಿರ್ವಹಿಸಲು ಪಣ ತೊಡಬೇಕಾಗಿದೆ ಎಂದು ಸಭೆಗೆ ತಿಳಿಸುತ್ತ ಅದರಂತೆ ಕೆಲಸ ನಿರ್ವಹಿಸುವ ಭರವಸೆ ಇಟ್ಟುಕೊಂಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಡಿ.ಡಿ.ಓ.ಗಳು ಮಾತನಾಡುತ್ತಾ "ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುವ ಉದ್ದೇಶವಿಟ್ಟುಕೊಂಡು, ಗ್ರಾಮೀಣ ಜನತೆಯ ಆಶೋತ್ತರಗಳಿಗೆ ನಿಜವಾದ ಕಳಕಳಿಯಿಂದ ಸ್ಪಂದಿಸಿ ಪರಿಹಾರೋಪಾಯಗಳತ್ತ ಕೆಲಸ ನಿರ್ವಹಿಸುವುದೇ ನಮ್ಮ ಮುಲ ಉದ್ದೇಶವಾಗಿದೆ. ಆದರೆ ತಮಗೆ ಸೇವೆ ಸಲ್ಲಿಸುವ ಸಮಯದಲ್ಲಿ ಸೂಕ್ತ ರಕ್ಷಣೆಯ ಅವಶ್ಯಕತೆಯಿದೆ" ಎಂದು ಮಾನ್ಯ ಸಚಿವರಲ್ಲಿ ತಮ್ಮ ಅಳಲನ್ನು ತಿಳಿಸಿದರು.

ಮಾನ್ಯ ಸಚಿವರು, ಚುನಾಯಿತ ಸದಸ್ಯರು ಹಾಗೂ ಪಿ.ಡಿ.ಓ.ಗಳೊಂದಿಗೆ ನಡೆದ ಚರ್ಚೆಯಲ್ಲಿ ಚರ್ಚಿತವಾದ ಹಲವಾರು ಅಂಶಗಳ ಬಗ್ಗೆ ಒಟ್ಟಾರೆಯಾಗಿ ನನ್ನ ಅಭಿಪ್ರಾಯಗಳನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಪಂಚಾಯತ್ ರಾಜ್ ಸಂಸ್ಥೆ ಒಂದು ಬೃಹತ್ ಸಂಸ್ಥೆಯಾಗಿದ್ದು, ಇದರಡಿ ಸಮಾಜದ ಕಟ್ಟ ಕಡೆಯ ಅವಶ್ಯಕತೆ ಇರುವ ಸಾಮಾನ್ಯ ಜನರಿಗೆ ಈ ಸಂಸ್ಥೆಯ ಮೂಲಕ ಅವನ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಸಾಧಿಸಲು ಮತ್ತು ಆತನು ಸಬಲತೆ ಹೊಂದಿ ಒಂದು ಹಂತಕ್ಕೆ ಬರಲು ಸಹಾಯ ಕಲ್ಪಿಸುವ ಮಹತ್ ಉದ್ದೇಶ ಇಟ್ಟುಕೊಂಡು ಈ ಸಂಸ್ಥೆ ಸ್ಥಾಪನೆ ಮಾಡಲಾಗಿದೆ. ಆದ್ರೆ ಸೌಲಭ್ಯ ಪಡೆಯುವ ನಾಗರಿಕರ ಪ್ರಮಾಣ ಹೆಚ್ಚಿನದಾಗಿದ್ದು ಸೌಲಭ್ಯಗಳನ್ನು ಒದಗಿಸುವವರು ಅಂದರೆ ಸರ್ಕಾರಿ ನೌಕರರ ಪ್ರಮಾಣ 2% ಇದ್ದು ಇದನ್ನು ಸರಿದೂಗಿಸುವ ಸಂಬಂಧ ಜನಪ್ರತಿನಿಧಿಗಳ ಸಹಕಾರ ಮುಖ್ಯವಾಗಿರುತ್ತದೆ.

ಈ ಕೆಲಸ ನಿರ್ವಹಿಸುವುದರಿಂದ ತಮಗಾಗುವ ಲಾಭದ ಬಗ್ಗೆ ವಿಚಾರ ಮಾಡುವುದು ಮತ್ತು ನೌಕರರಾದವರು ತಾವು ಈ ಕೆಲಸ ಮಾಡುವುದರಿಂದ ತಮಗೆ ಹೆಚ್ಚಿನ ಲಾಭ ಏನು ಎಂಬ ವಿಚಾರವನ್ನೇ ಮಾಡುತ್ತ ಹೋಗಿರುವುದರ ಪ್ರಭಾವದಿಂದ ಘನ ಸರ್ಕಾರದ ಜನೋಪಯೋಗಿ ಯೋಜನೆಗಳ ಅನುಷ್ಠಾನ ಕುಂಠಿತವಾಗಿರುವುದು ಸರ್ಕಾರದ ಅಂದರೆ ಸಾರ್ವಜನಿಕ ಸೇವೆ ಮಾಡಲು ಅವಕಾಶ ಒದಗಿಬಂದಿದ್ದಕ್ಕೆ ಯಾವುದೇ ಪ್ರತಿಫಲಕ್ಕೆ ಅವಕಾಶ ನೀಡಿದೆ ಸಮಚಿತ್ತದಿಂದ ಕೆಲಸ ನಿರ್ವಹಿಸಿದಲ್ಲಿ ತೃಪ್ತಿ ಹೊಂದಿ ಸಕಲರ ಪ್ರಶಂಸೆಗೆ ಸಕಲರ ಪ್ರಶಂಸೆಗೆ ಪಾತ್ರರಾಗುವ ಅವಕಾಶ ಜತೆಯಲ್ಲಿ ಬರುತ್ತದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದವರೂ ತಾವು ಶೈಕ್ಷಣಿಕವಾಗಿ ಮುಂದುವರೆದಿದ್ದು ಸರ್ಕಾರದ ಸುತ್ತೋಲೆಗಳು, ನಿರ್ದೇಶನಗಳನ್ವಯ ಕೆಲಸ ನಿರ್ವಹಿಸುವುದು ತಮ್ಮ ಜವಾಬ್ದಾರಿ, ಜನಪ್ರತಿನಿಧಿಯಾದವರು ಯಾವಾಗಲೂ ತಮಗೆ ಲಾಭ ದೊರಕುವುದನ್ನೆ ಹೇಳುತ್ತಾರೆ. ಇವರಿಗೆ ಯಾವುದೇ ಅಭಿವೃದ್ಧಿ ಕನಸು ಇರುವುದಿಲ್ಲ ಎಂಬ ಭಾವನೆ ಇಟ್ಟುಕೊಂಡು ಕೆಲಸ ನಿರ್ವಹಿಸಿದಲ್ಲಿ ಮತ ಭೇದಗಳು ಉಂಟಾಗಿ ಕೊನೆಗೆ ಯಾವುದೇ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದೇ ಜನರಿಗೆ ಯಾವುದೇ ಲಾಭ ಆಗದೇ ದೈನಂದಿನ ಕಲಹ, ಗೊಂದಲ ಉಂಟಾಗಿ ಮಾನಸಿಕ ನೆಮ್ಮದಿ ಕೆಡಿಸಿಕೊಂಡು ಅನಾಹುತಗಳಿಗೆ ಕಾರಣಗಳಾಗುವ ಸಂಭವಗಳು ಬರುತ್ತವೆ. ಅದೇ ರೀತಿ ಒಬ್ಬರಿಂದ ಯಾವುದೆ ಕೆಲಸ ಸಾಧಿಸಲು ಸಾಧ್ಯವಿಲ್ಲ. ಎಲ್ಲರ ಸಹಕಾರವನ್ನು ಪಡೆದರೆ ಮಾತ್ರ ಕಷ್ಟದ ಕೆಲಸ ಸುಲಭವಾಗಿ ಸಾಧಿಸಬಹುದಾಗಿದೆ.

ಸಮಸ್ಯೆಗಳು ಬಂದಲ್ಲಿ ನೌಕರರು ತಮ್ಮ ಜನಪ್ರತಿನಿಧಿಗಳು ಕುಳಿತುಕೊಂಡು ಸಕಾರಾತ್ಮಕ ತಿಳುವಳಿಕೆಯಿಂದ ಮಾತನಾಡಿ ಇರುವ ಸಮಸ್ಯೆ ಬಗೆಹರಿಸಿ ಗ್ರಾಮ ಪಂಚಾಯತಿ ಏಳಿಗೆಗಾಗಿ ದುಡಿದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ನಾನು ದೊಡ್ಡವನು ಎಂಬ ಭಾವನೆಯನ್ನು ಬಿಟ್ಟು ನಾಗರಿಕರ ಸೇವೆ ಎಲ್ಲಕ್ಕಿಂತ ದೊಡ್ಡದು ಎಂದು ಪರಿಗಣಿಸಬೇಕು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬೃಹತ್ ಸಂಸ್ಥೆ ಅಡಿ 28 ಇಲಾಖೆಗಳು ಕೆಲಸ ನಿರ್ವಹಿಸುತ್ತಿದ್ದು, ಎಲ್ಲರ ಉದ್ದೇಶ ಮತ್ತು ಧ್ಯೇಯ ಒಂದೇ ಆಗಿದ್ದರೂ ಸಹ ಆಯಾ ಇಲಾಖೆಯವರ ಮಧ್ಯೆ ಸಮನ್ವಯ ಕೊರತೆಯಿಂದಾಗಿ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುತ್ತಿಲ್ಲ. ಈ ನಿಟ್ಟಿನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವಿವಿಧ ಇಲಾಖೆಯವರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕು.

ಗ್ರಾಮ ಪಂಚಾಯತ್ ಕರ ವಸೂಲಾತಿ ಪ್ರಗತಿ ತೀರ ಕಡಿಮೆ ಇದ್ದು ಕೇವಲ 15% ಮಾತ್ರ ಇರುತ್ತದೆ. ಈ ಬಗ್ಗೆ ದಿನಾಂಕ : 14-10-2011ರಂದು ಆಯೋಜಿಸಿದ ಕಾರ್ಯಗಾರದಲ್ಲಿ ತಿಳಿಸಿದಂತೆ ಒಬ್ಬ ಪಿ.ಡಿ.ಓ.ರವರಿಂದ ಕರ ವಸೂಲಾತಿ ಸಾಧ್ಯವಾಗುವುದಿಲ್ಲ ಪಂಚಾಯತಿಯ ಸದಸ್ಯರೆಲ್ಲರೂ ಕೂಡಿಕೊಂಡು ಜನರಿಗೆ ತಿಳುವಳಿಕೆ ನೀಡಿ ಕರವಸೂಲಾತಿ ಮಾಡಬೇಕು.

ಗ್ರಾಮ ಪಂಚಾಯತಿಗಳಲ್ಲಿ ಉತ್ತಮ ರೀತಿಯ ಕೆಲಸ ನಿರ್ವಹಿಸಿ ಪಂಚಾಯಿತಿಗೆ ಆಸ್ತಿಗಳ ಸೃಜನೆಯಂತಹ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ವಹಿಸಬೇಕು. ಕುಡಿಯುವ ನೀರಿನ ಸಮಸ್ಯೆ ಸಂಬಂಧ ಎಲ್ಲ ಪಂಚಾಯತಿಗಳಲ್ಲಿ ಸುಸ್ಥಿರ ಕುಡಿಯುವ ನೀರಿನ ಸರಬರಾಜು ಯೋಜನೆ ಇರುವಂತೆ ಕ್ರಮ ಜರುಗಿಸುವುದು. ಕುಡಿಯುವ ನೀರಿನ ಯೋಜನೆಗೆ ಯಾವುದೇ ಅನುದಾನದ ಕೊರತೆ ಇರುವುದಿಲ್ಲ. ಗ್ರಾಮ ಪಂಚಾಯತ್‌ಗಳಿಗೆ 56 ಸೌರ ಶಕ್ತಿಯನ್ನು ವಿದ್ಯುತ್/ನೀರಿನ ಪಂಪುಗಳನ್ನು ಒದಗಿಸಲು ಅವಕಾಶವಿದ್ದು ಐಆರ್‌ಇಪಿ ಅಭಿಯಂತರರು ಬೇಡಿಕೆ ಕಳುಹಿಸಬೇಕು ಅಲ್ಲದೆ LED ಬಲ್ಬುಗಳನ್ನು ಬಳಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ಈ ಬಗ್ಗೆ 1000LED ಬಲ್ಬು ಬಳಕೆಯ ಬೇಡಿಕೆ ಯಾವುದೊಂದು ಗ್ರಾಮ ಪಂಚಾಯಿತಿಯಿಂದ ಕಂಪನಿಗೆ ನೀಡಿದ್ದಲ್ಲಿ 1/3rd ನಷ್ಟು ಮಾತ್ರ ವಿದ್ಯುತ್ ಶುಲ್ಕ ಪಾವತಿಸಲು ಸುವರ್ಣ ಅವಕಾಶವಿದ್ದು ಅಂತಹ ದೊಡ್ಡ ಪ್ರಮಾಣದ ಗ್ರಾಮ ಪಂಚಾಯತಿರವರು ಮುಂದೆ ಬಂದಲ್ಲಿ ಸೌಲಭ್ಯ ಒದಗಿಸಲು ನಿರ್ದೇಶನ ನೀಡಲಾಗುವುದು.

ಸರ್ಕಾರದ ಮಾರ್ಗಸೂಚಿಯನುಸಾರ ಎಲ್ಲಾ ಯೋಜನೆಗಳು ಅನುಷ್ಠಾನ ಆಗಬೇಕಾಗಿದೆ. ಆದರೆ ಕೇವಲ ಮಾರ್ಗಸೂಚಿಗಳನ್ನು ಓದಿ ಅನುಸರಿಸುತ್ತ ಹೋದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತೊಂದರೆ ಯಾಗುತ್ತದೆ, ಈ ನಿಟ್ಟಿನಲ್ಲಿ ಸ್ಥಳೀಯ ಬೇಡಿಕೆಗಳನ್ನು ಪರಿಗಣಿಸಿ ಗ್ರಾಮ ಪಂಚಾಯಿತಿಗೆ ಆಸ್ತಿ ಸೃಜನೆಯನ್ನು ಗಮನದಲ್ಲಿಟ್ಟು ಕೊಂಡು ಬೇರೆ ಕಡೆಯ ಉತ್ತಮ ಉದಾಹರಣೆಗಳನ್ನು ತಿಳಿದುಕೊಳ್ಳುತ್ತಾ ಯೋಜನೆ ಹಮ್ಮಿಕೊಳ್ಳಬೇಕು.

ಎಲ್ಲರೂ ಬಿಚ್ಚು ಮನಸ್ಸಿನಿಂದ ಮುಂಚಿತವಾಗಿ ಚರ್ಚಿಸಿ ತಮ್ಮ ಪಂಚಾಯತಿಯ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಯಾವ ಯಾವ ಕೆಲಸಗಳು ಆಗಬೇಕು, ಯಾರು ಸರ್ಕಾರದ ಯೋಜನೆಗಳನ್ನು ಪಡೆಯಲು ಅರ್ಹರಿದ್ದಾರೆ. ಎಲ್ಲಿ ಯಾವ ಅಭಿವೃದ್ಧಿ ಕೆಲಸ ಆಗಬೇಕು. ಎಲ್ಲಿ ತೊಂದರೆಗಳು ಇವೆ ಎಂಬ ಬಗ್ಗೆ ಮುಂಚಿತವಾಗಿ ಮಾಹಿತಿ ಇಟ್ಟುಕೊಂಡು ಗ್ರಾಮ ಪಂಚಾಯತಿಯ ಸಂಪೂರ್ಣ ಅಭಿವೃದ್ಧಿಯ ಚಿತ್ರಣದ ಬಗ್ಗೆ ಕ್ರಿಯಾಯೋಜನೆ ತಯಾರಿಸಿ ಇಟ್ಟುಕೊಳ್ಳಬೇಕು. ಈ ನಿಟ್ಟಿನಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಗಮನಹರಿಸಬೇಕೆಂದು ತಿಳಿಸಿದರು.

* ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ವಸತಿ ರಹಿತರ ಪಟ್ಟಿ.
* ಯಾವ ಜಮೀನಿನಲ್ಲಿ ಮತ್ತು ಯಾರ ಜಮೀನಿನಲ್ಲಿ ಕೆಲಸಗಳು ಆದ್ಯತೆ ಮೇರೆಗೆ ಆಗಬೇಕು.
* ಎಲ್ಲಿ ಕಚ್ಚಾ ರಸ್ತೆ ಇದೆ ಪಕ್ಕಾ ರಸ್ತೆ ಆಗಬೇಕು ಎಂಬ ಮಾಹಿತಿ.
* ಎಲ್ಲಿ ಕುಡಿಯುವ ನೀರಿನ ಸರಬರಾಜಿನ ಸಮಸ್ಯೆ ಇದೆ ಅದು ಯಾವ ರೀತಿ ಆಗಬೇಕು.

ಈ ತರಹದ ಸಮಗ್ರ ಕ್ರಿಯಾ ಯೋಜನೆ ಇಟ್ಟುಕೊಂಡಲ್ಲಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನ ಮಾಡುವುದು ಸುಲಭವಾಗುತ್ತದೆ. ಅದನ್ನು ಬಿಟ್ಟು ಯೋಜನೆ ಬಂದ ನಂತರ ಕ್ರಿಯಾ ಯೋಜನೆ ತಯಾರಿಸಲು ಹೆಣಗಾಡಿದರೆ ಅಥವಾ ಗ್ರಾಮ ಸಭೆಯಲ್ಲಿ ಮಂಡಿಸಿದ್ದರೆ ಗೊಂದಲಗಳು ಸೃಷ್ಟಿಯಾಗುವುದು ಅಲ್ಲದೆ ಯೋಜನೆಗಳ ಅನುಷ್ಠಾನ ಕುಂಠಿತವಾಗಲು ಕಾರಣವಾಗುತ್ತದೆ.

ಸಮಸ್ಯೆಗಳು ಇದ್ದರೆ ಕೆಳಹಂತದಲ್ಲಿ ಕೆಲಸ ನಿರ್ವಹಿಸುವಲ್ಲಿ ತುಂಬಾ ಕಷ್ಟವಾಗುತ್ತದೆ. ಆದರೂ ಸಹ ಪಂಚಾಯತಿಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಾಕಷ್ಟ ಹಣ ನೀಡುತ್ತಿದೆ. ಎಲ್ಲರೂ ಸಕಾರಾತ್ಮಕ ನಿಟ್ಟಿನಲ್ಲಿ ಕೆಲಸ ನಿರ್ವಹಿಸಿದಲ್ಲಿ ಅನುದಾನ ಸದ್ಬಳಕೆ ಮಾಡುವುದು ಸರ್ಕಾರದ ಸೇವೆಯಲ್ಲಿ ಇದ್ದು ಸಂಬಳ ಪಡೆಯುತ್ತಿರುವ ನಮ್ಮೆಲ್ಲರ ಆದ್ಯ ಜವಾಬ್ದಾರಿ ಮತ್ತು ಕರ್ತವ್ಯ ಆಗುತ್ತದೆ.

ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮಾಂತರ ಭಾಗದ ಜನರ ಆರ್ಥಿಕ ಸಾಮಾಜಿಕ ಅಭಿವೃದ್ಧಿಗೆ ಸರ್ಕಾರಿ ನೌಕರರಾದ ನಾವು ಮತ್ತು ಜನಪ್ರತಿನಿಧಿಗಳು ನಾವೆಲ್ಲರೂ ಪಣತೊಟ್ಟು ಕೆಲಸ ಮಾಡಬೇಕಾಗಿದೆ. ಅದರಂತೆ ಜನಪ್ರತಿನಿಧಿ ಗಳಾದವರು ತಮ್ಮ ಕಾರ್ಯಾವಧಿಯಲ್ಲಿ ಸಮಗ್ರ ಅಭಿವೃದ್ಧಿ ದೂರದೃಷ್ಟಿ ಇಟ್ಟುಕೊಂಡು ಒಬ್ಬರನ್ನೊಬ್ಬರು ಅರ್ಥಮಾಡಿ ಕೊಂಡು ಯೋಜನೆ ಅನುಷ್ಠಾನಗೊಳಿಸಬೇಕು. ಅದನ್ನು ಬಿಟ್ಟು ಕೇವಲ ವಾದ ವಿವಾದದಲ್ಲಿ ಕಾಲ ಕಳೆದರೆ ಸಾಧನೆ ಆಗುವುದಿಲ್ಲ.

❑

ಸಂದರ್ಶನ

# ರಾಜ್ಯದ ಎಲ್ಲಾ ಆಕಾಶವಾಣಿ ಕೇಂದ್ರಗಳಿಂದ ದೀವಿಗೆ ಸರಣಿ

– ಡಾ. ವಿಜಯ ಅಂಗಡಿ*

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಕಾರಿ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡಲು ಪೂರಕವಾದ ವಿಚಾರಗಳನ್ನು ಅನುಭವಿಗಳು ಲೇಖನ ರೂಪದಲ್ಲಿ ಬರೆದು ಕಳುಹಿಸಬಹುದು. ಇಲ್ಲಿಯೂ 40 ಜನ ವಿಜೇತರಿಗೆ ಇಲಾಖೆಯು ಬಹುಮಾನಗಳನ್ನು ನೀಡಲಿದೆ.

ರಾಜ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಆಗಿರುವ ಸಾರ್ಥಕ ಸಂಗತಿಗಳನ್ನು ಸಮಾಜಕ್ಕೆ ತಿಳಿಸುವ ಸಲುವಾಗಿ ರಾಜ್ಯದ 13 ಆಕಾಶವಾಣಿ ಕೇಂದ್ರಗಳಿಂದ 19.12.2011 ರಿಂದ ಪ್ರತೀ ದಿನವೂ ರಾತ್ರಿ 7.45ಕ್ಕೆ ಕಾರ್ಯಕ್ರಮಗಳು ಬಿತ್ತರವಾಗುತ್ತಿವೆ. 'ದೀವಿಗೆ' ಹೆಸರಿನ ಈ ಸರಣಿಯು ಬೆಂಗಳೂರು, ಧಾರವಾಡ, ಮೈಸೂರು, ಮಂಗಳೂರು, ಗುಲ್ಬರ್ಗಾ, ಭದ್ರಾವತಿ, ಹಾಸನ, ಚಿತ್ರದುರ್ಗ, ಹೊಸಪೇಟೆ, ಕಾರವಾರ, ಮಡಿಕೇರಿ, ಬಿಜಾಪುರ ಮತ್ತು ರಾಯಚೂರು ಆಕಾಶವಾಣಿ ನಿಲಯಗಳಿಂದ ಏಕಕಾಲಕ್ಕೆ ಪ್ರಸಾರವಾಗುತ್ತಿದೆ. ಹದಿನೈದು ನಿಮಿಷ ಅವಧಿಯ ಕಾರ್ಯಕ್ರಮದ ಅಂತ್ಯದಲ್ಲಿ ಪ್ರಶ್ನೆಯೊಂದನ್ನು ಕೇಳಲಾಗುವುದು. ಒಟ್ಟು 80 ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು 50 ಜನ




ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ॥ ಅಮಿತಾ ಪ್ರಸಾದ್ ಅವರೊಡನೆ ಸಂದರ್ಶನ.

* ಆಕಾಶವಾಣಿ, ಹಾಸನ.



ಯೋಜನೆಯ ರಾಜ್ಯ ನಿರ್ದೇಶಕರಾದ ಪಿ. ಶಿವಶಂಕರ್ ಅವರೊಂದಿಗೆ ಸಂದರ್ಶನ.
ಸಂದರ್ಶಕರು : ಡಾ|| ವಿಜಯ್ ಅಂಗಡಿ,
ಉಪಸ್ಥಿತಿ ಹಾಸನ ಆಕಾಶವಾಣಿಯ ಹೆಚ್. ಶ್ರೀನಿವಾಸ.

ವಿಜೇತರಿಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಹುಮಾನಗಳನ್ನು ನೀಡಲಿದೆ.

ಆದ್ದರಿಂದ ಸಾರ್ವಜನಿಕರು ದೀವಿಗೆ ಕಾರ್ಯಕ್ರಮಗಳನ್ನು ಆಲಿಸಿ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆಲ್ಲಬಹುದು. ಇದರಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪರಿಣಾಮಕಾರಿ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡಲು ಪೂರಕವಾದ ವಿಚಾರಗಳನ್ನು ಅನುಭವಿಗಳು ಲೇಖನ ರೂಪದಲ್ಲಿ ಬರೆದು ಕಳುಹಿಸಬಹುದು. ಇಲ್ಲಿಯೂ 40 ಜನ ವಿಜೇತರಿಗೆ ಇಲಾಖೆಯು ಬಹುಮಾನಗಳನ್ನು ನೀಡಲಿದೆ. ದೀವಿಗೆ ಸರಣಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬರಹವನ್ನು ಕಳುಹಿಸಲು ವಿಳಾಸ : ನಿಲಯ ನಿರ್ದೇಶಕರು, ದೀವಿಗೆ ಸರಣಿ ವಿಭಾಗ, ಆಕಾಶವಾಣಿ, ಹಾಸನ–577201.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ರಾಜ್ಯದಲ್ಲಿ ಉಪಯುಕ್ತ ಹಾಗೂ ಮಹತ್ವದ ಕಾಮಗಾರಿಗಳು ಆಗಿದ್ದು ಈ ಕುರಿತಂತೆ ಬಾನುಲಿಯಲ್ಲಿ ನಿರಂತರವಾಗಿ 80 ಕಂತುಗಳಲ್ಲಿ ವಿಚಾರಗಳು ಪ್ರಸ್ತಾಪ ಆಗಲಿವೆ. ಗ್ರಾಮೀಣರು, ರೈತರು, ಪಂಚಾಯ್ತಿ ಸದಸ್ಯರು, ಪಂಚಾಯ್ತಿ ಅಧಿಕಾರಿಗಳು ಈ ಕಾರ್ಯಕ್ರಮಗಳನ್ನು ಆಲಿಸಿ ಯೋಜನೆಯನ್ನು ಸಾರ್ಥಕವಾಗಿ ರೂಪುಗೊಳಿಸುವಲ್ಲಿ ಗಮನಹರಿಸಬಹುದು.

❑

---

ವಿಧಿ ಆಟವಾಡುತಿಹ
ಚೆಂಡುಗಳು ನಾವೆಲ್ಲ;
ಉರುಳುವೆವು, ಹೊರಳುವೆವು,
ತಾಗುವೆವು, ಬಾಗುವೆವು;
ಸ್ವಾತಂತ್ರವಿಲ್ಲದೆಡೆ ಇಡಿದೆಂಬ ಹುಸಿ ಚಿಂತೆ ಏಕೆ?

– ಕುವೆಂಪು

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

# ಜೀವನದಲ್ಲಿ ಜಯವನ್ನು ಸಂಪಾದಿಸಬೇಕೆನ್ನುತ್ತೀರಾ?

ಅನುಕೂಲಗಳು ಇರುವಾಗ ಜಯ ಸಂಪಾದಿಸುವುದು ದೊಡ್ಡದಲ್ಲ. ಆದರೆ, ಪ್ರತಿಕೂಲಗಳು ಎದುರಿಗೆ ಇದ್ದಾಗಲೂ ಜಯ ಸಂಪಾದಿಸಲು ಮುಂದಾಗಬೇಕು. ಆ ಆದರ್ಶವನ್ನು ಎದುರಿಗೆ ಇರಿಸಿಕೊಂಡು ಮುನ್ನುಗ್ಗಿದಾಗಲೇ ಜೀವನದಲ್ಲಿ ಏನು ರೋಮಾಂಚನ ಇದೆಯೆನ್ನುವುದು ಗೊತ್ತಾಗುತ್ತದೆ. ಎಷ್ಟೇ ಪ್ರತಿಕೂಲಗಳಿದ್ದರೂ ಜಯ ಸಂಪಾದಿಸಬೇಕೆನ್ನುವುದು ಜಪಾನೀಯರ ಆದರ್ಶವಾಗಿದೆ.

ಜೀವನದಲ್ಲಿ ಜಯ ಸಂಪಾದಿಸಬೇಕೆನ್ನುವವರು, ತಾನು ಹಿಡಿದ ಕೆಲಸಕ್ಕೆ ಬಿಟ್ಟೂ ಬಿಡದಂತೆ ಹತ್ತಿ ಬೀಳಬೇಕು. ಸತತೋದ್ಯೋಗವೇ ಅವನ ಸ್ನೇಹಿತನೆನಿಸಬೇಕೆಂದು ಇಂಗ್ಲೀಷ್ ಪ್ರಬಂಧಕಾರ ಜೋಸೆಫ್ ಎಡಿಸನ್ ಹೇಳುತ್ತಾನೆ. ಅನುಭವದಿಂದ ಸಲಹೆ ಪಡೆಯಬೇಕು. ಎಚ್ಚರಿಕೆ ಇರಿಸಿಕೊಂಡು, ಆಸೆಯನ್ನು ಮಾರ್ಗದರ್ಶಕ ಯಕ್ಷಿಣಿಯೆಂದು ಬಗೆದು ಮುನ್ನುಗ್ಗಬೇಕು.

ಸೋಲಬಾರದೆಂದವನು ತನ್ನ ಎದೆಯಲ್ಲಿ ಗೆಲ್ಲುವ ನಿರ್ಧಾರವನ್ನು ತುಂಬಿಕೊಂಡಿರಬೇಕು. ಅಂಥ ಅದಮನೀಯ ನಿರ್ಧಾರ ತೊಟ್ಟವನು ಎಂದೂ ಸೋಲುವುದೇ ಇಲ್ಲ. ಯಶಸ್ಸು ಒಬ್ಬ ಸ್ತ್ರೀ ಇದ್ದಂತೆ. ಅದು ಧೈರ್ಯ ಇದ್ದವನಿಗೇ ಒಲಿಯುತ್ತದೆ.

ನಾವು ಜೀವನದಲ್ಲಿ ಯಾವ ಕೆಲಸವನ್ನೇ ಹಿಡಿದುಕೊಂಡಿರಲಿ, ಅದರಲ್ಲಿ ಶ್ರೇಷ್ಠತೆ ತೋರಿಸಬೇಕು. ಆ ಶ್ರೇಷ್ಠತೆಯೇ ನಮಗೆ ಯಶಸ್ಸನ್ನು ತಂದುಕೊಡುತ್ತದೆ. 'ನನಗೆ ಇದನ್ನು ಬಿಟ್ಟು ಬೇರೇನೂ ತಿಳಿಯುವುದಿಲ್ಲ' ಎನ್ನುವ ಮಾತೊಂದನ್ನೇ ಮನಸ್ಸಿನಲ್ಲಿ ಇರಿಸಿಕೊಂಡು ಹೊರಟರೆ, ಯಶಸ್ಸು, ಆ ಮನುಷ್ಯನನ್ನು ಹಿಂಬಾಲಿಸಿಕೊಂಡು ಹೋಗುತ್ತದೆ.

ಬದುಕಿನಲ್ಲಿ ಯಶಸ್ಸು ಸಂಪಾದಿಸಬೇಕೆನ್ನುವ ಗುಟ್ಟು ಒಂದೇ ಒಂದು ಸಂಗತಿಯಲ್ಲಿದೆ. ಇನ್ನೊಬ್ಬರನ್ನು ಹಿಂದೆ ಹಾಕಿ ತಾನು ಮುಂದಾಗಬೇಕೆನ್ನುವ ವಿಚಾರವನ್ನು ಹಿಂದೆ ಇರಿಸಿ, ಮನುಷ್ಯನು, ತನ್ನನ್ನೇ ತಾನು ಮೀರಿಸಬೇಕೆನ್ನುವ ವಿಚಾರವನ್ನು ಮುಂದೆ ಮಾಡಿಕೊಂಡು ನಡೆಯಬೇಕು.

ಯಾವನೇ ಒಬ್ಬ ಯಶಸ್ವೀ ಮನುಷ್ಯನು, ಆ ಯಶಸ್ಸು ಸಂಪಾದಿಸಲು ಅನ್ಯರಿಂದ ಬಹಳಷ್ಟನ್ನು ಪಡೆದಿರುತ್ತಾನೆ. ಅವನು, ಅವರಿಗೆ ಕೊಟ್ಟಿರುವುದಕ್ಕಿಂತಲೂ, ಅವರಿಂದ ಪಡೆದಿರುವುದೇ ಹೆಚ್ಚೆಂದು ಐನ್‌ಸ್ಟಾಯಿನರ ಅನುಭವ ಹೇಳುತ್ತದೆ. ಒಬ್ಬ ಮನುಷ್ಯನ ಬೆಲೆಯನ್ನು, ಅವನು ಇನ್ನೊಬ್ಬರಿಂದ ಏನು ಪಡೆದಿದ್ದಾನೆ ಎನ್ನುವುದರಿಂದ ಅಳೆಯದೆ, ಅವನು ಇನ್ನೊಬ್ಬರಿಗೆ ಏನು ಕೊಟ್ಟಿದ್ದಾನೆ ಎನ್ನುವುದರಿಂದ ಅಳೆಯಬೇಕು.

ಮನುಷ್ಯನು ಜೀವನದಲ್ಲಿ ಏನನ್ನಾದರೂ, ಅಸಾಧ್ಯವನ್ನು ಕೂಡ ಸಾಧಿಸುವುದು ಸಾಧ್ಯವಿದೆ. ಅದಕ್ಕೆ ಬಹಳಷ್ಟು ಕಾಲ, ಒಂದೇ ಸವನೆ ಅಂಟಿಕೊಂಡಿರಬೇಕು. ಯಶಸ್ಸನ್ನು ಸಂಪಾದಿಸುವುದು ಕಷ್ಟವೇನೂ ಅಲ್ಲ. ಅವಕಾಶಗಳನ್ನು ಜನರಿಗೆ ಹೇಗೆ ಉಪಯೋಗಿಸಿಕೊಳ್ಳಬೇಕೆನ್ನುವುದು ತಿಳಿದಿರಬೇಕು.

ಒಬ್ಬ ಮನುಷ್ಯನ ಬೆಲೆಯನ್ನು, ಅವನು ಇನ್ನೊಬ್ಬರಿಂದ ಏನು ಪಡೆದಿದ್ದಾನೆ ಎನ್ನುವುದರಿಂದ ಅಳೆಯದೆ, ಅವನು ಇನ್ನೊಬ್ಬರಿಗೆ ಏನು ಕೊಟ್ಟಿದ್ದಾನೆ ಎನ್ನುವುದರಿಂದ ಅಳೆಯಬೇಕು.

# ಗ್ರಾಮಸಭೆಗೆ ಬನ್ನಿರಿ



ಸಿ.ಬಿ. ಪಲ್ಲೇದ *
ಮೊಬೈಲ್ : 98803 35813

ಬನ್ನಿರೆಲ್ಲ ಬನ್ನಿರಿ ಗ್ರಾಮಸಭೆಗೆ ಎಲ್ಲರೂ
ಗ್ರಾಮಸಭೆಗೆ ಬನ್ನಿರಿ ಅದರ ಲಾಭ ಪಡೆಯಿರಿ
ಜಾತಿ ಮತವ ಮರೆಯಿರಿ । ಭೇದ ಭಾವ ಸರಿಸಿರಿ
ವೈರ ಭಾವವ ಅಳಿಸಿರಿ । ಶಾಂತಿ ಸ್ನೇಹ ಬೆಳಸಿರಿ.

ವಾರ್ಷಿಕ ಲೆಕ್ಕಪತ್ರ ನೋಡಿರಿ
ಆಡಳಿತ ವರದಿಯ ತಿಳಿಯಿರಿ
ಪಂಚಾಯ್ತಿ ಯೋಜನೆಗಳನು ಅರಿಯಿರಿ
ಕುಂದು ಕೊರತೆಗಳನು ಹೇಳಿರಿ.

ವಿವಿಧ ಯೋಜನೆಗಳ ತಿಳಿಯಿರಿ
ಫಲಾನುಭವಿಗಳನು ಗುರುತಿಸಿರಿ
ಹಣಕಾಸಿನ ವಿವರವ ತಿಳಿಯಿರಿ
ಕಾಮಗಾರಿಗಳನು ಗುರುತಿಸಿರಿ.

ಗ್ರಾಮದಲಿ ಒಗ್ಗಟ್ಟನು ಮೂಡಿಸಿರಿ
ಸಾಮಾಜಿಕ ನ್ಯಾಯವನು ಸಾಧಿಸಿರಿ
ಗ್ರಾಮದ ಏಳ್ಗೆಗಾಗಿ ಎಲ್ಲರೂ ಶ್ರಮಿಸಿರಿ
ನಿರಂತರ ಅಭಿವೃದ್ಧಿಯನು ಹೊಂದಿರಿ.

❑

* ಅಧ್ಯಕ್ಷರು, 'ಸ್ಪಂದನಾ', ಕಳಸಾಪೂರ, ತಾಲ್ಲೂಕು ಮತ್ತು ಜಿಲ್ಲೆ ಗದಗ

# ಗಾಂಧೀಜಿ–ಜೋಸೆಫ್ ಕುಮಾರಪ್ಪ ಅವರ ನಿರಂತರ ಗ್ರಾಮೀಣ ಅಭಿವೃದ್ಧಿಯ ಶಾಶ್ವತ ಅರ್ಥಶಾಸ್ತ್ರ



ಡಾ. ಎಂ.ಜಿ. ಬಸವರಾಜ *

> ಮಾನವ ಮತ್ತು ಪ್ರಕೃತಿ ಮಧ್ಯೆ ಸಾಮರಸ್ಯವಿರಬೇಕು. ಪರಿಸರವನ್ನು ಮಾನವ ಎಂದೂ ವಿನಾಶಗೊಳಿಸ ಬಾರದು. ಅದು ನಿರಂತರವಾಗಿ ಉಳಿದು ಬೆಳೆಯಲು ಪ್ರೋತ್ಸಾಹ ನೀಡಬೇಕು.

ಗಾಂಧಿ ಆರ್ಥಿಕ ವಿಚಾರಧಾರೆಯ ಅಧಿಕೃತ ಉತ್ತರಾಧೀಕಾರಿ ಎಂಬ ಮನ್ನಣೆಗೆ ಪಾತ್ರರಾಗಿದ್ದ ಜೋಸೆಫ್ ಕಾರ್ನಿಲಿಯಸ್ ಕುಮಾರಪ್ಪನವರು ಲೆಕ್ಕಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ಬ್ರಿಟನ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಓದಿ ಮುಂಬೈನಲ್ಲಿ ಚಾರ್ಟಡ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಇವರು ತಮಿಳುನಾಡಿನ ತಂಜಾವೂರಿನಲ್ಲಿ 1892 ಜನವರಿ 4 ರಂದು ಎಸ್.ಡಿ.ಕಾರ್ನಿಲಿಯಸ್ ಮತ್ತು ಎಸ್ತರ್ ರಾಜನಾಯಕಮ್ ದಂಪತಿಗಳ ಒಂಭತ್ತನೆಯ ಮಗನಾಗಿ ಜನಿಸಿದರು. ತಂದೆ ಅಲ್ಲಿನ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸದಲ್ಲಿದ್ದರು. ಗಾಂಧೀಜಿ ಕಲ್ಪನೆಯ ಸರ್ವೋದಯ ಆರ್ಥಿಕ ವಿಚಾರಧಾರೆಯ ಸೆಳೆತಕ್ಕೆ ಒಳಗಾದ ಕುಮಾರಪ್ಪನವರು ಹೇರಳವಾಗಿ ವರಮಾನ ತಂದು ಕೊಡುತ್ತಿದ್ದ ಸ್ವಂತ ಉದ್ಯೋಗ ಕೈ ಬಿಟ್ಟು 1924ರಲ್ಲಿ ಸಾಬರಮತಿ ಆಶ್ರಮದಲ್ಲಿ ಗಾಂಧೀಜಿಯವರೊಡನೆ ಸೇರಿ ಬಿಟ್ಟರು. ಗಾಂಧೀಜಿಯವರ ರಚನಾತ್ಮಕ ಕೆಲಸ ಕಾರ್ಯಗಳಿಗೆ ತಮ್ಮನ್ನು ಅರ್ಪಿಸಿಕೊಂಡರು. ಅಲ್ಲಿ ಕುಮಾರಪ್ಪನವರು ಬರೆಯುತ್ತಿದ ಗ್ರಾಮೀಣ ಅಭಿವೃದ್ಧಿಯ ವಿಚಾರಗಳ ಬಗ್ಗೆ ಗಾಂಧೀಜಿಯವರಿಗೆ ಸಹಮತವಿತ್ತು. ಕುಮಾರಪ್ಪನವರ ಬಾಹುಗಳು ಗಾಂಧೀಜಿಯವರ ಆರ್ಥಿಕ ವಿಚಾರಗಳಿಗೆ ಸ್ಪಷ್ಟ ಸ್ವರೂಪ ನೀಡಿದವು.

ಗಾಂಧೀಜಿಯವರ ಆಶಯದಂತೆ ಜೆ.ಸಿ.ಕೆ ರಾಷ್ಟ್ರದ ವಿವಿಧ ಕಡೆ ಸಂಚರಿಸಿ ಹಲವು ಹಳ್ಳಿಗಳ ಆರ್ಥಿಕ ಸಮೀಕ್ಷೆ ನಡೆಸಿ ಗ್ರಾಮೀಣ ಜನ ಸಮುದಾಯದ ಶೋಚನೀಯ ಸ್ಥಿತಿಗತಿಗಳ ನೈಜ ಚಿತ್ರಣವನ್ನು ರಾಷ್ಟ್ರದ ಮುಂದೆ ಇಟ್ಟರು. ಗಾಂಧೀಜಿಯವರ ಆರ್ಥಿಕ ವಿಚಾರಗಳು ಗ್ರಾಮೀಣರ ಸಮಸ್ಯೆಗಳನ್ನು ಹೇಗೆ ಸೂಕ್ತ ರೀತಿಯಲ್ಲಿ ನಿವಾರಿಸುತ್ತವೆ ಎಂದು ವಿಶ್ಲೇಷಣೆ ಮಾಡಿದರು. ಅನೇಕ ಬಾರಿ ಗಾಂಧೀಜಿಯವರು ಜೆ.ಸಿ.ಕೆ ಅವರ ಅಧ್ಯಯನಗಳನ್ನು ಉದಾಹರಿಸಿ ಭಾರೀ ಪ್ರಮಾಣದ ಕೈಗಾರಿಕೀಕರಣದಿಂದ ಹೇಗೆ ಬಡವರು ಬಡವರಾಗುತ್ತಿದ್ದಾರೆ. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ ಎಂದು ವಿವರಿಸುತ್ತಿದ್ದರು. ಜೆ.ಸಿ.ಕೆ ಅಂದಿನ ಬ್ರಿಟಿಷ್ ಆಡಳಿತದ ಆರ್ಥಿಕ ನೀತಿಗಳಲ್ಲಿನ ದೋಷಗಳನ್ನು ಬಯಲಿಗೆಳೆಯುತ್ತಾ ಬಂದರು. ಗ್ರಾಮೀಣ ಜನರ ಬಡತನ, ನಿರುದ್ಯೋಗ ಸಮಸ್ಯೆಗಳ ನಿವಾರಣೆಯಲ್ಲಿ ಖಾದೀ ಗ್ರಾಮೋದ್ಯೋಗ ಕೈಗಾರಿಕೆಗಳ ಪಾತ್ರವನ್ನು ವಿವರಿಸಿದರು. ಗಾಂಧೀಜಿಯವರ ಒಡನಾಟ, ಯೇಸುವಿನ ಚಿಂತನೆಗಳ ಅಧ್ಯಯನ, ಹಳ್ಳಿಯ ಜೀವನದ ಅನುಭವಗಳು ಜೆ.ಸಿ.ಕೆ ಅವರನ್ನು ಸತ್ಯ, ಅಹಿಂಸೆ, ಸರಳತೆ, ಕಾಯಕದ ಹಿರಿಮೆ, ಸ್ವದೇಶಿ, ಧರ್ಮದರ್ಶಿತ್ವ, ಯುಕ್ತ ತಂತ್ರಜ್ಞಾನ, ಸರ್ವೋದಯ, ಅಂತ್ಯೋದಯ ತಳಹದಿಯ ಮೇಲೆ ನಿಂತಿರುವ ಗಾಂಧೀ ವಿಚಾರದ ಹತ್ತಿರಕ್ಕೆ ತಂದವು ಗಾಂಧೀಜಿ ಮತ್ತು ಜೆ.ಸಿ.ಕೆ ಅವರು ಮಾನವನು ಬಯಕೆಗಳನ್ನು ಕೃತಕವಾಗಿ

* ಅರ್ಥಶಾಸ್ತ್ರ ಪ್ರಾಧ್ಯಾಪಕ ಮತ್ತು ನಿರ್ದೇಶಕ, ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಂಡ್ಯ – 571402.

ಹೆಚ್ಚಿಸಿಕೊಳ್ಳುತ್ತ ಹೋಗುವುದರಿಂದ ಏನೆಲ್ಲಾ ಅನಾಹುತ ಗಳಾಗುತ್ತವೆ ಎಂಬ ಚಿಂತನೆ ನಡೆಸಿದರು. ಮನುಷ್ಯನು ತನ್ನ ನೆರೆಹೊರೆಯವರಿಗೆ ಹಾನಿ ಉಂಟುಮಾಡದೆ, ಪ್ರಕೃತಿ ಯನ್ನು ನಾಶ ಮಾಡದೆ ತನ್ನ ಬಯಕೆಗಳನ್ನು ಈಡೇರಿಸಿ ಕೊಳ್ಳಬೇಕು. ಮಾನವನು ಪ್ರಕೃತಿಯೊಡನೆ ನಿಕಟವಾಗಿ ವರ್ತಿಸಬೇಕು; ಏಕೆಂದರೆ ಪ್ರಕೃತಿ ಶಾಶ್ವತವಾಗಿ ಉಳಿಯಲು ತನ್ನದೇ ಆದ ಜೀವನ ಚಕ್ರವನ್ನು ಅಭಿವೃದ್ಧಿಪಡಿಸಿಕೊಂಡಿದೆ.

ಮಾನವನು ಪ್ರಕೃತಿಯೊಡನೆ ಸಂಪೂರ್ಣವಾಗಿ ಸಹಕರಿಸಿ ಕೆಲಸ ಮಾಡಬೇಕು. ಪ್ರಕೃತಿ ಶಾಶ್ವತವಾಗಿ ಉಳಿಯಲು ಯಾವ ರೀತಿ ತನ್ನ ಜೀವನ ಚಕ್ರವನ್ನು ಅಭಿವೃದ್ಧಿ ಪಡಿಸಿಕೊಂಡಿದೆಯೋ ಆ ಚಕ್ರವನ್ನು ಹಾಳು ಮಾಡದೆ ಇರುವಂತಹ ಶಾಶ್ವತ ಅರ್ಥವ್ಯವಸ್ಥೆ ರೂಪಗೊಳ್ಳಲು ಜೆ.ಸಿ.ಕೆ ವಾದ ಮಂಡನೆ ಮಾಡಿದರು.

ಜೆ.ಸಿ.ಕೆ ಅವರು ತಮ್ಮ ಶಾಶ್ವತ ಅರ್ಥಶಾಸ್ತ್ರ ಎಂಬ ಗ್ರಂಥದಲ್ಲಿ ಪ್ರಕೃತಿಯ ಸಂಪನ್ಮೂಲಗಳ ಬಗೆಗೆ ನಮಗಿರುವ ಮನೋಧರ್ಮವನ್ನು ಅವಲಂಬಿಸಿ ತಮ್ಮದೇ ಆದ ಸುಂದರ ಶೈಲಿಯಲ್ಲಿ ನಾಲ್ಕು ಬಗೆಯ ಪ್ರಕೃತಿಯ ವಿವಿಧ ಆರ್ಥಿಕ ವ್ಯವಸ್ಥೆಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಅವುಗಳು ಈ ರೀತಿ ಇವೆ.

1. ಪರಾವಲಂಬಿ ಅರ್ಥ ವ್ಯವಸ್ಥೆ. (Parasitic Economy)
2. ಪರಾಪಹರಣ ಅರ್ಥ ವ್ಯವಸ್ಥೆ. (Predatory Economy)
3. ಸಾಹಸಶೀಲ ಅರ್ಥ ವ್ಯವಸ್ಥೆ. (Economy of Enterprise)
4. ಸೇವಾ ಅರ್ಥ ವ್ಯವಸ್ಥೆ. (Service Economy)

ಈ ಅರ್ಥ ವ್ಯವಸ್ಥೆಗಳ ಸಾರ ಈ ರೀತಿ ಇದೆ. ಮೊದನೆಯದು ಪರಾವಲಂಬಿ ಅರ್ಥ ವ್ಯವಸ್ಥೆಯಲ್ಲಿ ತನ್ನ ಅವಶ್ಯಕತೆಗಳನ್ನು ಪೂರೈಸಲು ಫಲಾನುಭವಿಯು ತನ್ನ ಅತಿಥೇಯವನ್ನೇ ಅಂದರೆ ಸಂಪನ್ಮೂಲಗಳನ್ನೇ ನಾಶ ಮಾಡುತ್ತಾನೆ. ಆಶ್ರಯ ನೀಡಿದ ಮೂಲ ಜೀವಿಗೆ ಸಾವನ್ನು ತರುವ ಸಸ್ಯಗಳೂ ಇವೆ ಮತ್ತು ಪ್ರಾಣಿಗಳೂ ಇವೆ. ಜಿಂಕೆ ಹುಲ್ಲನ್ನು ತಿಂದು, ನೀರು ಕುಡಿದು ಅಹಿಂಸೆಯಿಂದ ಬದುಕುತ್ತದೆ. ಆದರೆ ಹುಲಿ ಜಿಂಕೆಯನ್ನು ತಿಂದು ಪ್ರಕೃತಿಯ ಕ್ರಮವನ್ನು ಮೊಟಕುಗೊಳಿಸುತ್ತದೆ. ಹುಲಿಯ ಬದುಕಿಗೆ ಹಿಂಸೆ ಬೇಕಾಗುತ್ತದೆ. ಇಂತಹ ಅರ್ಥ ವ್ಯವಸ್ಥೆಯನ್ನು ಹುಲಿಯ ಅರ್ಥ ವ್ಯವಸ್ಥೆ ಎಂದು ಜೆ.ಸಿ.ಕೆ ಕರೆದರು. ಎರಡನೆಯದು ಪರಾಪಹರಣ ಅರ್ಥ ವ್ಯವಸ್ಥೆ. ಇಲ್ಲಿ ಫಲಾನುಭವಿಯು ಅತಿಥೇಯಕ್ಕೆ ಯಾವ ಸಹಾಯವನ್ನೂ ಮಾಡುವುದಿಲ್ಲ. ತನಗೆ ತಾನು ಸಹಾಯ ಮಾಡಿಕೊಳ್ಳುತ್ತಾನೆ. ಅಂದರೆ ಬೇರೆಯವರ ಪ್ರತಿಫಲವನ್ನು ಅಪಹರಿಸುವ ಕ್ರಮವಿದು. ಉದಾಹರಣೆಗೆ; ಮಂಗವು ಹಣ್ಣನು ಬೆಳೆಸಲು ಯಾವ ರೀತಿಯಲ್ಲಿಯೂ ಕೆಲಸ ಮಾಡುವುದಿಲ್ಲ. ಆದರೆ ಬಿಟ್ಟ ಹಣ್ಣನು ಕಿತ್ತು ತಿನ್ನುತ್ತದೆ. ಅದೇ ರೀತಿ ಪಕ್ಷಿಗಳು ಕಾಳನ್ನು ತಿಂದು ಹೋಗುತ್ತವೆ. ದುಡಿಯದೆ ಫಲ ಅನುಭವಿಸುವ ಸ್ವಾರ್ಥವಿದು. ಈ ಅರ್ಥ ವ್ಯವಸ್ಥೆಯಲ್ಲಿ ಹುಲಿಗಿಂತ ಕಡಿಮೆ ಹಿಂಸೆ ಇರಬಹುದು; ಆದರೆ ಇದೂ ಒಂದು ರೀತಿಯಲ್ಲಿ ವಿಧ್ವಂಸಕ ರೀತಿಯೇ ಆಗಿದೆ. ಇದನ್ನು ಮಂಗನ ಅರ್ಥ ವ್ಯವಸ್ಥೆ ಎಂದು ಕರೆಯಬಹುದು. ಮೂರನೆಯದು, ಸಾಹಸ ಶೀಲ ಅರ್ಥ ವ್ಯವಸ್ಥೆ. ಈ ಅರ್ಥ ವ್ಯವಸ್ಥೆಯಲ್ಲಿ ಜೀವಿಗಳು ತಮಗೆ ಬೇಕಾದುದನ್ನು ತೆಗೆದುಕೊಂಡು ಅದೇ ಸಮಯದಲ್ಲಿ ತಾವು ಯಾರಿಂದ ಲಾಭ ಪಡೆದಿವೆಯೋ ಅವಕ್ಕೆ ಒಂದು ವಿಶಿಷ್ಟ ಸೇವೆ ಸಲ್ಲಿಸಲಾಗುತ್ತದೆ. ಇಲ್ಲಿ ಜೀವಿಗಳು ತಮ್ಮ ಸ್ವಂತ ಪ್ರಯತ್ನದಿಂದ ಏನನ್ನಾದರೂ ತೆಗೆದುಕೊಳ್ಳುತ್ತವೆ ಮತ್ತು ಪ್ರತಿಯಾಗಿ ಪ್ರಕೃತಿಗೆ ತಮ್ಮದೇ ಆದ ಕೊಡುಗೆ ನೀಡುತ್ತವೆ. ಉದಾಹರಣೆಗೆ ಜೇನು ಹುಳುಗಳು ವಿವಿಧ ಪುಷ್ಪಗಳಿಂದ ಮಕರಂದ ಸಂಗ್ರಹಿಸುತ್ತವೆ. ಆಗ ಪರಾಗ ಸ್ಪರ್ಶ ಕ್ರಿಯೆ ನಡೆಯುತ್ತದೆ. ಇದರಿಂದ ಹೂವು ಕಾಯಾಗಿ ಕ್ರಮೇಣ ಹಣ್ಣಾಗಿ ಮಾರ್ಪಡಲು ಸಹಾಯವಾಗುತ್ತದೆ. ಜೇನು ಮಕರಂದ ಸಂಗ್ರಹಿಸಿ ತನ್ನ ದೇಹದಿಂಧ ಉತ್ಪಾದನೆಯಾದ ಮೇಣದಿಂದ ಗೂಡುಕಟ್ಟುತ್ತದೆ. ಈ ಗೂಡಿನಲ್ಲಿ ಜೇನುತುಪ್ಪ ಸಂಗ್ರಹ ವಾಗುತ್ತದೆ. ನಂತರ ಜೇನುಗಳು ಈ ಜೇನು ತುಪ್ಪವನ್ನು ಉಪಯೋಗಿಸುತ್ತವೆ. ಇಲ್ಲಿ ರಚನಾತ್ಮಕ ಕಾರ್ಯ ನಡೆಯುತ್ತದೆ. ಇದನ್ನು ಜೇನಿನ ಅರ್ಥ ವ್ಯವಸ್ಥೆ ಎಂಧು ಕರೆಯಬಹುದು. ಇಲ್ಲಿ ಫಲಾನುಭವಿ ತನ್ನ ಲಾಭವೊಂದನ್ನೇ ಗಮನಿಸದೆ ಇಡೀ ಸಮೂಹಕ್ಕಾಗಿ ದುಡಿಯುವ ಕಾರ್ಯವಿದೆ. ಪ್ರಕೃತಿಯಲ್ಲಿ ದೊರೆಯುವ ವೇಳೆಯಲ್ಲಿ ಮುಂದಿನ ದಿನಗಳಿಗೂ ಸಂಗ್ರಹಿಸುವ ಸದುದ್ದೇಶವಿದೆ. ನಾಲ್ಕನೆಯದು, ಸೇವಾ ಅರ್ಥ ವ್ಯವಸ್ಥೆ. ಈ

ಅರ್ಥ ವ್ಯವಸ್ಥೆಯಲ್ಲಿ ನಾವು ತಾಯಿ ಮಗುವಿನ ಅಕ್ಕರೆಯ ಸಂಭಂಧವನ್ನು ಕಾಣಬಹುದು. ಇಲ್ಲಿ ಫಲಾನುಭವಿಯು ಇತರರರ ಸಂತೋಷದಲ್ಲಿ ಸಂತೋಷ ಅನುಭವಿಸುವುದು. ಇದು ಶಾಶ್ವತ ಅರ್ಥ ವ್ಯವಸ್ಥೆಯ ಹತ್ತಿರಕ್ಕೆ ಬರುವ ವ್ಯವಸ್ಥೆಯಾಗಿದೆ. ಏಕೆಂದರೆ ಇದು ಸೇವಾ ಪ್ರಧಾನವಾದ ಅತ್ಯುತ್ತಮ ಅರ್ಥ ವ್ಯವಸ್ಥೆ. ಕಾಡಿನಲ್ಲಿ ತಾಯಿ ಪ್ರಾಣಿಯು ವಿವಿಧ ಕಡೆ ಓಡಾಡಿ ಆಹಾರ ಸಂಗ್ರಹಿಸಿ ತಂದು ತನ್ನ ಮರಿಗಳನ್ನು ಪೋಷಿಸುತ್ತದೆ. ಇಲ್ಲಿ ತನ್ನ ಪ್ರಾಣವನ್ನೂ ಒತ್ತೆಯಿಡಬೇಕಾಗುತ್ತದೆ. ತಾಯಿತನದ ಮಮತೆಯೇ ಅಂತಹದು. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವುದು. ಸ್ವಾರ್ಥವಿಲ್ಲದೆ, ತನ್ನ ಕೆಲಸ ಮಾಡುವ ಪ್ರಕೃತಿ ಸಹಜ ಸ್ವಭಾವವನ್ನು ಇಲ್ಲಿ ಕಾಣಬಹುದು. ಆದುದರಿಂದಲೇ ಇದು ಅಹಿಂಸಾತ್ಮಕ ಶಾಶ್ವತ ಅರ್ಥ ವ್ಯವಸ್ಥೆಗೆ ಬಹು ಹತ್ತಿರವಾದುದು. ಇದನ್ನು ತಾಯಿಯ ಅರ್ಥ ವ್ಯವಸ್ಥೆ ಎಂದು ಕರೆಯಬಹುದು.

ಈ ಮೇಲೆ ವಿಶ್ಲೇಷಣೆ ಮಾಡಿದ ನಾಲ್ಕು ಅರ್ಥವ್ಯವಸ್ಥೆಗಳನ್ನು ಜೀವನದ ಎಲ್ಲಾ ವ್ಯಕ್ತಿಗಳಲ್ಲೂ ಕಾಣಬಹುದು. ಜೆ.ಸಿ.ಕೆ ತಮ್ಮ ಗ್ರಂಥದಲ್ಲಿ ಶಾಶ್ವತ ಅರ್ಥ ವ್ಯವಸ್ಥೆಯ ಮೂಲಭೂತ ಕಾರ್ಯಗಳನ್ನು ಈ ರೀತಿ ಪಟ್ಟಿ ಮಾಡಿದ್ದಾರೆ.

**ಶಾಶ್ವತ ವ್ಯವಸ್ಥೆ :** 1. ಸಮರ್ಥವಾಗಿ ಸಂಪತ್ತನ್ನು ಸೃಷ್ಟಿಸುತ್ತದೆ. 2. ಸಂಪತ್ತನ್ನು ವ್ಯಾಪಕವಾಗಿ ಮತ್ತು ಸಮವಾಗಿ ಹಂಚಿಕೆ ಮಾಡುತ್ತದೆ. 3. ಜನರ ಅವಶ್ಯಕತೆಗಳನ್ನು ಪೂರೈಸುತ್ತದೆ. 4. ಶಾಂತಿಗೆ ಉತ್ತೇಜನ ನೀಡುತ್ತದೆ.

ಈ ನಾಲ್ಕೂ ಕಾರ್ಯಗಳನ್ನು ವಿಕೇಂದ್ರೀಕೃತ ಅರ್ಥವ್ಯವಸ್ಥೆಗೆ ಅನ್ವಯಿಸಿ ಬಂಡವಾಳ ಕೊರತೆ ಶ್ರಮ ಸಮೃದ್ಧ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೆಗಳ ವಿಕೇಂದ್ರೀಕರಣವೇ ಉತ್ತಮವೆಂದು ಜೆ.ಸಿ.ಕೆ ವಾದಿಸಿದ್ದಾರೆ. ಈ ಅಂಶವನ್ನು ಕೆಳಗೆ ಕೊಟ್ಟಿರುವ ಅತ್ಯಂತ ಸರಳ ಸಮೀಕರಣದ ಮೂಲಕ ಸಾಬೀತು ಪಡಿಸಿದ್ದಾರೆ.

$W = E + M$

W = Wealth ಸಂಪತ್ತು

E = Employment ಉದ್ಯೋಗ

M = Money or Capital ಉದ್ಯೋಗ ಹಣ ಅಥವಾ ಬಂಡವಾಳ

ಶ್ರಮ ಸಮೃದ್ಧ ಮತ್ತು ಬಂಡವಾಳ ಕೊರತೆಯ ರಾಷ್ಟ್ರಗಳು ಶ್ರಮವನ್ನು ಉಳಿತಾಯ ಮಾಡುವ ಯಂತ್ರೋಪಕರಣಗಳನ್ನೂ ತಂತ್ರಜ್ಞಾನವನ್ನೂ ಬಳಸಬಹುದು ಎಂದು ವಾದಿಸಿದ್ದಾರೆ. ಗಾಂಧೀಜಿಯವರ ಅಭಿಪ್ರಾಯವೂ ಇದೇ ಅಲ್ಲವೇ? ಕೆಲಸ ಮಾಡಲು ಅಗತ್ಯ ಪ್ರಮಾಣದಲ್ಲಿ ಜನರಿಲ್ಲದಿದ್ದರೆ ಯಾಂತ್ರೀಕರಣ ಸರಿ. ಆದರೆ ಭಾರತದಲ್ಲಿ ಕೆಲಸಕ್ಕೆ ಬೇಕಾದುದಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಜನರಿರುವಾಗ ಯಾಂತ್ರೀಕರಣ ಎಷ್ಟರ ಮಟ್ಟಿಗೆ ಸರಿ? ಇದರಿಂದ ನಿರುದ್ಯೋಗ ಸಮಸ್ಯೆ ಉಲ್ಬಣವಾಗುವುದಿಲ್ಲವೇ? ಉತ್ಪಾದನೆಯನ್ನು ವಿಕೇಂದ್ರೀಕೃತ ಗ್ರಾಮೋದ್ಯೋಗ ಕೈಗಾರಿಕೆಗಳಿಂದ ಮಾಡಬೇಕು. ಭಾರೀ ಪ್ರಮಾಣದಲ್ಲಿ ಉತ್ಪಾದನೆಯನ್ನು ಮಾಡುವುದರ ದೋಷವನ್ನು ಸರಿಪಡಿಸಲು ಜನ ಸಮೂಹದಿಂದ ಉತ್ಪಾದನೆ ಮಾಡಿಸುವ ಸೂತ್ರದ ಅಳವಡಿಕೆ ಬಗ್ಗೆ ಗಾಂಧೀಜಿ ಸಲಹೆ ನೀಡಿದ್ದಾರೆ.

ಸ್ಥಳೀಯವಾಗಿ ದೊರಕುವ ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಗ್ರಾಮೋದ್ಯೋಗ ಕೈಗಾರಿಕೆಗಳು ಅವಶ್ಯಕ ವಸ್ತುಗಳನ್ನು ಗ್ರಾಮಗಳಲ್ಲಿಯೇ ಉತ್ಪಾದಿಸುತ್ತವೆ. ಅವು ಗ್ರಾಮಗಳ ಕುಶಲ ಕಾರ್ಮಿಕರಿಗೆ ಕೈಗೆಟುಕುವ ಸಾಧನ ಸಲಕರಣೆಗಳನ್ನು ಬಳಸುತ್ತವೆ. ಜೊತೆಗೆ ಇವು ಕೂಲಿ ಕೆಲಸವನ್ನು ತಪ್ಪಿಸದೆ ಸ್ಥಳೀಯ ಜನರ ಬೇಡಿಕೆಯನ್ನು ಪೂರೈಸುತ್ತವೆ. ಗ್ರಾಮೋದ್ಯೋಗ ಕೈಗಾರಿಕೆಗಳಿಗೆ ಬೇಕಾಗುವ ಯುಕ್ತ ಯಂತ್ರೋಪಕರಣಗಳನ್ನು ಉತ್ಪಾದಿಸುವ ಮುಖ್ಯವಾದ ಕೈಗಾರಿಕೆಗಳನ್ನು ಸರ್ಕಾರ ನಡೆಸಬಹುದು ಎಂಬುದು ಗಾಂಧೀಜಿ ಮತ್ತು ಕುಮಾರಪ್ಪನವರ ಅಭಿಮತವಾಗಿದೆ.

ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯಲ್ಲಿ ಕುಶಲಕರ್ಮಿಯೇ ಉತ್ಪಧನಾ ಸಾಧನಗಳ ಒಡೆಯ ಅವನು ಸ್ವಂತ ಉದ್ಯೋಗದ ಕುಶಲ ಕರ್ಮಿಯಾಗಿರುತ್ತಾನೆಯೇ ಹೊರತು ಕೂಲಿಯಾಳು ಆಗಿರುವುದಿಲ್ಲ. ಇಲ್ಲಿ ಮಾಲೀಕ-ಕಾರ್ಮಿಕ ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲ ಮತ್ತು ಶೋಷಣೆಗೆ ಅವಕಾಶವಿಲ್ಲ. ಸಣ್ಣ ಉತ್ಪಾದಕನು ಕೊಳ್ಳುವವರೊಡನೆ ನೇರ ಸಂಬಂಧ ಇಟ್ಟುಕೊಳ್ಳಲು ಇಲ್ಲಿ ಸಾಧ್ಯವಿದೆ. ಆದುದರಿಂದ ಸಣ್ಣ ಕೈಗಾರಿಕೆಗಳ ಮೂಲಕ ಮತ್ತು ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯ ಮೂಲಕ ರಾಷ್ಟ್ರದಲ್ಲಿ ಆರ್ಥಿಕ ಪುನರುದ್ಧಾರ ಸಾಧ್ಯವೆಂಬುದು ಗಾಂಧೀ-ಕುಮಾರಪ್ಪನವರ ನಂಬಿಕೆಯಾಗಿತ್ತು.

ಗಾಂಧೀ–ಕುಮಾರಪ್ಪನವರಿಬ್ಬರೂ ಚಲನಶೀಲ ಮನೋಭಾವದವರು ಮತ್ತು ಇವರು ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಸಂಪೂರ್ಣವಾಗಿ ವಿರೋಧಿಸಲಿಲ್ಲ. ಕೆಡುಕನ್ನು ಉಂಟುಮಾಡದ ಎಲ್ಲರಿಗೂ ಉಪಯೋಗ ವಾಗುವ ವಿಜ್ಞಾನ ತಂತ್ರಜ್ಞಾನವನ್ನು ಮತ್ತು ಅವಿಷ್ಕಾರಗಳನ್ನು ಇವರು ಸ್ವಾಗತಿಸಿದರು. ವಿಜ್ಞಾನ–ತಂತ್ರಜ್ಞಾನಗಳು ಆರ್ಥಿಕ–ಸಾಮಾಜಿಕ ನ್ಯಾಯಗಳನ್ನು ಜನತೆಗೆ ಒದಗಿಸಲು ನೆರವಾಗಬೇಕು. ಕಾರ್ಮಿಕರಿಗೆ ನೋವುಂಟು ಮಾಡುವ ಅತೀವ ಶ್ರಮದಾಯಕ ದುಡಿಮೆಯನ್ನು ಕಡಿಮೆ ಮಾಡಬೇಕು. ಕಾರ್ಮಿಕರ ಉದ್ಯೋಗಗಳನ್ನು ರಕ್ಷಿಸಬೇಕು ಮತ್ತು ಅವರ ದುಡಿಮೆಯ ದಕ್ಷತೆಯನ್ನು ಹೆಚ್ಚಿಸಲು ನೆರವಾಗಬೇಕು. ಅಷ್ಟೇ ಮುಖ್ಯವಾಗಿ ಇವು ಪರಿಸರ ಸಂರಕ್ಷಣೆಗೆ ನೆರವಾಗಬೇಕು ಎಂಬುದು ಅವರ ವಾದವಾಗಿದೆ.

## ಪರಿಸರ ಸಂರಕ್ಷಣೆ

ಗಾಂಧೀ–ಕುಮಾರಪ್ಪ ಇಬ್ಬರೂ ಅಪ್ರತಿಮ ಪರಿಸರ ಪ್ರೇಮಿಗಳಾಗಿದ್ದರು. ಮಾನವ ಮತ್ತು ಪ್ರಕೃತಿ ಮಧ್ಯೆ ಸಾಮರಸ್ಯವಿರಬೇಕು. ಪರಿಸರವನ್ನು ಮಾನವ ಎಂದೂ ವಿನಾಶಗೊಳಿಸಬಾರದು. ಅದು ನಿರಂತರವಾಗಿ ಉಳಿದು ಬೆಳೆಯಲು ಪ್ರೋತ್ಸಾಹ ನೀಡಬೇಕು. ನಿರ್ಜೀವವಾಗಿ ಕಾಣುವ ಅನೇಕ ಸಂಪನ್ಮೂಲಗಳು ಪ್ರಕೃತಿಯಲ್ಲಡಗಿವೆ. ಅವು ಬೆಳೆಯುವುದೂ ಇಲ್ಲ ಮತ್ತು ಹೆಚ್ಚುವುದೂ ಇಲ್ಲ. ಇವುಗಳನ್ನು ಹೆಚ್ಚು ಹೆಚ್ಚು ಬಳಸಿದಂತೆ ಬರಿದಾಗುತ್ತಾ ಹೋಗುತ್ತವೆ. ಉದಾಹರಣೆಗೆ ಕಲ್ಲಿದ್ದಲು, ಕಬ್ಬಿಣ, ಕಚ್ಚಾ ತೈಲ, ವಿವಿಧ ಲೋಹಗಳ ಅದಿರುಗಳು ಮುಂತಾದವುಗಳು. ಇವುಗಳನ್ನು ಶೋಷಿಸಲು ಮಾನವನಿಗೆ ಯಾವ ಹಕ್ಕೂ ಇಲ್ಲ. ಸೌರಶಕ್ತಿ, ವಾಯುಶಕ್ತಿ, ಜೈವಿಕ ಶಕ್ತಿ ಮುಂತಾದ ಪುನರ್ ನವೀಕರಿಸಬಹುದಾದ ಶಕ್ತಿಗಳನ್ನು ಮಾನವ ಬಳಸಿಕೊಳ್ಳಬೇಕು. ಇವು ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸಹಾಯ ಮಾಡುತ್ತವೆ. ಪುನರ್ ನವೀಕರಿಸಬಹುದಾದ ಸಂಪನ್ಮೂಲ ಗಳನ್ನು ದುರ್ಬಳಕೆ ಮಾಡಲು, ಶೋಷಿಸಲು ಯಾವ ಹಕ್ಕೂ ಇಲ್ಲ. ಇವುಗಳು ಸೀಮಿತ ಪ್ರಮಾಣದಲ್ಲಿ ದೊರಕುವುದರಿಂದ ಬರಿದು ಮಾಡಬಾರದು. ಇದರಿಂದ ಪರಿಸರಕ್ಕೆ ಧಕ್ಕೆಯುಂಟಾಗುತ್ತದೆ. ಈ ಸಂಪನ್ಮೂಲಗಳನ್ನು ಮುಂದಿನ ತಲೆಮಾರಿಗೂ ದೊರೆಯುವಂತೆ ನಾವು ನೋಡಿಕೊಳ್ಳಬೇಕು. ಈ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸುವ ಉದ್ಯಮಗಳು ಪರ್ಯಾಯ ವಾದ, ಪುನರ್ ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಬಳಸಬೇಕು. ನಮ್ಮ ಜೀವನ ಮಾದರಿಯನ್ನು ಶಾಶ್ವತ ಅರ್ಥವ್ಯವಸ್ಥೆಯ ಮೇಲೆ ನೆಲೆಗೊಳಿಸಬೇಕಾದರೆ ಪುನರ್ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಬಳಸಬೇಕು. ಪುನರ್ ನವೀಕರಿಸಲಾಗದ ಸಂಪನ್ಮೂಲಗಳ ಬಳಕೆಯು ಅಸಾಮರಸ್ಯ ಮತ್ತು ಪರಿಸರಕ್ಕೆ ಹಾನಿಯುನ್ನುಂಟು ಮಾಡುವಂತಹದು. ಜೆ.ಸಿ.ಕೆ. ಪುನರ್ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಆಧರಿಸಿಸರಳ ತಂತ್ರಜ್ಞಾನಗಳನ್ನು ಬಳಸಲು ಅನೇಕ ಪ್ರಯೋಗಗಳನ್ನು ಮಾಡಿದರು. ಅನುಪಯುಕ್ತ ವಸ್ತುಗಳನ್ನು ಬಳಸಿ ಒಂದು ದೀಪದ ಮಾದರಿಯನ್ನು ಅವರು ತಯಾರಿಸಿದರು. ಜೆ.ಸಿ.ಕೆ ಯಂತಹ ಪರಿಸರವಾದಿಗಳು ಬಹಳ ಹಿಂದೆಯೇ ನೀಡಿದ ಎಚ್ಚರಿಕೆಗಳ ಬಗ್ಗೆ ಆಡಳಿತಗಾರರು ಗಮನ ಕೊಡುತ್ತಾ ಬಂದಿದ್ದರೆ ಇಂಧನ ಸಮಸ್ಯೆ ಈ ವೇಳೆಗೆ ಇಲ್ಲದಂತಾಗುತ್ತಿತ್ತು.

## ಗಾಂಧೀ–ಕುಮಾರಪ್ಪನವರ ದೃಷ್ಟಿಯ ವಿಕೇಂದ್ರೀಕೃತ ಯೋಜನೆ

ಗಾಂಧೀ–ಕುಮಾರಪ್ಪನವರು ವಿಕೇಂದ್ರೀಕೃತ ಯೋಜನೆಯ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದ್ದಾರೆ. ಗಾಂಧೀಜಿಯವರ ಸರ್ವೋದಯ ಯೋಜನೆಯ ಪ್ರಮುಖ ಉದ್ದೇಶ ಎಲ್ಲರ ಆರ್ಥಿಕ, ಸಾಮಾಜಿಕ, ನೈತಿಕ, ಅಭಿವೃದ್ಧಿ ಯಾಗಿದೆ. ಸರ್ವೋದಯ ಯೋಜನೆಯು ಎಲ್ಲರ ಕ್ಷೇಮಾಭ್ಯುದಯಕ್ಕೆ ಪ್ರೋತ್ಸಾಹ ನೀಡುತ್ತದೆ. ವಿಕೇಂದ್ರೀಕರಣವು ಸರ್ವೋದಯದ ಜೀವಾಳವಾಗಬೇಕು ಎಂದು ಇಬ್ಬರೂ ಬಯಸಿದರು. ಯೋಜನೆಯ ಜೀವಾಳ ಕೇಂದ್ರೀಕರಣ ವೆಂಬುದನ್ನು ಗಾಂಧೀಜಿ ಒಪ್ಪಲಿಲ್ಲ. ಕೇಂದ್ರೀಕರಣದಿಂದ ಯೋಜನೆಗೆ ಎಷ್ಟು ಸಹಾಯವಾಗುತ್ತದೆಯೋ ವಿಕೇಂದ್ರೀಕರಣ ದಿಂದಲೂ ಏಕೆ ಅಷ್ಟರಮಟ್ಟಿಗೆ ಸಹಾಯಕ ವಾಗಬಾರದು? ಎಂದು ಗಾಂಧೀಜಿ ಪ್ರಶ್ನಿಸಿದ್ದಾರೆ. ಅವರ ಅಂತ್ಯೋದಯ ಸಿದ್ಧಾಂತವು ಕೆಳಹಂತದಿಂದ ಅಭಿವೃದ್ಧಿಯಾಬೇಕೆಂಬ ಕಲ್ಪನೆಯ ಆಧಾರದ ಮೇಲೆ ಅಭಿವೃದ್ಧಿಗೊಂಡಿದೆ.

ಗ್ರಾಮೀಣ ಪ್ರದೇಶಗಳ ಸುಧಾರಣೆಗಾಗಿ ಕುಮಾರಪ್ಪ ಸದಾ ಚಿಂತನೆ ನಡೆಸುತ್ತಾ ಬಂದವರು. ಗ್ರಾಮೀಣ ಪ್ರದೇಶಗಳು

ಆರ್ಥಿಕವಾಗಿ ಪುನಃಶ್ಚೇತನಗೊಳ್ಳಲು ಸಮಗ್ರ ಗ್ರಾಮ ಪುನರ್ ರಚನಾ ಯೋಜನೆಯನ್ನು ಅವರು ಅಭಿವೃದ್ಧಿಪಡಿಸಿದರು. ಇದರ ಪ್ರಕಾರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ವ್ಯವಸಾಯ ಮತ್ತು ರೈತ ಕೇಂದ್ರೀಯೋಜನೆಗಳಾಗಬೇಕು ಆಗ ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಸುಭದ್ರವಾದ ತಳಹದಿ ಹಾಕಿದಂತೆ ಆಗುತ್ತದೆ. ಮಾನವ ಶಕ್ತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ನಿಜವಾದ ಬಂಡವಾಳವೆಂದು ಪರಿಗಣಿಸ ಬೇಕು. ಭಾರತೀಯ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇವುಗಳನ್ನು ಸೂಕ್ತರೀತಿಯಲ್ಲಿ ಬಳಕೆ ಮಾಡಬೇಕು.

ಗಾಂಧೀಜಿಯುವರು ಪ್ರತಿಯೊಂದು ಗ್ರಾಮವೂ ಸ್ವಾಯತ್ತಗಣರಾಜ್ಯವಾಗಬೇಕೆಂದು ಬಯಸಿದರು. ಅಂತೆಯೇ ಕುಮಾರಪ್ಪನವರು ಗ್ರಾಮ ಸಮೂದಾಯಗಳು ಸ್ವಾಯತ್ತ ಅಧಿಕಾರಗಳನ್ನು ಪಡೆದುಕೊಳ್ಳಬೇಕು ಮತ್ತು ಸ್ವಪರಿಪೂರ್ಣತೆ ಯನ್ನು ಸಾಧಿಸಬೇಕು. ಅಷ್ಟೇ ಅಲ್ಲದೆ ಇಲ್ಲಿ ಕುಮಾರಪ್ಪನವರು ಇನ್ನೂ ಅನೇಕ ಮಹತ್ತರ ವಿಷಯಗಳನ್ನು ಪ್ರತಿಪಾದಿಸಿದ್ದಾರೆ. ಇಂದು ಅವುಗಳ ಪ್ರಸ್ತುತತೆ ಏನೇ ಇರಲಿ ಅವರ ಮಾನವ ಕಳಕಳಿಯುನ್ನು ನಾವು ಅರ್ಥಮಾಡಿಕೊಳ್ಳಬೇಕು. ಕುಮಾರಪ್ಪನವರ ಪ್ರಕಾರ ಭೂಮಿಯ ಒಡೆತನವನ್ನು ಸಾಮಾಜೀಕರಣಗೊಳಿಸಬೇಕು. ಬೇಸಾಯದ ಹಕ್ಕು ರೈತನಿಗೆ ಸೇರಬೇಕು ಮತ್ತು ಉತ್ಪಾದನೆ ಅವನದಾಗ ಬೇಕು. ವ್ಯವಸಾಯದಲ್ಲಿನ ಕನಿಷ್ಟ ಕೂಲಿ ಇತರ ಕಾರ್ಮಿಕರಿಗೆ ಸಮವಾಗಿರಬೇಕು. ಹಣದ ಬಳಕೆ ಕಡಿಮೆ ಮಾಡಿ ಆದಷ್ಟು ಹೆಚ್ಚಿಗೆ ಪದಾರ್ಥ ವಿನಿಮಯ ಪದ್ದತಿಯನ್ನು ಜಾರಿಗೆ ತಂದು ವರ್ಷದ 12 ತಿಂಗಳೂ ಜೀವನ ಸುಸೂತ್ರವಾಗಿ ನಡೆಯುವ ರೀತಿಯಲ್ಲಿ ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸ ಬೇಕು ಎಲ್ಲರ ಬಾಳು ಹಸನಾಗಬೇಕು ಎಂಬುದಾಗಿತ್ತು.

## ಸಮತೋಲನ ಬೆಳವಣಿಗೆ ಅವಶ್ಯಕತೆ

ಭಾರತದಲ್ಲಿ ವಿಕೇಂದ್ರೀಕೃತ ಯೋಜನೆ ಉದ್ಧೇಶ ಸಮತೋಲನ ಆರ್ಥಿಕ ಬೆಳವಣಿಗೆಯನ್ನು ಗಳಿಸಲು ನೆರವಾಗು ವಂತಿರಬೇಕು. ಬಡತನ ನಿವಾರಣೆಗಾಗಿ ದುಡಿಯುವ ಕೈಗಳಿಗೆ ಸೂಕ್ತ ರೀತಿಯ ಉದ್ಯೋಗಾವಕಾಶಗಳು ದೊರೆಯುವಂತಾಗ ಬೇಕು. ಆಗ ಎಲ್ಲರಿಗೂ ತಮ್ಮ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ಗಾಂಧೀ–ಕುಮಾರಪ್ಪನವರು ಪ್ರತಿಪಾದಿಸಿದ ಸಮತೋಲನ ಬೆಳವಣಿಗೆ ವಿಧಾನವು ಐದು ರೀತಿಯ ಸಮತೋಲನಗಳನ್ನು ಸಾಧಿಸಲು ಬಯಸುತ್ತದೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಣೆ ಮಾಡಬಹುದು.

**1. ತಾತ್ವಿಕ ಸಮತೋಲನ :** ಆರ್ಥಿಕ ಪ್ರಗತಿ ಮತ್ತು ನೈತಿಕ ಪ್ರಗತಿಯ ನಡುವಿನ ಸಮತೋಲನವೇ ತಾತ್ವಿಕ ಸಮತೋಲನ. ಈ ತಾತ್ವಿಕ ಸಮತೋಲನವನ್ನು ಸಾಧಿಸಲು ಉತ್ಪಾದನೆಯನ್ನು ಗರಿಷ್ಟ ಮಟ್ಟದಿಂದ ಆದರ್ಶ ಮಟ್ಟಕ್ಕೆ ಬದಲಿಸಬೇಕು. ಬೋಗ ವಸ್ತುಗಳ ಸೇವೆಗಳ ಉತ್ಪಾದನೆಯನ್ನು ಅಧಿಕ್ಯದ ಮಟ್ಟದಿಂದ ಪರ್ಯಾಪ್ತಮಟ್ಟಕ್ಕೆ ಬದಲಿಸಬೇಕು. ಭೌತಿಕ ವಸ್ತುಗಳ ಉತ್ಪಾದನೆಯು ಒಬ್ಬ ವ್ಯಕ್ತಿಗೆ, ಒಂದು ಕುಟುಂಬಕ್ಕೆ ಅಥವಾ ಒಂದು ರಾಷ್ಟ್ರಕ್ಕೆ ಪರ್ಯಾಪ್ತ ಮಟ್ಟದವರೆಗೆ ಮಾತ್ರ ಹೆಚ್ಚಿಸಬೇಕು ಮತ್ತು ಅದರಿಂದಾಚೆ ನೈತಿಕ ಪ್ರಗತಿಯಾಗಬೇಕು ಎಂದು ಗಾಂಧೀ–ಕುಮಾರಪ್ಪ ಬಯಸಿದರು.

**2. ರಚನಾತ್ಮಕ ಸಮತೋಲನ:** ಗಾಂಧೀ–ಕುಮಾರಪ್ಪ ನವರು ಆದರ್ಶ ಗ್ರಾಮ ಮತ್ತು ಆದರ್ಶ ನಗರ ಸಮಾಜಗಳು ನಿರ್ಮಾಣವಾಗಬೇಕು ಎಂದು ಪ್ರತಿಪಾದಿಸಿದರು. ಗ್ರಾಮೀಣ ಅರ್ಥ ವ್ಯವಸ್ಥೆ ಮತ್ತು ನಗರಗಳ ಅರ್ಥ ವ್ಯವಸ್ಥೆಯ ಮಧ್ಯೆ ಅದರ್ಶ ಸಮತೋಲನ ಏರ್ಪಡಬೇಕು. ನಗರಗಳೂ ಗ್ರಾಮಗಳನ್ನು ಪೋಷಿಸುವಂತಿರಬೇಕು. ಯಾವ ರೀತಿಯಲ್ಲಿಯೂ ನಗರಗಳು ಗ್ರಾಮಗಳನ್ನು ಶೋಷಣೆಗೆ ಒಳಪಡಿಸಬಾರದು. ಗ್ರಾಮೀಣ ಪ್ರದೇಶಗಳಿಗೆ ತೊಂದರೆ ಯಾಗುವಂತ ನಗರಗಳು ಬೆಳೆಯಬಾರದು. ಆರ್ಥಿಕ ಚಟುವಟಿಕೆಗಳು ಕೇಂದ್ರೀಕರಣದಿಂದ ವಿಕೇಂದ್ರಿಕರಣದತ್ತ ಬದಲಾಗಬೇಕು.

**3. ಪರಿಸರ ಸಮತೋಲನ :** ಮನುಷ್ಯ ಮತ್ತು ಪ್ರಕೃತಿಯ ಮಧ್ಯೆ ಏರ್ಪಡಬೇಕಾದ ಸಮತೋಲನವೇ ಪರಿಸರ ಸಮತೋಲನ. ಗಾಂಧೀ–ಕುಮಾರಪ್ಪನವರು ಪರಿಸರ ರಕ್ಷಣೆ ಬಗ್ಗೆ ಅಪಾರ ಕಳಕಳಿ ಹೊಂದಿದ್ದರು. ಭಾರೀ ಪ್ರಮಾಣದ ಕೈಗಾರಿಕೀಕರಣ ಪರಿಸರಕ್ಕೆ ತರುವ ಧಕ್ಕೆಯ ಬಗ್ಗೆ ಇಬ್ಬರೂ ಜನತೆಯನ್ನು ಎಚ್ಚರಿಸುತ್ತಲೇ ಬಂದರು. ಭಾರೀ ಕೈಗಾರಿಕೆಗಳು ಯೂರೋಪ್ ರಾಷ್ಟ್ರಗಳಲ್ಲಿ ಸೃಷ್ಟಿಸಿದ ಮಾಲಿನ್ಯಗಳನ್ನು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಹಾಳುಗೆಡುವುತ್ತಿದ್ದುದನ್ನು ಕಣ್ಣಾರೆ

ಕಂಡವರು. ಪುನರ್ ನವೀಕರಿಸಲಾಗದ ನೈಸರ್ಗಿಕ ಸಂಪನ್ಮೂಲ ಗಳ ಬಳಕೆಯ ಬಗ್ಗೆ ಸಾಕಷ್ಟು ಎಚ್ಚರಿಕೆ ತೆಗೆದು ಕೊಳ್ಳಬೇಕು. ಪುನರ್ ನವೀಕರಿಸಬಹುದಾದ ನೈಸರ್ಗಿಕ ಸಂಪನ್ಮೂಲಗಳನ್ನು ಯುಕ್ತ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಪುನರ್ ನವೀಕರಿಸಬಹುದಾದ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಬಹುದು ಎಂಬುದಾಗಿ ಇವರು ಹೇಳುತ್ತಿದ್ದರು. ಗಾಂಧೀಜಿವರ ಸರ್ವೋದಯ ಅರ್ಥವ್ಯವಸ್ಥೆ ಮತ್ತು ಕುಮಾರಪ್ಪನವರು ಅಭಿವೃದ್ಧಿಪಡಿಸಿದ ಶಾಶ್ವತ ಅರ್ಥವ್ಯವಸ್ಥೆಯಲ್ಲಿ ಎರಡು ಪ್ರಮುಖ ಅಂಶಗಳು ಅಡಗಿವೆ. ಅವುಗಳೆಂದರೆ ಮೊದಲನೆಯದು ಜನತೆಯನ್ನು ಶೋಷಣೆ ಮಾಡದಿರುವುದು. ಎರಡನೆದು ನೈಸರ್ಗಿಕ ಸಂಪನ್ಮೂಲ ಗಳನ್ನು ಬರಿದು ಮಾಡಬಾರದು, ಅವುಗಳನ್ನು ಉಳಿಸಿ ಪೋಷಿಸಿಕೊಂಡು ಹೋಗಬೇಕು. ಇಂಗ್ಲೆಂಡ್‌ನ ಬ್ರಂಟ್‌ಲ್ಯಾಂಡ್ ಆಯೋಗ ಜನಪ್ರಿಯಗೊಳಿಸಿರುವ ನಿರಂತರ ಅಭಿವೃದ್ಧಿ ಎಂಬ ಪರಿಭಾಷೆ ನಿಘಂಟಿಗೆ ಸೇರುವ ಮುಂಚೆಯೇ ಕುಮಾರಪ್ಪನವರು ಶಾಶ್ವತ ಅರ್ಥಶಾಸ್ತ್ರ ಎಂಬ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಿ ಅದರ ಪರವಾಗಿ ಜನಾಭಿಪ್ರಾಯ ಸೃಷ್ಟಿಸಲು ಶ್ರಮಿಸಿದರು.

**5. ತಾಂತ್ರಿಕ ಸಮತೋಲನ :** ಗಾಂಧಿಯವರೇ ಆಗಲಿ ಕುಮಾರಪ್ಪನವರೇ ಆಗಲಿ ತಂತ್ರಜ್ಞಾನವನ್ನು ವಿರೋಧಿಸಿದ ವರಲ್ಲ. ತಂತ್ರಜ್ಞಾನ ಉದ್ಯೋಗಿಗಳನ್ನು ನಿರುದ್ಯೋಗಕ್ಕೆ ತಳ್ಳಬಾರದು ಎಂಬುದು ಅವರ ಆಶಯವಾಗಿತ್ತು. ಆದ್ದರಿಂಧ ಅವರು ಯುಕ್ತ ತಂತ್ರಜ್ಞಾನದ ಅವಶ್ಯಕತೆಯ ಬಗ್ಗೆ ಜನಾಭಿಪ್ರಾಯ ಮೂಡಿಸಲು ಯತ್ನಿಸಿದರು. ಇಲ್ಲಿ ತಾಂತ್ರಿಕ ಸಮತೋಲನವೆಂದರೆ ಸಣ್ಣ ಪ್ರಮಾಣ ಮತ್ತು ಭಾರೀ ಪ್ರಮಾಣದ ತಂತ್ರಜ್ಞಾನಗಳ ನಡುವೆ ಸೂಕ್ತ ಸಮತೋಲನ ವೇರ್ಪಡುವುದು. ಇದರ ಉದ್ದೇಶ ತಂತ್ರಜ್ಞಾನಗಳಿಂದ ದೊರೆಯುವ ವಿವಿಧ ಅನುಕೂಲಗಳನ್ನು ಆದರ್ಶಮಟ್ಟಕ್ಕೆ ದೊರಕುವಂತೆ ಮಾಡಲು ಇವೆರಡು ತಂತ್ರಜ್ಞಾನಗಳ ಸೂಕ್ತ ಸಂಮಿಶ್ರಣವಾಗಬೇಕೆಂದು ಇವರಿಬ್ಬರೂ ವಾದಿಸಿದ್ದಾರೆ.

**6. ಹಂಚಿಕೆಯ ಸಮತೋಲನ :** ಆದಾಯ ಹಾಗೂ ಸಂಪತ್ತಿನ ಹಂಚಿಕೆಯಲ್ಲಿ ಸಮತೋಲನ ಏರ್ಪಾಡಾಗ ಬೇಕಾದುದೇ ಹಂಚಿಕೆಯ ಸಮತೋಲನ ಬೆಳವಣಿಗೆಯು ಹೆಚ್ಚಾದಂತೆ ಸಂಪತ್ತಿನ ನ್ಯಾಯವಾದ ಹಂಚಿಕೆ ಆಗಬೇಕು. ಮೇಲು ಕೀಳು ಎಂಬುದು ಇರಬಾರದು ಎಂಬುದು ಗಾಂಧೀ-ಕುಮಾರಪ್ಪನವರ ವಿಚಾರಧಾರೆಯ ಆಶಯವಾಗಿದೆ. ಹಂಚಿಕೆಯ ಸಮತೋಲನ ಸಾಧನೆಗಾಗಿ ಇವರು ಧರ್ಮದರ್ಶಿತ್ವ ಸಿದ್ಧಾಂತ ವನ್ನು ಅನುಷ್ಠಾನಗೊಳಿಸಲು ಜನತೆ ಪ್ರಯತ್ನ ಪಡಬೇಕೆಂದು ಸಲಹೆ ನೀಡಿದರು. ನಿಜವಾದ ಅರ್ಥದಲ್ಲಿ ಹಂಚಿಕೆಯ ಸಮತೋಲನವೇರ್ಪಡಬೇಕಾದರೆ ಪ್ರತಿಯೊಬ್ಬರು ತಮ್ಮಲ್ಲಿರುವ ದೈಹಿಕ, ಬೌದ್ಧಿಕ ಶಕ್ತಿ, ವಸ್ತು ಸಂಪತ್ತಿಗೂ ತಾವು ಕೇವಲ ಧರ್ಮದರ್ಶಿಗಳೆಂದು ತಿಳಿದುಕೊಂಡು ಅವುಗಳನ್ನು ತಮ್ಮ ಆತ್ಮೀಯ ವಿಕಾಸಕ್ಕೂ ಸಮಾಜದ ಒಳಿತಿಗೂ ಉಪಯೋಗಿಸ ಬೇಕು. ಬುದ್ಧಿಶಕ್ತಿ, ದೈಹಿಕ ಶಕ್ತಿ, ಶ್ರೀಮಂತಿಕೆ ಇರುವವರು ಎಷ್ಟು ಬೇಕಾದರೂ ಸಂಪಾದನೆ ಮಾಡಲಿ. ಆದರೆ ಅವರು ತಮ್ಮ ಸಂಪತ್ತು ತಮ್ಮದೊಬ್ಬರದೇ ಅಲ್ಲ ಅದು ಸಮಾಜದ ಅನಾನುಕೂಲಸ್ಥರು, ದೀನದುರ್ಬಲರದು ಸಹಾ ಆಗಿದೆ ಎಂಧು ಭಾವಿಸಬೇಕು. ದುಡಿದಿರುವವರು ನ್ಯಾಯವಾಗಿ ಬೇಕಾದ ಅವಶ್ಯಕತೆಗಳಿಗೆ ಅದರಲ್ಲಿ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳಲಿ. ಉಳಿದುದನ್ನು ಸಮಾಜಕ್ಕೆ ಬಳಸಬೇಕು. ಈ ವಿಚಾರವನ್ನು ಅಂಗೀಕರಿಸಿದರೆ, ಬಂಡವಾಳಶಾಹಿಯಿಂದಾಗುವ ಅಸಮಾನತೆ, ಮತ್ತು ಶೋಷಣೆಗಳು ಹಾಗೂ ಸಮತಾವಾದದಿಂದ ಉಂಟಾಗುವ ಹಿಂಸೆ ಒಮ್ಮೇಲೇ ಇಲ್ಲದಂತಾಗುವವು.

## ಉಪಸಂಹಾರ

ತಾತ್ವಿಕ, ರಚನಾತ್ಮ, ಪರಿಸರ, ತಾಂತ್ರಿಕ ಮತ್ತು ಹಂಚಿಕೆಯ ಸಮತೋಲನಗಳ ಗಾಂಧೀ-ಕುಮಾರಪ್ಪ ಅಭಿವೃದ್ಧಿ ವಿಷಯಗಳ ಆರ್ಥಿಕ ವಿಚಾರಧಾರೆಯು ಇಂದಿನ ನಾನಾ ಸಮಸ್ಯೆಗಳಿಗೆ ಸೂಕ್ತ ಪರಿಹಾರವಾಗಿದೆ. ಇವರಿಬ್ಬರೂ ನೈಸರ್ಗಿಕ ಸಂಪನ್ಮೂಲಗಳ ಬಡತನ, ವಿವಿಧ ಬಗೆಯ ಮಾಲಿನ್ಯಗಳು, ನಿರುದ್ಯೋಗದಂತಹ ಸಮಸ್ಯೆಗಳನ್ನು ನಿವಾರಣೆ ಮಾಡುವುದು ಹೇಗೆ? ಎಂದು ಗಾಢ ಚಿಂತನೆ ನಡೆಸಿದರು. ಬಡತನ ನಿರುದ್ಯೋಗ ಸಮಸ್ಯೆಗಳನ್ನು ಆರ್ಥಿಕ ಚಟುವಟಿಕೆಗಳ ವಿಕೇಂದ್ರೀಕರಣ, ಖಾದೀ ಗ್ರಾಮೋದ್ಯೋಗ ಕೈಗಾರಿಕೆಗಳ ಕ್ರಮಬದ್ಧ ಅಭಿವೃದ್ಧಿ, ಯುಕ್ತ ತಂತ್ರಜ್ಞಾನದ ಬಳಕೆಗಳ ಮೂಲಕ ನಿವಾರಣೆ ಮಾಡಬಹುದು ಎಂದು ಅವರು ಭಾವಿಸಿದ್ದರು.

❑

# ನಿರ್ಮಲ

ಸಂಪೂರ್ಣ ಸ್ವಚ್ಛತಾ ಆಂದೋಲನ

ಸ್ವಚ್ಛ ಕರ್ನಾಟಕ

## ನುಡಿ ನಿರ್ಮಲ

ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವು ರಾಜ್ಯದಲ್ಲಿ 2005, ಅಕ್ಟೋಬರ್ 2 ರಿಂದ ಜಾರಿಯಲ್ಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛ ಹಾಗೂ ಸುಂದರ ಪರಿಸರ ನಿರ್ಮಾಣ ಮಾಡುವುದು ಆಂದೋಲನದ ಪ್ರಮುಖ ಉದ್ದೇಶವಾಗಿದೆ. ಹಳ್ಳಿಗಳ ಬದುಕು ಹಸನುಗೊಳ್ಳಬೇಕೆಂದರೆ, ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಬೇಕೆಂದರೆ, ಗ್ರಾಮೀಣ ಜನರ ಆರೋಗ್ಯ ಸುಧಾರಿಸಬೇಕು. ಸ್ವಚ್ಛತೆ ಹಾಗೂ ನಿರ್ಮಲ ಪರಿಸರ ಎಲ್ಲಿ ಇರುತ್ತದೆಯೋ ಅಲ್ಲಿ ರೋಗ-ರುಜಿನಗಳು ತಂತಾನೆ ಕಡಿಮೆಯಾಗುತ್ತವೆ. ಆರೋಗ್ಯಕ್ಕೆ ಹಾಗೂ ಆಸ್ಪತ್ರೆಗಳಿಗೆ ಮಾಡುವ ಖರ್ಚೂ ಸಹ ಕಡಿಮೆಯಾಗುತ್ತದೆ. ಅವರ ಆರೋಗ್ಯ ಸುಧಾರಿಸಿದಲ್ಲಿ ಸಮರ್ಥವಾಗಿ ದುಡಿಮೆ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಸ್ವಚ್ಛತೆ ಮತ್ತು ಶೌಚಾಲಯಗಳು ಜನ ಜೀವನದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಗ್ರಾಮೀಣ ಸ್ವಚ್ಛತೆಯ ಅನುಷ್ಠಾನಕ್ಕಾಗಿ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಜನರಲ್ಲಿ ಸ್ವಚ್ಛತೆಯ ಕುರಿತು ಹಾಗೂ ಅನೈರ್ಮಲ್ಯದಿಂದ ಆಗುವ ದುಷ್ಪರಿಣಾಮಗಳ ಕುರಿತು ಅರಿವು ಹಾಗೂ ತಿಳಿವಳಿಕೆ ಮೂಡಿಸಲು ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಮೂಲಕ ನೈರ್ಮಲ್ಯದ ಅಭ್ಯಾಸಗಳ ಕುರಿತು ಜನರಲ್ಲಿ ಇರುವ ತಪ್ಪು ಮನೋಭಾವನೆಗಳನ್ನು ತೊಡೆದು ಹಾಕಲು ಶೌಚಾಲಯಗಳ ಕುರಿತು ಬೇಡಿಕೆಯನ್ನು ಉಂಟುಮಾಡಲು ಕ್ರಮವಹಿಸಲಾಗುತ್ತಿದೆ. ಆದಾಗ್ಯೂ ರಾಜ್ಯದ ಬಹಳಷ್ಟು ಜಿಲ್ಲೆಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಪ್ರಗತಿ ನಿರೀಕ್ಷಿತ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ.

ಪ್ರಗತಿ ಹಿಂದುಳಿದಿರುವ ಜಿಲ್ಲೆಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ತೀವ್ರಗೊಳಿಸುವ ಸಲುವಾಗಿ ಆಂದೋಲನವನ್ನು ವಾರ್ಡ್ ಮಟ್ಟದಿಂದ ಜಿಲ್ಲಾ ಹಂತದವರೆಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಹೊಸ ಕಾರ್ಯತಂತ್ರಗಳನ್ನು ರೂಪಿಸಲಾಗಿದೆ. ಈ ಕಾರ್ಯತಂತ್ರಗಳನ್ನು ಅಳವಡಿಸಿಕೊಂಡು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಆಂದೋಲನವನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ನಿರ್ದಿಷ್ಟ ಕ್ರಿಯಾಯೋಜನೆ ತಯಾರಿಸುವ ಕುರಿತು ಚಿಂತನ-ಮಂಥನ ನಡೆಸಲು ಜಿಲ್ಲೆಗಳ ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಹಂತದ ಕಾರ್ಯಾಗಾರಗಳನ್ನು ನಡೆಸಲಾಗಿದೆ. ಈ ಕಾರ್ಯಾಗಾರಗಳಲ್ಲಿ ಜಿಲ್ಲೆಯ ಎಲ್ಲ ಹಂತಗಳ ಅಧಿಕಾರಿಗಳು ಪಾಲ್ಗೊಂಡು ಜಿಲ್ಲೆಯಲ್ಲಿ ನೈರ್ಮಲ್ಯದ ಪ್ರಗತಿಯನ್ನು ತೀವ್ರಗೊಳಿಸಲು ಯೋಜನೆ ರೂಪಿಸಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳೂ ಬದ್ಧತೆಯೊಂದಿಗೆ ಕಾರ್ಯಪ್ರವೃತ್ತವಾಗಲಿ ಎಂದು ಆಶಿಸುತ್ತೇನೆ.


– **ಡಾ|| ಜೆ. ರವಿಶಂಕರ್,** ಐ.ಎ.ಎಸ್

ನಿರ್ದೇಶಕರು,

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ

# ಸ್ವಚ್ಛತೆಯಲ್ಲಿ ಸುಸ್ಥಿರತೆ – ದಕ್ಷಿಣ ಕನ್ನಡ ಜಿಲ್ಲೆಯ ಹೆಗ್ಗಳಿಕೆ



ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅತ್ಯಂತ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಿದ ಹೆಗ್ಗಳಿಕೆ ದಕ್ಷಿಣ ಕನ್ನಡ ಜಿಲ್ಲೆಯದ್ದಾಗಿದೆ. ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಜನಸಮುದಾಯ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಒಟ್ಟುಗೂಡಿ ಪರಸ್ಪರ ಕೈಜೋಡಿಸುವ ಮೂಲಕ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿದೆ. ಸಾಧನೆಗೆ ಕಳಶವಿಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯ 203 ಗ್ರಾಮ ಪಂಚಾಯತ್‌ಗಳು ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ. ಸಂಪೂರ್ಣ ಸ್ವಚ್ಛತೆಯ ಸಾಧನೆಯ ನಂತರ ಸುಸ್ಥಿರತೆಗೆ ಆದ್ಯತೆ ನೀಡಲಾಗಿದೆ. ಆಯಾಯ ಗ್ರಾಮ ಪಂಚಾಯತ್‌ನಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯಗಳ ವಿಧ, ಪ್ರಮಾಣವನ್ನು ಆಧರಿಸಿ ಯಾವುದಾದರೂ ಒಂದು ಸರಳ, ಮಿತವ್ಯಯ ಮತ್ತು ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸುವ ಕುರಿತು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಬೇರೆ ಬೇರೆ ರಾಜ್ಯ, ಜಿಲ್ಲೆಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿ, ವಿನೂತನ ಮಾದರಿಯ ಯೋಜನೆಗಳನ್ನು ರೂಪಿಸಲಾಗಿದೆ.

ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಹಸಿಕಸದಿಂದ ಸಾವಯವ ಗೊಬ್ಬರ ತಯಾರಿಸುವ ಜೈವಿಕ ಘಟಕ, ಅಡುಗೆ ತ್ಯಾಜ್ಯದಿಂದ ಅಡುಗೆ ಅನಿಲ ಉತ್ಪತ್ತಿ ಮಾಡುವ ಬಯೋಗ್ಯಾಸ್ ಉತ್ಪತ್ತಿ ಘಟಕ, ದ್ರವ ತ್ಯಾಜ್ಯ ಸಂಸ್ಕರಣಾ ಘಟಕ, ಒಣಕಸಗಳ ಸಂಗ್ರಹಣೆಗೆ ಪ್ಲಾಸ್ಟಿಕ್ ಸೌಧ ಇತ್ಯಾದಿ ವಿನೂತನ ಮಾದರಿಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಲಾಗುತ್ತಿದೆ.



ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತ್‌ಗಳನ್ನು ಎ, ಬಿ, ಸಿ, ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಎ ಗ್ರೇಡ್ ಪಂಚಾಯತ್‌ಗಳಲ್ಲಿ ಕಸದ ಉತ್ಪತ್ತಿ ಪ್ರಮಾಣ ಹೆಚ್ಚಾಗಿರುವ ಕಾರಣ ಭಗೀರಥ ಸಂಸ್ಥೆಯ ತಾಂತ್ರಿಕ ಸಲಹೆಯೊಂದಿಗೆ ಓ.ಎಸ್–1 ದ್ರಾವಣ ಬಳಸಿ ಸಾವಯವ ಗೊಬ್ಬರ ತಯಾರಿಸಲಾಗುತ್ತಿದೆ. ಉಳಿದ ಬಿ ಮತ್ತು ಸಿ ಗ್ರೇಡ್ ಪಂಚಾಯತ್‌ಗಳಲ್ಲಿ ಲ್ಯಾಂಡ್‌ಫಿಲ್ ಟೆಕ್ನಾಲಜಿಯನ್ನು ಮತ್ತು ಒಣಕಸ, ಪ್ಲಾಸ್ಟಿಕ್ ಕಸ, ಗಾಜಿನ ತ್ಯಾಜ್ಯ ಲೋಹ ತ್ಯಾಜ್ಯಗಳ ಸಂಗ್ರಹಣೆಗೆ ವಿಭಿನ್ನ ಮಾದರಿಯ ಪ್ಲಾಸ್ಟಿಕ್ ಸೌಧಗಳನ್ನು ನಿರ್ಮಿಸಿಕೊಂಡು ಉಪಯೋಗಿಸಲಾಗುತ್ತಿದೆ.

ಈ ಎಲ್ಲ ಯೋಜನೆಗಳಿಗೆ ನಿರ್ಮಲ ಗ್ರಾಮ ಪ್ರಶಸ್ತಿ ಅನುದಾನ, ಹಾಗೂ ಆಂದೋಲನದ ಅಡಿಯಲ್ಲಿ ಒದಗಿಸಲಾದ ಘನ ದ್ರವ ತ್ಯಾಜ್ಯ ವಿಲೇವಾರಿ ಅನುದಾನ, ಸುವರ್ಣ ಗ್ರಾಮೋದಯ ಯೋಜನೆ ಅನುದಾನ, ಗ್ರಾಮ ಪಂಚಾಯತ್ ನಿಧಿ ಮತ್ತು ಸಾರ್ವಜನಿಕ ದೇಣಿಗೆಯನ್ನು ಸಂಯೋಜಿಸಲಾಗಿದೆ.

ಬೆಳ್ತಂಗಡಿ ತಾಲೂಕಿನ ಲಾಯಿಲ ಗ್ರಾಮಪಂಚಾಯತ್‌ನಲ್ಲಿ ಓ.ಎಸ್–1 ದ್ರಾವಣವನ್ನು ಬಳಸಿ ಹಸಿಕಸದಿಂದ ಸಾವಯವ ಗೊಬ್ಬರ ತಯಾರಿಸಿ **ಲಾಯಿಲಾ ಗೋಲ್ಡ್** ಎಂಬ ಹೆಸರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

ಇದೇ ಮಾದರಿಯಲ್ಲಿ ಬಂಟ್ವಾಳ ತಾಲೂಕಿನ ಕುರ್ನಾಡು, ಗೋಳ್ತಮಜಲು, ಮಂಗಳೂರು ತಾಲೂಕಿನ ಮೆನ್ನಬೆಟ್ಟು, ಕಿನ್ನಿಗೋಳಿ ಮತ್ತು ಪುತ್ತೂರು ತಾಲೂಕಿನ ಕಡಬ ಗ್ರಾಮ ಪಂಚಾಯತ್‌ಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಜೈವಿಕ ಘಟಕಗಳು ಕಾರ್ಯಾರಂಭಗೊಂಡಿದೆ.



ಬಂಟ್ವಾಳ ತಾಲೂಕಿನ ಬಾಳ್ತಿಲ, ಸಂಗಬೆಟ್ಟು, ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ, ಅಳದಂಗಡಿ, ಕುವೆಟ್ಟು ಗ್ರಾಮ ಪಂಚಾಯತ್‌ಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಕನಿಷ್ಠ 30 ಗ್ರಾಮ ಪಂಚಾಯತ್‌ಗಳಲ್ಲಿ ಇದೇ ಮಾದರಿಯ ಘಟಕಗಳನ್ನು ಅನುಷ್ಠಾನಗೊಳಿಸುವ ಯೋಜನೆ ತಯಾರಿಸಲಾಗಿದೆ.

## 'ಸೇಫ್ಟಿ' ನ್ಯಾಪ್‌ಕಿನ್

ಗ್ರಾಮೀಣ ಬಡಜನರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ತಯಾರಿಸುವ ದಿಟ್ಟ ಹೆಜ್ಜೆಯನ್ನು ದ.ಕ. ಜಿಲ್ಲಾ ಪಂಚಾಯತ್ ತೆಗೆದುಕೊಂಡಿದೆ. ಇದರಿಂದ ಹೆಣ್ಣು ಮಕ್ಕಳಿಗೆ ಮುಟ್ಟಿನ ಸಮಯದಲ್ಲಿ ಬರುವಂತಹ ನಂಜು ರೋಗಗಳನ್ನು 90% ಕಡಿಮೆಮಾಡಬಹುದು.

ಅಂದಾಜು ಪ್ರಕಾರ ಭಾರತದಲ್ಲಿ 19% ಮಹಿಳೆಯರು ಉತ್ತಮ ಯೋಗ್ಯ ಬಟ್ಟೆಗಳನ್ನು ಋತುಸ್ರಾವ ಸಂದರ್ಭದಲ್ಲಿ ಬಳಸುತ್ತಿದ್ದು ಉಳಿದ 81% ಹೆಣ್ಣು ಮಕ್ಕಳು ಕಳಪೆ ದರ್ಜೆಯ ಬಟ್ಟೆಗಳನ್ನು ಬಳಸುತ್ತಿದ್ದಾರೆ. ಉಪಯೋಗಿಸಿದ ಬಟ್ಟೆಗಳನ್ನು ಒಗೆದು ಪುನರ್ ಬಳಕೆ ಮಾಡುತ್ತಾರೆ. ಕಾರಣ ಮಾರುಕಟ್ಟೆಯಲ್ಲಿ ಸಿಗುವ ಪ್ಯಾಡ್‌ನ ಬೆಲೆ ಹೆಚ್ಚಾಗಿರುವುದು. ಬಟ್ಟೆಗಳ ಪುನರ್ ಬಳಕೆಯಿಂದ ಕ್ರಮೇಣ ಬಟ್ಟೆ ತೇವವನ್ನು ಹೀರುವ ಗುಣವನ್ನು ಕಳೆದುಕೊಳ್ಳುತ್ತದೆ.



ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಋತುಸ್ರಾವ ಸಂದರ್ಭದಲ್ಲಿ ಉಪಯೋಗಿಸಿದ ಬಟ್ಟೆಗಳನ್ನು ಒಗೆದು ಯಾರಿಗೂ ಕಾಣದಂತೆ ಬಚ್ಚಲಲ್ಲಿ, ಕತ್ತಲ ಕೋಣೆಯಲ್ಲಿ ಒಣಹಾಕಲಾಗುತ್ತದೆ. ಇದರಿಂದ ವೈಯಕ್ತಿಕ ಸ್ವಚ್ಛತೆಗೆ ತೊಂದರೆಯಾಗುತ್ತದೆ. ಹಾಗೂ ಕೆಲಸದ ವೇಳೆಯಲ್ಲಿ ಬಹಳ ಕಿರಿಕಿರಿಯನ್ನುಂಟು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಾನಿಟರಿ ನ್ಯಾಪ್‌ಕಿನ್ ತಯಾರಿಕ ಘಟಕಗಳ ಸ್ಥಾಪನೆಗೆ ವಿಶೇಷ ಒತ್ತು ನೀಡಲಾಗಿದೆ. ಯಾಕೆಂದರೆ ಪ್ರಸ್ತುತ ಮಾರುಕಟ್ಟೆಯಲ್ಲಿ ಲಭ್ಯವಿರುವ ನ್ಯಾಪ್‌ಕಿನ್‌ಗಳು ಸ್ವಯಂಚಾಲಿತ ಯಂತ್ರಗಳಿಂದ ತಯಾರಾಗುತ್ತಿವೆ. ಇದನ್ನು ಬಹುರಾಷ್ಟ್ರೀಯ ಕಂಪೆನಿಗಳು ನಡೆಸುತ್ತಿದ್ದಾರೆ ಬೆಳ್ತಂಗಡಿ ತಾಲೂಕಿನ ಲ್ಯಾಲ ಗ್ರಾಮಪಂಚಾಯತ್‌ನ ಐಸಿರಿ ಸ್ವಸಹಾಯ ಸಂಘದ ಸದಸ್ಯರೇ ಸ್ವತಃ ತಯಾರಿಸುವ **'ಸೇಫ್ಟಿ'** ನ್ಯಾಪ್‌ಕಿನ್‌ಗಳು ಜನ ಮನ್ನಣೆಗೆ ಪಾತ್ರವಾಗಿವೆ.

ಇದು ಗ್ರಾಮೀಣ ಭಾಗದ ಸ್ತ್ರೀಶಕ್ತಿ ಅಥವಾ ಇತರ ಸ್ವಸಹಾಯ ಸಂಘಗಳಿಗೆ ಒಂದು ಆದಾಯ ಉತ್ಪನ್ನ ಕಾರ್ಯಕ್ರಮವಾಗಿ ರೂಪುಗೊಳ್ಳುತ್ತಿದೆ. ಒಂದು ಘಟಕ ಸ್ಥಾಪನೆಯಾಗಿ ಸರಿಯಾಗಿ ಕಾರ್ಯ ನಿರ್ವಹಿಸಿದ್ದಲ್ಲಿ ಕಡಿಮೆ ಪಕ್ಷ 40 ರಿಂದ 50 ಜನಕ್ಕೆ ಖಾಯಂ ಕೆಲಸ ಸಿಕ್ಕಂತಾಗುತ್ತದೆ. ಇದೊಂದು ಹೊಸ ಮಾದರಿ ಉದ್ಯೋಗವಾಗಿದ್ದು ಇದಕ್ಕೆ ಸಾಕಷ್ಟು ಒತ್ತುಕೊಡುವುದು ಅವಶ್ಯವಿರುತ್ತದೆ.



ಲಾಯಿಲ ಗ್ರಾಮದ ಐಸಿರಿ ಸ್ವಸಹಾಯ ಸಂಘದ 10 ಜನ ಸದಸ್ಯರಾದ ಶ್ರೀಮತಿ ಯಶೋಧ, ಉಷ, ಹುಸೈನಾಬಿ, ಶಾಲಿನಿ, ಲಕ್ಷ್ಮಿ ಡಿ., ನಿರ್ಮಲ, ಯಶೋಧ, ಸುಮ, ಸುನೀತಾ ಮತ್ತು ಪೂರ್ಣಿಮ ಇವರನ್ನು ಸ್ವರ್ಣ ಜಯಂತಿ ಸ್ವರಾಜ್ ರೋಜ್‌ಗಾರ್ ಯೋಜನೆಯಡಿ ಮೈಸೂರಿನ ಪಿರಿಯಾ ಪಟ್ಟಣದಲ್ಲಿರುವ ಕಾವೇರಿ ಮಾತಾ ಟ್ರಸ್ಟ್ (ರಿ.)ನಲ್ಲಿ ರೂ. 25,000/– ವೆಚ್ಚದಲ್ಲಿ, 5 ದಿನಗಳ ಸ್ಥಾನಿಕ ತರಬೇತಿಗೆ ಒಳಪಡಿಸಲಾಯಿತು. ಈ ಘಟಕದ ಸ್ಥಾಪನೆಗೆ ಸಂಪೂರ್ಣ ತಾಂತ್ರಿಕ ಸಲಹೆಯನ್ನು ಕಾವೇರಿ ಮಾತಾ ಟ್ರಸ್ಟ್ (ರಿ.)ನ ಕಾರ್ಯ ನಿರ್ವಾಹಕ ನಿರ್ದೇಶಕರಿಂದ ಪಡೆಯಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಅಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಪಿ. ಶಿವಶಂಕರ್‌ರವರು ಜಿಲ್ಲೆಯ ನಬಾರ್ಡ್ ಎ.ಜಿ.ಎಂ. ಶ್ರೀ ಪ್ರಸಾದ್ ರಾವ್ ಜೊತೆ ಸಮಾಲೋಚಿಸಿದಂತೆ ಸುಮಾರು ರೂ. 7,33,952/– ಮೊತ್ತದ ಯೋಜನಾ ಘಟಕವನ್ನು ತಯಾರಿಸಲಾಯಿತು. ಇದರಲ್ಲಿ ರೂ. 4,33,750/– ಮೊತ್ತ ಧನ ಸಹಾಯವನ್ನು ನಬಾರ್ಡ್‌ನಿಂದ ಬಿಡುಗಡೆಯಾಗಿ ಪ್ಯಾಡ್‌ಗಳ ಉತ್ಪಾದನೆಗೆ ಬೇಕಾದ ಎಲ್ಲ ಯಂತ್ರೋಪಕರಣಗಳ ವ್ಯವಸ್ಥೆಯೊಂದಿಗೆ 'ಸೇಫ್ಟಿ' ಎಂಬ ಹೆಸರಲ್ಲಿ ನ್ಯಾಪ್‌ಕಿನ್‌ಗಳನ್ನು ದಿನಾಂಕ 28–09–2011 ರಂದು ವಿಧ್ಯುಕ್ತವಾಗಿ ಮಾರುಕಟ್ಟೆಗೆ ಬಿಡುಗಡೆಮಾಡಲಾಗಿದೆ. ಪ್ಯಾಡ್‌ಗಳ ಗುಣಮಟ್ಟ ಸಹ ಉತ್ತಮವಾಗಿದ್ದು ಅತ್ಯಂತ ಕಡಿಮೆ ಬೆಲೆಯಲ್ಲಿ ನೀಡಲಾಗುತ್ತಿದೆ.

## 'ಸೇಫ್ಟಿ' ನ್ಯಾಪ್‌ಕಿನ್‌ನ ಅನುಕೂಲತೆಗಳು

- ನಮ್ಮ ಸಂಘದ ಮಹಿಳೆಯರೇ ತಯಾರಿಸಿದ ನ್ಯಾಪ್‌ಕಿನ್ ಪ್ಯಾಡ್.
- ಮರದ ನಾರು ಹಾಗೂ ಹತ್ತಿಯನ್ನು ಬಳಸುವುದರಿಂದ ಪರಿಸರಕ್ಕೆ ಹಾನಿ ಉಂಟಾಗುವುದಿಲ್ಲ.
- ನ್ಯಾಪ್‌ಕಿನ್ ಪ್ಯಾಡ್ ಬಳಸಿ ಬಿಸಾಕುವುದರಿಂದ ಸ್ವಚ್ಛತೆಯನ್ನು ಕಾಪಾಡಲು ಸುಲಭವಾಗುತ್ತದೆ.
- ಕಡಿಮೆ ದರದಲ್ಲಿ ಲಭ್ಯವಾಗುವ ಗುಣಮಟ್ಟದ ನ್ಯಾಪ್‌ಕಿನ್ ಪ್ಯಾಡ್.
- ನ್ಯಾಪ್‌ಕಿನ್ ಪ್ಯಾಡ್ ತಯಾರಿಕೆಯಲ್ಲಿ ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸುವುದಿಲ್ಲ.





❖ ಬಹಳ ಮುಖ್ಯವಾದ ಒಂದು ಅಂಶವೇನೆಂದರೆ, ನ್ಯಾಪ್‌ಕಿನ್ ಪ್ಯಾಡ್‌ಗಳು ಕಡಿಮೆ ದರದಲ್ಲಿ ಸಿಗುವ ಜೊತೆಗೆ ಈ ನ್ಯಾಪ್‌ಕಿನ್ ಪ್ಯಾಡ್‌ಗಳ ತಯಾರಿಕೆಯಲ್ಲಿ ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸುವುದಿಲ್ಲ ಆದರೆ ಮಾರುಕಟ್ಟೆಯಲ್ಲಿ ಸಿಗುವ ನ್ಯಾಪ್‌ಕಿನ್ ಪ್ಯಾಡ್‌ಗಳ ತಯಾರಿಕೆಯಲ್ಲಿ ರಾಸಾಯನಿಕ ವಸ್ತುಗಳನ್ನು ಬಳಸಲಾಗುತ್ತದೆ ಇದರಿಂದ ಹೆಣ್ಣು ಮಕ್ಕಳಿಗೆ ಬರುವ ಗುಹ್ಯ ನಂಜುರೋಗಗಳು ಹಾಗೂ ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗುತ್ತದೆ.

## ಕಡಿಮೆವೆಚ್ಚದಲ್ಲಿ ಸ್ಯಾನಿಟರಿ ನಾಪ್‌ಕಿನ್ ತಯಾರಿಕಾ ಘಟಕ

1. **ಡಿ–ಫೈಬ್ರೇಷನ್ ಯಂತ್ರ :–** ನ್ಯಾಪ್‌ಕಿನ್ ತಯಾರಿಕೆಗೆ ಬೇಕಾಗುವ ಮರದ ನಾರು ಷೀಟ್ ಲೆಕ್ಕದಲ್ಲಿ ಸಿಗುತ್ತದೆ. ಇದನ್ನು ಡಿ–ಫೈಬರ್ ಮಾಡಬೇಕಾಗುತ್ತದೆ. ಈ ಯಂತ್ರವು ಸಾಂಪ್ರದಾಯಿಕ ಮಿಕ್ಸರ್ ಗ್ರೈಂಡರ್ ತರ ಇರುತ್ತದೆ. ಇದರ ಮೇಲ್ಭಾಗದಲ್ಲಿ ಒಂದು ಬಾಲ್ದಿ ಇದೆ. ಇದರ ತಳ ಭಾಗದಲ್ಲಿ 4 ಬ್ಲೇಡ್‌ಗಳಿವೆ. ಇದು ಒಂದು ನಿಮಿಷಕ್ಕೆ 10,000 ಸಾರಿ ತಿರುಗುತ್ತದೆ. ಒಂದು ಸಾರಿ ಈ ಬಾಲ್ದಿಯೊಳಗೆ 150 ಗ್ರಾಂ ನಾರು ಒಂದು ಕ್ಯುಬಿಕ್ ಅಡಿ ಡಿ–ಫೈಬರ್ ಆದ ಮೆತ್ತಗಿನ ಹರಳೆ ರೂಪದ ನಾರು ಹೊರಗಡೆ ಬರುತ್ತದೆ. ಈ ಯಂತ್ರಕ್ಕೆ ಬರಿ ಸಿಂಗಲ್ ಪೇಸ್ ಮೋಟಾರ್ ಬಳಸಲಾಗುತ್ತದೆ.
2. **ಕೋರ್ ಪಾರ್ಮಿಂಗ್ ಯೂನಿಟ್ :–** ಈ ಯಂತ್ರವು ಡಿ–ಫೈಬರ್ ಆದ ಮರದ ನಾರನ್ನು ಬೇಕಾದ ಆಕಾರಕ್ಕೆ ಮಾರ್ಪಾಡು ಮಾಡುತ್ತದೆ. ಈ ಯಂತ್ರವು ಕಾಲಿನಿಂದ ಒತ್ತುವ ಯಂತ್ರವಾಗಿದ್ದು ಇದರ ಆಕಾರ ತಯಾರಿಕೆಯ ಅಚ್ಚು (Mould) ಅಲ್ಯುಮಿನಿಯಂನಿಂದ ಮಾಡಲ್ಪಟ್ಟಿದೆ.

   **ಸ್ಟೈರ್ ಲೈಸಿಂಗ್ :–** ನ್ಯಾಪ್‌ಕಿನ್‌ಗಳನ್ನು ತಯಾರಿ ಮಾಡಿ ಆದ ಮೇಲೆ ಅವನ್ನು ಬ್ಯಾಕ್ಟೀರಿಯಾ ನಿರೋಧಕ ಬಲ್ಬ್‌ಗಳ ಮುಖಾಂತರ ಸ್ಟೆರ್‌ಲೈಸ್ ಮಾಡಲಾಗುವುದು ಇದಕ್ಕೆ ಬೇಕಾದ ಕಾಲಾವಕಾಶ ಕೇವಲ 30 ಸೆಕೆಂಡುಗಳು.
3. **ನ್ಯಾಪ್‌ಕಿನ್ ಸೀಲಿಂಗ್ ಯಂತ್ರ :–** ಒಂದು ಸಾರಿ ಕೋರ್ ಪಾರ್ಮಿಂಗ್ ಆದಮೇಲೆ ಪ್ಯಾಡ್ ಮಾಡಲು ಅದನ್ನು ಪಾಲಿಪ್ರಿಪಾಲಿನ್ ಬಟ್ಟೆಯಲ್ಲಿ ಸುತ್ತಿ ಮೂರು ಕಡೆ ಸೀಲ್ ಮಾಡಬೇಕು. ಈ ಯಂತ್ರವು ಕಾಲಿನಲ್ಲಿ ಒತ್ತುವ ಯಂತ್ರವಾಗಿದ್ದು ಈ ಯಂತ್ರದಲ್ಲಿ ಸೀಲಿಂಗ್ ಮಾಡಲು ಬೇಕಾದ ವಿದ್ಯುತ್ 40 ವೋಲ್ಟ್‌ಗಳು ಮಾತ್ರ ಒಂದು ನಿಮಿಷಕ್ಕೆ 4 ರಿಂದ 10 ನ್ಯಾಪ್‌ಕಿನ್‌ಗಳನ್ನು ಸೀಲ್ ಮಾಡಬಹುದಾಗಿದೆ.

**ಯಂತ್ರಗಳ ಬಳಕೆ :–** ಈ ಯಂತ್ರವನ್ನು ಅತೀ ಬಡವರಾದರೂ, ಮನಸ್ಸುಳ್ಳವರು ಯಾರು ಬೇಕಾದರೂ ಬಳಸಬಹುದು ಸ್ವಸಹಾಯ ಗುಂಪುಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ಅವಕಾಶವನ್ನು ಬಳಸಿಕೊಂಡಲ್ಲಿ ಹೆಚ್ಚಾಗಿ ಬಡವರ್ಗ ಹಾಗೂ ಮಧ್ಯಮ ವರ್ಗಕ್ಕೆ ಸಹಾಯವಾಗಬಹುದು ಹಾಗೂ ಹೆಚ್ಚು ಜನಕ್ಕೆ ಕೆಲಸ ಒದಗಿಸಿದಂತಾಗಬಹುದು. ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಕಡಿಮೆ ದರದಲ್ಲಿ ಅಥವಾ ಸಾಧ್ಯವಾದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಬಡತನದಲ್ಲಿ ಇರುವ ಕುಟುಂಬದ ಹೆಣ್ಣು ಮಕ್ಕಳಿಗೆ ಇಲಾಖಾ ವತಿಯಿಂದ ಉಚಿತವಾಗಿ **'ಸೇಫ್ಟಿ'** ನ್ಯಾಪ್‌ಕಿನ್ ಪ್ಯಾಡ್‌ಗಳು ದೊರೆಯುವಂತೆ ಮಾಡಲು ಕ್ರಮವಹಿಸಲಾಗುತ್ತಿದೆ. ಹಾಗೆಯೇ ಬಳಸಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಶಾಲೆಗಳಲ್ಲಿ ಮತ್ತು ಹಾಸ್ಟೆಲ್‌ಗಳಲ್ಲಿ ವ್ಯವಸ್ಥಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಜಿಲ್ಲಾದ್ಯಂತ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ಸರಕಾರಿ ಪ್ರೌಢಶಾಲೆಗಳಲ್ಲಿ ನ್ಯಾಪ್‌ಕಿನ್ ಡಿಸ್‌ಪೋಸಲ್ ವ್ಯವಸ್ಥೆಯುಳ್ಳ ವಿಶಿಷ್ಟ ಮಾದರಿಯ ಹೆಣ್ಣುಮಕ್ಕಳ ಶೌಚಾಲಯ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಬೆಳಗಿನಿಂದ ಸಂಜೆಯ ತನಕ ಶಾಲೆಯಲ್ಲಿ ದಿನಕಳೆಯುವ ಹೆಣ್ಣುಮಕ್ಕಳಿಗೆ ಋತುಸ್ರಾವ ಸಂದರ್ಭದಲ್ಲಿ ಇದರಿಂದ ಅನುಕೂಲವಾಗಲಿದೆ. ಅಲ್ಲದೆ ಉಪಯೋಗಿಸಿದ ಸ್ಯಾನಿಟರಿ ನ್ಯಾಪ್‌ಕಿನ್‌ಗಳು ಎಲ್ಲೆಂದರಲ್ಲಿ ಎಸೆಯದೆ ವ್ಯವಸ್ಥಿತವಾಗಿ ವಿಲೇವಾರಿಯಾಗಲಿದೆ. ಇದರಿಂದ ಹೆಣ್ಣುಮಕ್ಕಳ ಶಾಲಾ ಬಿಡುವಿಕೆ ನಿಯಂತ್ರಣಗೊಳ್ಳುವ ಸಾಧ್ಯತೆಯಿದೆ.

'ಸೇಫ್ಟಿ' ನ್ಯಾಪ್‌ಕಿನ್ ಅನುಕೂಲತೆಗಳ ಬಗ್ಗೆ ಜಿಲ್ಲೆಯಾದ್ಯಂತ ಹಂತಹಂತವಾಗಿ ಜನ ಜಾಗೃತಿ ಮೂಡಿಸುವ ಬಗ್ಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ|| ಕೆ.ಎನ್. ವಿಜಯ್ ಪ್ರಕಾಶ್ ಇವರು ವಿಶೇಷ ಆಧ್ಯತೆಯನ್ನು ನೀಡಿರುತ್ತಾರೆ ಮತ್ತು ಎಲ್ಲಾ ಹಾಸ್ಟೆಲ್‌ಗಳಿಗೆ **'ಸೇಫ್ಟಿ'** ನ್ಯಾಪ್‌ಕಿನ್‌ಗಳನ್ನೇ ಖರೀದಿಸುವಂತೆ ಆದೇಶಿಸಿರುತ್ತಾರೆ. ಇದರಿಂದ ಐಸಿರಿ ಸ್ವಸಹಾಯ ಸಂಘದ ಈ ಉದ್ಯಮ ಬೃಹತಾಕಾರದಲ್ಲಿ ಬೆಳೆದು ಮುಂದೆ ನಿಜವಾಗಿಯೇ ಆದಾಯ ಉತ್ಪನ್ನದ ಗುಡಿಕೈಗಾರಿಕೆಯಾಗಿ ಬೆಳೆದು ಬರುವಂತೆ ಮಾಡುವ ದೊಡ್ಡ ಆಶಾಭಾವನೆಯೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ನಬಾರ್ಡ್, ತಾಲೂಕು ಪಂಚಾಯತ್ ಬೆಳ್ತಂಗಡಿ ಮತ್ತು ಲ್ಯಾಲ ಗ್ರಾಮ ಪಂಚಾಯತ್‌ಗಳು ಶ್ರಮಿಸುತ್ತಿದೆ.

**ಸಂವಹನ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕ, ಕ. ಗ್ರಾ. ನೀ. ಸ. ನೈ. ಸಂಸ್ಥೆ,**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು – 560 009.**



# ವಿಪತ್ತು ನಿರ್ವಹಣಾ ವ್ಯವಸ್ಥೆ ಮತ್ತು ಸಮುದಾಯದ ಸಹಭಾಗಿತ್ವ

*(ಡಿಸೆಂಬರ್ 2011 ಸಂಚಿಕೆಯಿಂದ ಮುಂದುವರಿದಿದೆ*




**ಪ್ರೊ. ಎ.ಎಚ್. ಮಾಸಾಪತಿ** *
**ಮೊಬೈಲ್ : 93435 35229**


ಕಳೆದ ೨೦ ವರ್ಷಗಳಲ್ಲಿ, ಸುಮಾರು ೫ ಭೂಕಂಪಗಳು ಭಾರತದ ಸಾರ್ವಜನಿಕ ಜೀವನದ ಮೇಲೆ ದುಷ್ಪರಿಣಾಮ ಬೀರಿವೆ. ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ಶೇಕಡಾ ೬೦ರಷ್ಟು ಭಾಗದಲ್ಲಿ ಭೂಕಂಪದಿಂದ ಗಂಡಾಂತರ ಉಂಟಾಗುವ ಸಾಧ್ಯತೆ ಇದೆ.

## ರಾಷ್ಟ್ರೀಯ ವಿಪತ್ತು ನಿರ್ವಹಣ ಪ್ರಾಧಿಕಾರ (National Disaster Management Authority)

ಭಾರತ ಸರ್ಕಾರ 2005ರಲ್ಲಿ 'ವಿಪತ್ತು ನಿರ್ವಹಣಾ ಕಾನೂನು' ರೂಪಿಸಿದೆ. ಈ ಕಾನೂನಿನ ಮೇರೆಗೆ ಅತ್ಯುನ್ನತ ಮಟ್ಟದಲ್ಲಿ ರಚಿಸಲಾದ 'ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ (NDMA) ಪ್ರಧಾನ ಮಂತ್ರಿ ಅಧ್ಯಕ್ಷರಾಗಿದ್ದು, ಓರ್ವ ಉಪಾಧ್ಯಕ್ಷ ಮತ್ತು ಎಂಟು ವ್ಯಕ್ತಿಗಳು ಸದಸ್ಯರಾಗಿದ್ದಾರೆ. ವಿಪತ್ತು ನಿರ್ವಹಣಾ ಕಾರ್ಯವಿಧಾನದಲ್ಲಿ ಸಂಪೂರ್ಣವಾದ ಬದಲಾವಣೆ ತರುವಂತಹ ಪರಮಧ್ಯೇಯವನ್ನು ಈ ಪ್ರಾಧಿಕಾರ ಹೊಂದಿದೆ. ಆರಂಭಿಕ ಗುರಿಗಳಿಗಿಂತಲೂ, ನೂತನ ಧ್ಯೇಯೋದ್ದೇಶಗಳು ವ್ಯಾಪಕ ಸ್ವರೂಪ ಹೊಂದಿವೆ. ಗತಕಾಲದಲ್ಲಿ ವಿಪತ್ತು ಉಂಟಾದಾಗ, 'ಪರಿಹಾರ ಕೇಂದ್ರೀಕೃತ'ವಾದ ಪ್ರತಿಕ್ರಿಯೆ ನೀಡಲಾಗಿದೆ. ಆದರೆ ಇತ್ತೀಚೆಗಿನ ಹೊಸ ನಿರ್ವಹಣಾ ವಿಧಾನದಲ್ಲಿ ವಿಪತ್ತುಗಳು ಸಂಭವಸಿರುವಂತೆ ಪ್ರತಿಬಂಧಕ ಕ್ರಮ ಕೈಗೊಳ್ಳುವಿಕೆ, ವಿಪತ್ತುಗಳು ಉಂಟಾದಂತಹ ಸಂದರ್ಭಗಳಲ್ಲಿ ಜನರ ಸಂಕಷ್ಟಗಳಿಗೆ ಪರಿಹಾರ ನೀಡಿಕೆ ಹಾಗೂ ಭವಿಷ್ಯತ್ತಿನ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು ಜನರನ್ನು ಸಜ್ಜುಗೊಳಿಸುವಂತಹ ಧ್ಯೇಯವಿದೆ.

ರಾಷ್ಟ್ರದ ಯಾವುದೇ ಭಾಗದಲ್ಲಿ ವಿಪತ್ತು ಸಂಭವಿಸಿದರೂ ಸಹ ಅದನ್ನು ನಿರ್ವಹಿಸುವ ಹೊಣೆಗಾರಿಕೆಯ ಜೊತೆಗೆ ವಿಪತ್ತು ನಿರ್ವಹಣಾ ತರಬೇತಿ, ಸಿದ್ಧತೆ ಮತ್ತು ನೆರವು ಇತ್ಯಾದಿ ವಿಷಯಗಳಲ್ಲಿ ಪ್ರಾಧಿಕಾರವು ಪರಮಾಧಿಕಾರ ಹೊಂದಿದೆ. ಅದರ ಸಹಾಯಕ ಸಮಿತಿಯಂತೆ ಕಾರ್ಯನಿರ್ವಹಿಸಲು ರಚಿಸಲಾಗಿರುವ 'ರಾಷ್ಟ್ರೀಯ ಆಡಳಿತ ಮಂಡಳಿ'ಯಲ್ಲಿ ಕೇಂದ್ರ ಗೃಹ ಖಾತೆಯ ಕಾರ್ಯದರ್ಶಿ, ಪ್ರಮುಖ ಇಲಾಖೆಗಳ ಕಾರ್ಯದರ್ಶಿಗಳು ಹಾಗೂ ರಕ್ಷಣಾ ಸಿಬ್ಬಂದಿಗಳ ಮುಖ್ಯಸ್ಥರು ಭಾಗವಹಿಸುತ್ತಾರೆ. ರಾಷ್ಟ್ರೀಯ ಆಡಳಿತ ಮಂಡಳಿಯು ಪ್ರಾಧಿಕಾರದ ಕಾರ್ಯನೀತಿಯನ್ನು ಜಾರಿಗೊಳಿಸುತ್ತದೆ ಮತ್ತು ಅದರ ಸಲಹೆ/ಸೂಚನೆಗಳಂತೆ ಕಾರ್ಯನಿರ್ವಹಿಸುತ್ತದೆ.

ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ, ಪ್ರಾಧಕಾರಿಗಳನ್ನು (SDMA and DDMA) ರಚಿಸಲಾಗಿದೆ. ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗದರ್ಶಿ ಸೂತ್ರದ ವ್ಯಾಪ್ತಿಯಲ್ಲಿ ರಾಜ್ಯದ ಯೋಜನೆಗಳಿಗೆ ಮಂಜೂರಾತಿ


* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/ 4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು-560 032.

ನೀಡಲಾಗುತ್ತದೆ. ರಾಜ್ಯದ ಇಲಾಖೆಗಳು ಮತ್ತು ಜಿಲ್ಲೆಗಳು ರೂಪಿಸಿದ ಕಾರ್ಯ ಯೋಜನೆಗಳ ಪರಿಶೀಲನೆ, ಸಂಪನ್ಮೂಲ ಪೂರೈಕೆ ಹಾಗೂ ಪರಿಸ್ಪರ ಸಹಕಾರದ ಮೇಲ್ವಿಚಾರಣೆ ಇತ್ಯಾದಿ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಸಮಾವೇಶವಾಗಿವೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಆರಂಭವಾದಾಗಿನಿಂದಲೂ, ಕ್ರಿಯಾಶೀಲವಾದ ನೂತನ ವಿಧಾನದ ಅನುಷ್ಠಾನಕ್ಕಾಗಿ ಆತಂಕವಾಗದಿರುವಂತೆ ಮುಂಜಾಗ್ರತೆ, ಸದಾ ಜಾಗರೂಕತೆ, ಸಾಮರ್ಥ್ಯವರ್ಧನೆ ಮತ್ತು ಜನಜಾಗೃತಿ ಹೆಚ್ಚಿಸುವಂತಹ ದಿಶೆಯಲ್ಲಿ ಕಾರ್ಯನಿರ್ವಹಿಸುತ್ತದೆ. ರಾಜ್ಯಮಟ್ಟದಲ್ಲಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ವಿಪತ್ತು ನಿರ್ವಹಣೆಗಾಗಿ ಆಡಳಿತ ಮಂಡಳಿಯನ್ನು ರಚಿಸಲಾಗಿದೆ. ಸಂಬಂಧಿತ ಇಲಾಖೆಗಳ ಕಾರ್ಯದರ್ಶಿಗಳು, ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ. ವಿಪತ್ತು ನಿರ್ವಹಣಾ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಕಾರ್ಯದ ಅನುಷ್ಠಾನಕ್ಕಾಗಿ ಎಲ್ಲ ಬಗೆಯ ಕಾಳಜಿ ವಹಿಸುವ ಜವಾಬ್ದಾರಿಯನ್ನು ನೀಡಲಾಗಿದೆ.

## ವಿಪತ್ತು ನಿರ್ವಹಣಾ ಕ್ರಮಗಳು : ಸಮುದಾಯದ ಪಾತ್ರ

10ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜಿನಲ್ಲಿ 'ವಿಪತ್ತು ನಿರ್ವಹಣೆ, ಅಭಿವೃದ್ಧಿ ದೃಷ್ಟಿಕೋನ' ಎಂಬ ಪ್ರತ್ಯೇಕ ಅಧ್ಯಾಯವನ್ನು ಸೇರ್ಪಡಿಸಲಾಗಿದೆ. ವಿಪತ್ತುಗಳು ಆರ್ಥಿಕ ವ್ಯವಸ್ಥೆಯ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತವೆ. ಪ್ರತಿ ವರ್ಷ ಸಂಭವಿಸುವಂತಹ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳ ಅಪಾರ ನಷ್ಟವನ್ನು ಗಮನಿಸಿದಾಗ ವಿಪತ್ತುಗಳನ್ನು ಪ್ರತಿಬಂಧಿಸಲು ಹಾಗೂ ಅವುಗಳ ಉಗ್ರ ಸ್ವರೂಪವನ್ನು ನಿವಾರಿಸಲು ತೀವ್ರವಾಗಿ ಸ್ಪಂದಿಸುವ ಅಗತ್ಯವಿದೆ.

ವಿಪತ್ತುಗಳ ನಿರ್ವಹಣೆಯು ಯಾವುದೇ ಒಂದು ಕ್ಷೇತ್ರದಲ್ಲಿ ಕೈಗಕೊಳ್ಳಬೇಕಾದಂತಹ ಕ್ರಮವಲ್ಲ. ಅದು ಬಹು ಕ್ಷೇತ್ರ/ಬಹು ಇಲಾಖೆಗಳ ವಿಷಯವಾಗಿದೆ. ವಿಪತ್ತುಗಳ ನಿವಾರಣೆಗಾಗಿ ಸಮಗ್ರವಾದ ಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ. ವಿಪತ್ತಿನ ಸಂಭವನೀಯತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದರೆ ಸಕಾರಾತ್ಮಕ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ. ಆದರೆ, ಅಭಿವೃದ್ಧಿಯ ಮೂಲಕ ಗಂಡಾಂತರವನ್ನು ಕಡಿಮೆ ಮಾಡಬಹುದು ಅಥವಾ ಅದು ವಿಪತ್ತಿಗೂ ಸಹ ಸಾಧನವಾಗಬಹುದು. ಮಾನವಾಭಿವೃದ್ಧಿಯ ಪ್ರಕ್ರಿಯೆಗಳೊಂದಿಗೆ ನೈಸರ್ಗಿಕ ವಿಕೋಪ ಮತ್ತು ಮಾನವಕೃತ ದುರಂತಗಳು ನಿಕಟವಾದ ಸಂಬಂಧ ಹೊಂದಿವೆ. ವ್ಯಕ್ತಿ ಸಮುದಾಯ ಹಾಗೂ ರಾಷ್ಟ್ರ ಕೈಕೊಳ್ಳುವಂತಹ ಅಭಿವೃದ್ಧಿ ಆಯ್ಕೆಗಳು, ವಿನೂತನ ಗಂಡಾಂತರ ಸೃಷ್ಟಿಸಬಹುದು. ಅಭಿವೃದ್ಧಿ ಸೇವೆಗಳಿಗಾಗಿ ನಿರ್ಮಿಸಿದ ಮೂಲ ಸೌಕರ್ಯಗಳು ನಾಶವಾದರೆ ದಾರಿದ್ರ್ಯ ಹಾಗೂ ನಿರುದ್ಯೋಗದ ಪ್ರಮಾಣ ಹೆಚ್ಚಾಗುವುದು.

ಯಾವುದೇ ವಿಪತ್ತು ಸಂಭವಿಸಿದ ಸಂದರ್ಭದಲ್ಲಿ ಸಮುದಾಯದ ಪ್ರತಿಕ್ರಿಯೆಗೆ ಪ್ರಥಮ ಆದ್ಯತೆ ದೊರೆಯುತ್ತದೆ. ಸಮುದಾಯ ಆಧಾರಿತ ವಿಪತ್ತು ನಿರ್ವಹಣೆಯಲ್ಲಿ ಎಲ್ಲ ಆಸಕ್ತರೂ ಭಾಗಿಯಾಗಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಪ್ರೋತ್ಸಾಹಿಸುತ್ತದೆ. ಸಮಗ್ರ ತರಬೇತಿ ಕಾರ್ಯಕ್ರಮ ಹಾಗೂ ಸಾರ್ವಜನಿಕ ಜಾಗೃತಿ ಆಂದೋಲನದ ಮೂಲಕ ಕಾರ್ಯನಿರ್ವಹಿ ಸುತ್ತದೆ. ಅದಲ್ಲದೆ ವಿಪತ್ತಿನ ಸಂದರ್ಭಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಾರೆ. ಅವರು ಸಾಮಾಜಿಕ ಬದಲಾವಣೆಯ ಪ್ರತಿನಿಧಿಗಳಾಗಿ ಬೃಹದ್ ಪ್ರಮಾಣದಲ್ಲಿ ಸಾಮಾಜಿಕ ಸಂಘಟನೆಗಳ ಪ್ರಯತ್ನದ ಮೂಲಕ ವಿಪತ್ತಿಗೀಡಾದಂತಹ ನೆರೆಹೊರೆಯ ಸಮುದಾಯಗಳ ಜೀವನದ ಗುಣಮಟ್ಟವನ್ನು ಪರಿವರ್ತಿಸುತ್ತಾರೆ.

ವಿಪತ್ತು ನಿರ್ವಹಣಾ ಕ್ರಮಗಳ ಬಗೆಗಿನ ಮಹತ್ವದ ಅಂಶಗಗಳೆಡೆಗೆ ಗಮನಸೆಳೆಯಲಾಗಿದೆ.

1) ಭಾರತದಲ್ಲಿ ವಿಪತ್ತುಗಳ ನಿರ್ವಹಣೆಯು ಒಂದು ನೂತನ ಬೆಳವಣಿಗೆ ಆಗಿದೆ. ಆದರೆ, ಇಂತಹ ಮಹತ್ವದ ವಿಷಯದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು, ಭಾರತಕ್ಕಿಂತಲೂ ಸುಮಾರು ಅರ್ಧ ಶತಮಾನದಷ್ಟು ಮುನ್ನಡೆ ಸಾಧಿಸಿರುವಂತೆ ಕಾಣುತ್ತದೆ.

2) ಸ್ಥಾನಿಕ/ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ–ರಾಷ್ಟ್ರೀಯ ಮಟ್ಟದಲ್ಲಿ ಸಂಭವಿಸುವ ಪ್ರಾಕೃತಿಕ ಹಾಗೂ ಮಾನವ ಕೃತ ವಿಪತ್ತುಗಳ ಬಗೆಗಿನ ದಾಖಲೆಗಳನ್ನು ಸೂಕ್ತವಾಗಿ ವಿಶ್ಲೇಷಿಸಬೇಕು.

3) ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (N.D.M.A) ಅಸ್ತಿತ್ವಕ್ಕೆ ಬಂದನಂತರ, ವಿಪತ್ತು

ನಿರ್ವಹಣೆಯ ಮಾರ್ಗವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಅದರ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ಗಂಭೀರವಾಗಿ ಮುನ್ನಡೆಸುವ ಅಗತ್ಯವಿದೆ. ಭಾರತದ ಯೋಜನಾ ಆಯೋಗವು 10 ಹಾಗೂ 11ನೇ ಪಂಚ ವಾರ್ಷಿಕ ಯೋಜನೆಗಳ ಮೂಲಕ ವಿಪತ್ತು ನಿರ್ವಹಣೆಯ ಅಗತ್ಯತೆಯೆಡೆಗೆ ಗಮನ ಸೆಳೆದಿದೆ.

4) ನೆರೆ ಹಾವಳಿ, ಚಂಡಮಾರುತ ಮತ್ತು ಭೂಕಂಪದಿಂದ ಉಂಟಾಗುವ ವಿಪತ್ತುಗಳನ್ನು ಕುರಿತು ಜನಜಾಗೃತಿ ಮೂಡಿಸುವ ಹಾಗೂ ಜನರನ್ನು ಸನ್ನದ್ಧಗೊಳಿಸುವ ಚಳುವಳಿಗಳ ಪ್ರಾಮುಖ್ಯತೆಯನ್ನು ಗುರುತಿಸಬೇಕು. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಚಾರ ಆಂದೋಲನಗಳನ್ನು ತ್ವರಿತಗೊಳಿಸಬೇಕು.

5) ರಾಷ್ಟ್ರದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ವಿಪತ್ತು ನಿರ್ವಹಣೆಗಾಗಿ ವ್ಯಾಪಕ ಸ್ವರೂಪದ ಸೂಕ್ತವಾದ ತರಬೇತಿ ಪಠ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

6) ವಿಪತ್ತು ನಿರ್ವಹಣೆಯಲ್ಲಿ ನಾಗರಿಕ ರಕ್ಷಣಾದಳದ ಕಾರ್ಯದಕ್ಷತೆ ಹಾಗೂ ಉಪಯುಕ್ತತೆಯನ್ನು ಗಮನಿಸಿ ಕೇಂದ್ರ ಸರ್ಕಾರ ಅದರ ನೆರವು ಪಡೆಯಲು ಸಮ್ಮತಿ ನೀಡಿದೆ. ನಾಗರಿಕ ರಕ್ಷಣಾ ಶಾಸನಕ್ಕೆ ತಿದ್ದುಪಡಿ ಮಾಡಿ ಅದರ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲಾಗುತ್ತದೆ. ಅದು ಕೇವಲ ನಗರಗಳಿಗೆ ಸೀಮಿವಾಗಿರದೇ ಜಿಲ್ಲಾ ಮತ್ತು ತಾಲ್ಲೂಕು ಆಧಾರಿತ ಸಂಸ್ಥೆಯಾಗಬೇಕು. ಸಮುದಾಯ ಆಧಾರಿತ ಸಂಸ್ಥೆಯಾಗಿರುವ ನಾಗರಿಕ ರಕ್ಷಣಾ ದಳವು ವಿಪತ್ತುಗಳನ್ನು ಎದುರಿಸಲು ಜನರನ್ನು ಸಜ್ಜುಗೊಳಿಸುವ ದಿಶೆಯಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಕೊಳ್ಳಬೇಕು.

7) ರಾಷ್ಟ್ರದ ವಿವಿಧ ಭಾಗಗಳಲ್ಲಿ ಸಂಭವಿಸುವ ನೆರೆಹಾವಳಿ ಸಂದರ್ಭದಲ್ಲಿ ಕೈಕೊಳ್ಳುವಂತಹ ಕ್ರಮಗಳ ಬಗೆಗೆ, 'ರಾಷ್ಟ್ರೀಯ ವಿಪತ್ತು ಸ್ಪಂದನಾ ದಳ'ಗಳು ಸೂಕ್ತವಾದ ತರಬೇತಿ ನೀಡಬೇಕು. ಈ ದಳದ ಎಂಟು ಪಡೆಗಳು ದೇಶದ ವಿಭಿನ್ನ ಭಾಗಗಳಲ್ಲಿ ಕಾರ್ಯನಿರತವಾಗಿವೆ. ಆದರೆ, ಹೆಚ್ಚುವರಿ ವಿಪತ್ತುಗಳ ಸಾಧ್ಯತೆಯನ್ನು ಗಮನಿಸಿ ಪ್ರಚಲಿತ ವ್ಯವಸ್ಥೆಯ ಲೋಪ–ದೋಷಗಳ ನಿವಾರಣೆಗಾಗಿ ಅಧಿಕ ಪಡೆಗಳನ್ನು ಪೂರೈಸಬೇಕಾಗುತ್ತದೆ.

8) ರಾಷ್ಟ್ರಮಟ್ಟದಲ್ಲಿ 'ರಾಷ್ಟ್ರೀಯ ದುರಂತ ಪರಿಹಾರ ನಿಧಿ'ಯನ್ನು ಸ್ಥಾಪಿಸಲಾಗಿದೆ. ರಾಜ್ಯ ಹಾಗೂ ವಲಯಗಳ ಮಟ್ಟದಲ್ಲಿಯೂ ಸಹ ಇಂತಹ ಪರಿಹಾರ ನಿಧಿಯನ್ನು ಸ್ಥಾಪಿಸಬೇಕು.

9) ಬೃಹದ್ ಪ್ರಮಾಣದಲ್ಲಿ ಸಂಭವಿಸುವ ಪ್ರಾಣಹಾನಿ ಮತ್ತು ಸ್ಥಿರ/ಚರಾಸ್ತಿಗಳ ನಷ್ಟವನ್ನು ತುಂಬಲು, ಯಾವುದೇ ಸರ್ಕಾರಕ್ಕೆ ಅಸಾಧ್ಯವೆಂಬಂತೆ ಕಾಣುತ್ತದೆ. ಪ್ರತಿಯೊಬ್ಬ ನಾಗರಿಕನು ಸ್ವಯಂ ಪ್ರೇರಣೆಯಿಂದ ವಿಪತ್ತು ನಿರ್ವಹಣಾ ಕಾರ್ಯಗಳಲ್ಲಿ ಜಾಗೃತಿ ಹಾಗೂ ಬದ್ಧತೆಯಿಂದ ಭಾಗವಹಿಸುವ ಅಗತ್ಯವಿದೆ.

10) ವಿಪತ್ತುಗಳನ್ನು ಕುರಿತು ಮುನ್ಸೂಚನೆ, ಕಾಲಾವಕಾಶ ಮತ್ತು ಸನ್ನದ್ಧತೆ ಇರುವುದಿಲ್ಲ. ಅವುಗಳ ನಿರ್ವಹಣೆಗಾಗಿ ಅಗತ್ಯವಾದ ವೈದ್ಯರು, ಶುಶ್ರೂಷಕಿಯರು ಹಾಗೂ ಸಹಾಯಕರ ತಂಡಗಳನ್ನು ರೂಪಿಸಬೇಕಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಕಾರ್ಯನಿರತರಾದ ವ್ಯಕ್ತಿಗಳು ಕ್ರಿಯಾಶೀಲರಾಗಿರಬೇಕು.

11) ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು, ವಿಪತ್ತುಗಳನ್ನು ಕುರಿತು ರಾಜ್ಯ ಮತ್ತು ಜಿಲ್ಲಾಮಟ್ಟದ ಸಹಕಾರದೊಂದಿಗೆ ವಿವಿಧ ರಾಜ್ಯಗಳಲ್ಲಿ 'ಅಣಕು ಕಾರ್ಯಾಚರಣೆ' (Mock Drilling) ನಡೆಸುತ್ತದೆ. ಈಗಾಗಲೇ 27 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಂತಹ ಸುಮಾರು 55 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳಿಗಾಗಿ ವಿಪತ್ತು ನಿರ್ವಹಣೆಯ ನೂತನ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ.

12) ಸುಸಜ್ಜಿತ, ಸುಸಂಘಟಿತ, ಸದಾ ಸನ್ನದ್ಧ ಮತ್ತು ಸಮರ ಸಾದೃಶ ಕ್ರಮಗಳಿಂದ ಯಾವುದೇ ಮಟ್ಟದಲ್ಲಿ ವಿಪತ್ತುಗಳನ್ನು ಎದುರಿಸಬೇಕಾಗುತ್ತದೆ. ಪ್ರಚಂಡ ಪ್ರಾಕೃತಿಕ ವಿಕೋಪದ ಎದುರಿಗೆ ಮಾನವನ ಸಾಮರ್ಥ್ಯ ಅತ್ಯಲ್ಪವೆನಿಸಿದರೂ ಸಹ ಆತನಿಗೆ ವೈಜ್ಞಾನಿಕ/ತಾಂತ್ರಿಕ ಸಂಶೋಧನೆಗಳು ವಿಸ್ಮಯಕಾರಕ ಶಕ್ತಿಗಳ ವರದಾನ ನೀಡಿವೆ.

13) ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ರಾಜ್ಯದ ಎಲ್ಲ ಆಸ್ಪತ್ರೆ/ನರ್ಸಿಂಗ್ ಹೋಮ್‌ಗಳ ನೋಂದಣಿಯನ್ನು ಕಡ್ಡಾಯಗೊಳಿಸಿ, ವಾರ್ಷಿಕವಾಗಿ ನಿರ್ದಿಷ್ಟವಾದ ಶುಲ್ಕವನ್ನು ಆಸ್ಪತ್ರೆಗಳು ಸಂದಾಯ ಮಾಡಬೇಕು. ಆಸ್ಪತ್ರೆಗಳಲ್ಲಿ ಲಭ್ಯವಿರುವ ಎಲ್ಲ ಸೌಲಭ್ಯಗಳ ದಾಖಲೆ ಪರಿಶೀಲನೆ ಹಾಗೂ ವಿಂಗಡಣೆ ಮಾಡಿ ಗಾಯಾಳುಗಳಿಗೆ ಎಂತಹ ಚಿಕಿತ್ಸೆ ಕೊಡಲು ಸಾಧ್ಯವೆಂಬ ವಿಷಯವನ್ನು ನಿರ್ಧರಿಸಬೇಕು.

14) ವಿಪತ್ತು ನಿರ್ವಹಣೆಯು ನಿರಂತರವಾದ ಪ್ರಕ್ರಿಯೆಯಾಗಿರುವುದರಿಂದ ಆರ್ಥಿಕ ಸೌಲಭ್ಯಳು ಪ್ರಧಾನ ಪಾತ್ರವಹಿಸುತ್ತವೆ. ಸ್ವಯಂ–ಸೇವಕರು ಮತ್ತು ವಿದ್ಯಾರ್ಥಿಗಳ ತರಬೇತಿಯಿಂದ ಆರಂಭಿಸಿ, ಮೂಲಭೂತ ಸೌಕರ್ಯಗಳ ಪೂರೈಕೆಯವರೆಗೆ ಹಣಕಾಸಿನ ಅಗತ್ಯವಿದೆ. ಎಲ್ಲ ಖಾಸಗಿ ಆಸ್ಪತ್ರೆಗಳು ಶೇಕಡಾ 30ರಷ್ಟು ಉಚಿತ ಸೌಲಭ್ಯಗಳನ್ನು ನೀಡಲು ಮುಂದಾಗಬೇಕು. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಖಾಸಗಿ ಆಸ್ಪತ್ರೆಗಳ ನಡುವೆ ಲಿಖಿತ ರೂಪದ ಒಪ್ಪಂದ ಆಗಬೇಕು.

15) ಸ್ವಯಂ–ಸೇವಾ ಸಂಸ್ಥೆಗಳು ಹಲವಾರು ರೀತಿಯಲ್ಲಿ ಸಹಾಯ ನೀಡುವುದರಿಂದ ಅವುಗಳನ್ನು ಚನ್ನಾಗಿ ಸಂಘಟಿಸಿ, ಸಹಕಾರ ಪಡೆಯಬೇಕು. ಇಂತಹ ಸಹಾಯವನ್ನು ಹಣ ಅಥವಾ ವಸ್ತುಗಳ ರೂಪದಲ್ಲಿ ಪಡೆಯಬಹುದಾಗಿದೆ.

16) ವಿಪತ್ತಿನ ಸಮಯದಲ್ಲಿ ಉಪಯುಕ್ತವಾದ ಸಾರಿಗೆ/ಸಂಪರ್ಕ ಸೌಲಭ್ಯ, ಆಂಬ್ಯೂಲೆನ್ಸ್, ಹೆಲಿಪ್ಯಾಡ್, ಹೆಲಿಕ್ಯಾಪ್ಟರ್ ಇತ್ಯಾದಿ ದುಬಾರಿ ಆಗಿದ್ದರೂ ಸಹ ಪರಿಣಾಮಕಾರಿ ಆಗಿವೆ.

17) ಸಮಾಜದ ಸರ್ವ ವರ್ಗಗಳಲ್ಲಿ, 'ವಿಪತ್ತು ಸನ್ನದ್ಧತಾ ಸಂಸ್ಕೃತಿ'ಯ ಪರಿಕಲ್ಪನೆಯು ಸಾಕಾರವಾಗಬೇಕು ಮತ್ತು ವಿಪತ್ತು ನಿರ್ವಹಣೆಯ ಉಪಕ್ರಮಗಳು ಗತಿಶೀಲವಾಗಬೇಕು.

18) ಯೋಜನಾಬದ್ಧವಾದ ಪ್ರತಿಯೊಂದು ಕಾರ್ಯವನ್ನು ವಿಪತ್ತಿಗೆ ಗುರಿಯಾಗುವ ಸಾಧ್ಯತೆಯಿಂದ ಮಾತ್ರವಲ್ಲ, ಅದು ಗಂಡಾಂತರಕ್ಕೆ ನೀಡಬಹುದಾದ ಕೊಡುಗೆಯ ಸಾಧ್ಯತೆಯನ್ನು ಕನಿಷ್ಠಗೊಳಿಸುವ ದೃಷ್ಟಿಯಿಂದಲೂ ಸಹ ವಿಚಾರ/ವಿಮರ್ಶೆ ಮಾಡಬೇಕು.

19) ಪ್ರಾಕೃತಿಕ ವಿಪತ್ತುಗಳನ್ನು ಎದುರಿಸಿ, ಹೇಗೆ ಜೀವಿಸಬೇಕೆಂಬುದು ಒಂದು ಸಂಕೀರ್ಣವಾದ ಸಮಸ್ಯೆಯಾಗಿದೆ. ಇಂತಹ ಸಮಸ್ಯೆಯನ್ನು ಸಮರ್ಥವಾಗಿ ನಿರ್ವಹಿಸಲು ಉನ್ನತ ಮಟ್ಟದಲ್ಲಿ ಕೇಂದ್ರಕೃತವಾದ ಅಧಿಕಾರವನ್ನು ಕೆಲವು ರಾಷ್ಟ್ರಗಳಲ್ಲಿ ಸಮುದಾಯದ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ. ವಿಪತ್ತುಗಳು ಸಂಭವಿಸಿದಾಗ ಸರ್ವ ಪ್ರಥಮವಾಗಿ ಸಮುದಾಯಗಳು ಸ್ಪಂದಿಸಬೇಕು.

20) ಸಮುದಾಯ ಆಧಾರಿತ ಪ್ರಕೃತಿ ವಿಕೋಪ ನಿರ್ವಹಣಾ ವ್ಯವಸ್ಥೆಯೊಂದಿಗೆ, ಬಾಹ್ಯ ಸಂಸ್ಥೆಗಳು ಸಹಕರಿಸಿ ಕಾರ್ಯನಿರ್ವಹಿಸುತ್ತವೆ. ಮೂಲಭೂತ ಸಾಮಾಜಿಕ ಸೇವಾ ಸಂಪನ್ಮೂಲಗಳ ಸಂಪಾದನೆ ಹಾಗೂ ಅವುಗಳ ನಿಯಂತ್ರಣ ವ್ಯವಸ್ಥೆಯನ್ನು ಕಲ್ಪಿಸಿದ ನಂತರ ನೈಸರ್ಗಿಕ ವಿಪತ್ತು ಸಂಭವಿಸಿದಾಗ ಸಮುದಾಯ ಆಧಾರಿತ ಪ್ರಕೃತಿ ವಿಕೋಪ ನಿರ್ವಹಣಾ ವ್ಯವಸ್ಥೆಯ (Community Based Disaster Management) ಮುಖಾಂತರ ಜನರ ಸ್ಪಂದನ ಹೆಚ್ಚಾಗುವುದು. ಸಮುದಾಯದ ಮೂಲಕ ವಿಕೋಪಗಳ ನಿರ್ವಹಣೆಗೆ ಪ್ರಯತ್ನಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಸಮುದಾಯ ಆಧಾರಿತ ಮಾರ್ಗಗಳು, ಸ್ಥಳೀಯ ವಿಪತ್ತಿನ ಸಂಭಾವ್ಯತೆಯನ್ನು ಕಡಿಮೆ ಮಾಡಿ ಸಾಮರ್ಥ್ಯವನ್ನು ನಿರ್ಮಿಸಿ, ಸುರಕ್ಷತೆಯ ಪರಂಪರೆಯನ್ನು ಪ್ರೋತ್ಸಾಹಿಸುತ್ತವೆ. ಕಳೆದ ಎರಡು ದಶಕಗಳಿಂದ ಹಲವಾರು ಸಮುದಾಯ, ಗುಂಪು, ರಾಷ್ಟ್ರೀಯ/ಅಂತರ–ರಾಷ್ಟ್ರೀಯ ಸಂಸ್ಥೆ ಮತ್ತು ಸರ್ಕಾರದ ವಿವಿಧ ಇಲಾಖೆಗಳು, ಸಿ.ಬಿ.ಡಿ.ಎಮ್. ಮಾರ್ಗವನ್ನು ಅನುಸರಿಸುತ್ತವೆ. ಇಂತಹ ಮಾರ್ಗವು ವಾಸ್ತವಿಕ ಹಾಗೂ ವೈಜ್ಞಾನಿಕ ಅಂಶಗಳ ಆಧಾರದ ಮೇಲೆ ನಷ್ಟದ ಅಂದಾಜು ಮಾಡುವ ವಿಧಾನಕ್ಕೆ ಪ್ರಾಧಾನ್ಯತೆ ನೀಡುತ್ತದೆ.

ವಿಕೋಪ ನಿರ್ವಹಣಾಕಾರರು, ಶಿಕ್ಷಣ ತಜ್ಞರು ಮತ್ತು ಸಂಶೋಧಕರು, 'ವಿಪತ್ತು ಮುಕ್ತ ಅಭಿವೃದ್ಧಿ'ಯನ್ನು ಸಮರ್ಥಿಸುತ್ತಾರೆ.

❑

# ಗಾಂಧೀಜಿಯವರ ಕಲ್ಪನೆಯಲ್ಲಿ ಗ್ರಾಮದ ಜನರು ಆರೋಗ್ಯ ಕಾಪಾಡಿಕೊಳ್ಳುವ ಬಗೆಗಳು

– ವಾಮನರಾವ್ *

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳು ಸಂದರೂ ಗ್ರಾಮೀಣ ಜನರ ಆರೋಗ್ಯವು ಪಟ್ಟಣ ಪ್ರದೇಶದ ನಾಗರೀಕರ ಮಟ್ಟದಲ್ಲಿ ಇಲ್ಲದಿರುವುದು ಮತ್ತು ಗ್ರಾಮೀಣರು ತಮ್ಮ ದೈನಂದಿನ ಚಟುವಟಿಕೆಗಳಿಗೆ ಬೇಕಾದ ಉತ್ತಮ ಆರೋಗ್ಯ ಇಲ್ಲದಿರುವುದು ಇಂದಿನ ನಮ್ಮ ಜನನಾಯಕರು ಮತ್ತು ವಿವಿಧ ಹಂತದ ಚುನಾಯಿತ ಸದಸ್ಯರು ಚಿಂತಿಸಬೇಕಾದ ವಿಷಯವಾಗಿದೆ. ನಮ್ಮ ವಿದ್ಯಾವಂತ ಯುವಕರು ಆರೋಗ್ಯದ ಬಗ್ಗೆ ಬಹಳಷ್ಟು ಅರಿತುಕೊಂಡರೂ ಅವರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು, ತಮ್ಮ ಸುತ್ತ ಮುತ್ತಲಿನ ಜನರ ಬಗ್ಗೆ ಒಂದಿಷ್ಟೂ ಕಾಳಜಿ ವಹಿಸದೆ ನಗರ ಪ್ರದೇಶದಲ್ಲಿ ವಾಸಿಸಿ, ಗ್ರಾಮೀಣ ಪ್ರದೇಶದಿಂದ ದೂರವಿರಲು ಇಚ್ಛಿಸುತ್ತಿರುವುದು ಒಂದು ದರಂತವೆಂದೇ ಹೇಳಬಹುದು. ಹಾಗಾಗಿ ಗ್ರಾಮ ಸ್ವಚ್ಛತೆ ಮತ್ತು ಆರೋಗ್ಯ ಕಾಪಾಡುವಂತಹ ಕಾರ್ಯಗಳನ್ನು ತಮ್ಮ ಸ್ವಸಾಮರ್ಥ್ಯದಿಂದಲೇ ಕೈಗೊಂಡು ಪ್ರಾರಂಭ ಮಾಡಬೇಕು. ಈಗಿನ ಗ್ರಾಮ ಪಂಚಾಯತಿಗಳು ಗ್ರಾಮ ಸರಕಾರವೆಂದೇ ಬಿಂಬಿತವಾಗಿದ್ದರೂ, ಗಾಂಧೀಜಿಯವರ ದೃಷ್ಟಿಯಲ್ಲಿ ಕೈಗೊಳ್ಳಬೇಕಾದ ಸ್ವಚ್ಛತೆಯ ಕ್ರಮಗಳು, ಆರೋಗ್ಯ ರಕ್ಷಣೆ ಮತ್ತು ಚಿಕಿತ್ಸೆ, ಬಾವಿ ಮತ್ತು ಕೆರೆಗಳನ್ನು ಶುಚಿಯಾಗಿಡುವುದು, ಮುಂತಾದ ಕಾರ್ಯಗಳು ನಡೆಯದೇ ಇರುವುದು ದುರದೃಷ್ಟಕರ. ಗಾಂಧೀಜಿಯವರು ಬೇರೆಯವರಿಗೆ ಹೇಳುವ ಉಪದೇಶಗಳು ಮತ್ತು ಸಲಹೆಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದ

ಗಾಂಧೀಜಿಯವರು ಬೇರೆಯವರಿಗೆ ಹೇಳುವ ಉಪದೇಶಗಳು ಮತ್ತು ಸಲಹೆಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿ ಕೊಂಡಿದ್ದರಿಂದ ಅವರ ಉಪದೇಶಗಳು ಇಂದಿಗೂ ಮೌಲ್ಯಯುತವಾಗಿವೆ.



* ಶ್ರೀದತ್ತ ನಿಲಯ, 11ನೇ ಅಡ್ಡರಸ್ತೆ, ಜಯನಗರ ಪೂರ್ವ, ತುಮಕೂರು – 572 102.

ಅವರ ಉಪದೇಶಗಳು ಇಂದಿಗೂ ಮೌಲ್ಯಯುತವಾಗಿವೆ. ಗ್ರಾಮದಲ್ಲಿರುವವರಿಗೆ ಬೇಕಾಗುವಷ್ಟು ಆಹಾರ ಉತ್ಪಾದನೆ ಮಾಡಲು ಜಮೀನು, ಮಕ್ಕಳಿಗೆ ಆಟವಾಡಲು ಬೇಕಾಗುವ ಮೈದಾನ ಪ್ರದೇಶ, ಜಾನುವಾರುಗಳಿಗೆ ಬೇಕಾಗಿರುವ ಮೇವಿಗಾಗಿ ಪ್ರದೇಶ ಇಟ್ಟುಕೊಂಡು, ಉಳಿದ ಜಮೀನಿನಲ್ಲಿ ವಾಣಿಜ್ಯ ಬೆಳೆ ಬೆಳೆಸಬೇಕೆಂದು ಅವರ ಅನಿಸಿಕೆ. ಆದರೆ ಯಾವುದೇ ಕಾರಣಕ್ಕೂ ಗಾಂಜಾ, ಹೊಗೆಸೊಪ್ಪು, ಅಫೀಮು, ಬೆಳೆಸಬಾರದೆಂದು ಹೇಳುತ್ತಲಿದ್ದರು. ಕಾರಣ ಈ ಉತ್ಪನ್ನಗಳು ಗ್ರಾಮೀಣ ಜನರ ಆರೋಗ್ಯ ಹಾಳು ಮಾಡುತ್ತವೆ. ನೀರಿನ ಸರಬರಾಜಿಗೆ ತನ್ನದೇ ವ್ಯವಸ್ಥೆಯನ್ನು ಸುರಕ್ಷಿತ ಬಾವಿಗಳಿಂದ ಮಾಡಿಕೊಳ್ಳಬೇಕು. ಈ ಬಾವಿಗಳ (ಕೊಳವೆ ಬಾವಿ, ಕೈ ಪಂಪು) ಪರಿಸರವನ್ನು ರಕ್ಷಿಸಿಕೊಳ್ಳಬೇಕು. ಆದರ್ಶ ಗ್ರಾಮದಲ್ಲಿ ಅತ್ಯುತ್ತಮ ಸ್ವಚ್ಛತಾ ವ್ಯವಸ್ಥೆ, ಗಾಳಿ, ಬೆಳಕು ಧಾರಾಳವಾಗಿ ಬರುವ ಮನೆಗಳು, ನಿರ್ಮಲವಾದ ಅಗಲವಾದ ರಸ್ತೆಗಳು, ಎಲ್ಲರಿಗೂ ಲಭ್ಯವಿರುವ ನೀರಿನ ಬಾವಿಗಳು (ಈಗ ನಲ್ಲಿ, ಕೊಳವೆ ಬಾವಿಗಳು, ಕೈ ಪಂಪು) ಲಭ್ಯವಿರಬೇಕು. ಸಮಾಜ ಸೇವಕ ಮೊದಲು ಗ್ರಾಮದ ಸ್ವಚ್ಛತೆಯ ಸಮಸ್ಯೆಗಳನ್ನು ಪರಿಹರಿಸುತ್ತಾನೆ. ಗ್ರಾಮ ಸ್ವಚ್ಛತೆಯ ಕಾರ್ಯವು ನಮ್ಮ ಗ್ರಾಮಾಭಿವೃದ್ಧಿಯ ಒಂದು ಅವಿಭಾಜ್ಯ ಘಟಕವಾಗಿದೆ. ಗ್ರಾಮ ಸ್ವಚ್ಛತೆ ಅತ್ಯಂತ ಮುಖ್ಯ ಮತ್ತು ಕಠಿಣವಾಗಿದೆ. ಅನಾರೋಗ್ಯದಿಂದಿರುವ ಪ್ರದೇಶಗಳಿಂದ ಗ್ರಾಮ ಸ್ವರಾಜ್ಯ ಕಟ್ಟಲು ಸಾಧ್ಯವಿಲ್ಲ.

ಗ್ರಾಮ ಸ್ವಚ್ಛತೆ ಗ್ರಾಮ ಪಂಚಾಯಿತಿಗಳಿಂದ ಒಂದರಿಂದಲೇ ಸಾಧ್ಯವಿಲ್ಲ. ಗ್ರಾಮದ ಜನರು ಈ ಕಾರ್ಯಕ್ರಮಕ್ಕೆ ಕೈಜೋಡಿಸಬೇಕು. ಗ್ರಾಮದ ಕೆರೆ, ಕಟ್ಟೆಗಳು, ಬಾವಿಗಳು, ಮುಂತಾದ ನೀರಿನ ಆಸರೆಗಳನ್ನು ಆಗಾಗ್ಗೆ ಸ್ವಚ್ಛವಾಗಿಡುವ ಕಾರ್ಯ ನಿರಂತರವಾಗಿ ಗ್ರಾಮದವರೇ ಮಾಡಿಕೊಳ್ಳಬೇಕು. ಸರತಿ ಆಧಾರದ ಮೇಲೆ ಅಥವಾ ವಾರಕ್ಕೊಮ್ಮೆ ಎಲ್ಲಾ ಗ್ರಾಮದ ನಾಗರೀಕರು ಗ್ರಾಮದ ಬೀದಿಯಲ್ಲಿನ ಕಸ ಗುಡಿಸಬೇಕು. ನಾಗರೀಕರು ತಮ್ಮ ಮನೆಯ ಒಳಗೆ ಮತ್ತು ಹೊರಗೆ ಪರಿಸರ ನೈರ್ಮಲ್ಯ ಕಾಪಾಡಿಕೊಳ್ಳಬೇಕು. ಮಲ ವಿಲಸರ್ಜನೆಗಾಗಿ ನೀರಿನ ಮೂಲದಿಂದ ಸ್ವಲ್ಪ ದೂರದಲ್ಲಿ ಶೌಚಾಲಯವನ್ನು ನಿರ್ಮಿಸಿಕೊಳ್ಳಬೇಕು. ವಿಸರ್ಜಿತ ಮಲದಿಂದ ಗೊಬ್ಬರವಾಗುವುದು. ಈಗ ಇಂಥ ಒಳ್ಳೆಯ ಗೊಬ್ಬರ ನಾಶವಾಗಿ ಕೋಟ್ಯಂತರ ರೂಪಾಯಿಗಳು ನಷ್ಟವಾಗುತ್ತಿದೆ. ಸುತ್ತಲೂ ದುರ್ನಾತವನ್ನು ದಿನವೂ ಹರಡುತ್ತಾ ನಾನಾ ರೋಗಗಳಿಗೂ ಕಾರಣವಾಗಿದೆ. ಮನುಷ್ಯನ ಮಲವನ್ನು ಮತ್ತು ಊರಿನ ಕಸ ರಾಶಿಯನ್ನು ವೈಜ್ಞಾನಿಕ ವಿಲೇವಾರಿ ಮಾಡಿ ಉತ್ತಮ ಗೊಬ್ಬರ ಪಡೆಯಬಹುದು. ಈ ಗೊಬ್ಬರವು ಜಮೀನಿಗೆ ಉಪಯೋಗಿಸುವುದರಿಂದ ಮಣ್ಣಿನ ಸಾರ ಹೆಚ್ಚಿ, ಆಹಾರದ ಇಳುವರಿ ಹೆಚ್ಚುತ್ತಾ ಹೋಗುವುದು. ದಿನನಿತ್ಯ ವಿಸರ್ಜಿಸುವ ಕಸ ಒಳ್ಳೆಯ ಗೊಬ್ಬರವಾಗಿ ಮತ್ತೆ ಭೂಮಿಗೆ ಸೇರಿ ರೈತನಿಗೆ ಲಕ್ಷಾಂತರ ರೂಪಾಯಿಗಳು ಉಳಿತಾಯವಾಗುವುದು. ಹೀಗೆ ಕಸ ಮತ್ತು ಮಲವನ್ನು ಬಳಸುವುದರಿಂದ ಗ್ರಾಮದ ನೈರ್ಮಲ್ಯದ ರಕ್ಷಣೆಯು ಆಗುತ್ತದೆ ಮತ್ತು ಸ್ವಚ್ಛತೆ ಆರೋಗ್ಯವನ್ನು ರಕ್ಷಿಸುತ್ತದೆ. ಗಾಂಧೀಜಿಯವರ ಕಲ್ಪನೆಯ **"ಗ್ರಾಮ ಜನರ ಆರೋಗ್ಯ"** ಕಾಪಾಡುವಲ್ಲಿ ಈಗ ಪ್ರತಿ ಗ್ರಾಮಗಳಲ್ಲಿ ರಚಿಸಿರುವ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ಪೂರಕವಾಗಿ ಕೆಲಸ ನಿರ್ವಹಿಸುತ್ತಲಿವೆ.

ಸ್ನಾನ, ಬಟ್ಟೆ ಒಗೆಯುವುದು, ಕುಡಿಯುವುದು, ಅಡುಗೆ ಮಾಡುವುದು, ಮಲ ವಿಸರ್ಜನೆಯ ನಂತರ ತಮ್ಮ ಅಂಗಗಳನ್ನು ಸ್ವಚ್ಛಗೊಳಿಸುವುದು ಮುಂತಾದವುಗಳನ್ನು ಗ್ರಾಮದ ಕೆರೆಗಳ ನೀರಿನಲ್ಲಿ ನಿರಂತರವಾಗಿ ನಡೆದು, ನೀರು ಮಲಿನವಾಗುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಇದನ್ನು ತಡೆಯಬೇಕೆಂದು ಗಾಂಧೀಜಿಯವರು ಹೇಳಿದ್ದಾರೆ. ಕೆರೆ, ಕಟ್ಟೆಗಳ ನೀರನ್ನು ಮಲಿನವಾಗದಂತೆ ಗ್ರಾಮದ ಜನರು ಎಚ್ಚರ ವಹಿಸಬೇಕೆಂದಿದ್ದಾರೆ. ರೋಗ ಬಂದ ಮೇಲೆ ವೈದ್ಯಕೀಯ ಚಿಕಿತ್ಸೆ ಪಡೆಯುವುದಕ್ಕಿಂತ ಮೊದಲು ರೋಗ ಬರದಂತೆ ಎಚ್ಚರ ವಹಿಸುವ ಕ್ರಮಗಳು ಹೆಚ್ಚು ಸೂಕ್ತ ಮತ್ತು ಪ್ರಯೋಜನಕಾರಿಗಳಾಗಿವೆ. ರೋಗ ಏಕೆ ಬಂತು, ಹೇಗೆ ಬಂತು, ತಡೆಗಟ್ಟುವ ಕ್ರಮಗಳು, ಮುಂತಾದವುಗಳನ್ನು ತಿಳಿದವರಿಂದ ಅರಿತು ಅನುಸರಿಸುವುದು ಉತ್ತಮ ಮಾರ್ಗವಾಗಿದೆ. ಸ್ವಚ್ಛತೆ ಮತ್ತು ವೈಯಕ್ತಿಕ ನೈರ್ಮಲ್ಯಗಳನ್ನು ಅಭ್ಯಾಸ ಮಾಡಿ ಆರೋಗ್ಯ ಕಾಪಾಡಿಕೊಳ್ಳುವುದನ್ನು ಮರೆಯಬಾರದು. ಶರೀರದ ನೈರ್ಮಲ್ಯ, ಮನೆ ಮತ್ತು ಗ್ರಾಮಗಳ ಸ್ವಚ್ಛತೆಗಳನ್ನು ನಿಯಮಿತವಾಗಿ ಅಭ್ಯಾಸ ಮಾಡಿ, ಆಹಾರ ಮತ್ತು ವ್ಯಾಯಾಮಗಳನ್ನು ಎಚ್ಚರಿಕೆಯಿಂದ ಮಾಡಿದ್ದಲ್ಲಿ ಯಾವ ರೋಗಗಳಿಗೂ ಬಲಿಯಾಗಬೇಕಿಲ್ಲ ಎಂದೇ ಗಾಂಧೀಜಿಯವರ ನಂಬಿಕೆಯಾಗಿತ್ತು.

❑

# ನಾವೆಲ್ಲಾ ಒಂದೇ ... ಭಾರತ ಒಂದೇ

– ಆರ್. ಜಯರಾಮಯ್ಯ *

ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯವರ ಜೀವನಮಟ್ಟವು ಸುಧಾರಿಸುವಂತಾಗಲು ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ಮಟ್ಟವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಪ್ರತ್ಯೇಕವಾದ ಕಾರ್ಯಕ್ರಮಗಳನ್ನು ಅವ್ಯಾಹತವಾಗಿ ಹಮ್ಮಿಕೊಳ್ಳುತ್ತಲೇ ಇದೆ.

ಭಾರತ ದೇಶವು ವೈಶಿಷ್ಟ್ಯವಾದ ಸಾಮಾಜಿಕ ತತ್ವಗಳನ್ನು ವೈವಿಧ್ಯ ನಾಗರಿಕತೆಗಳನ್ನೂ ಮೇಳೈಸಿಕೊಂಡು, ಜೊತೆ ಜೊತೆಗೆ ವೈಜ್ಞಾನಿಕ ಅವಿಷ್ಕಾರಗಳನ್ನು, ಕಂಡುಕೊಂಡು ಬಂದಿರುತ್ತದೆಯೆಂಬುದನ್ನು ವೇದ–ಪುರಾಣೇತಿಹಾಸಗಳನ್ನು ವಿವೇಚನಾಯುತವಾಗಿ ಅಧ್ಯಯನ ಮಾಡಿದವರಿಗೆ ಅರಿವಾಗದಿರದು. ಹಾಗೆಯೇ ಸಾಮಾಜಿಕ ಚಟುವಟಿಕೆಗಳಲ್ಲಿ ಪರಸ್ಪರ ಸುಲಲಿತತೆಯನ್ನು ಹೊಂದುವುದಕ್ಕಾಗಿಯೋ ಅಥವಾ ಆಯಾಯ ಪ್ರತಿಭೆಗಳ ಆಧಾರಿತವಾಗಿ ಕೌಶಲ್ಯತೆ, ಅನ್ವೇಷಣೆ ಮತ್ತು ಸಂಶೋಧನೆಗಳ ದೃಷ್ಟಿಕೋನಗಳಿಂದಲೋ, ಪ್ರಾಚೀನದಲ್ಲಿ ಜನಸಮುದಾಯದವರು ವೃತ್ತಿಗಳನ್ನು ಪರಸ್ಪರರು ವಿಭಜಿಸಿಕೊಂಡಿದ್ದೇ; ತದನಂತರದಲ್ಲಿ ವೃತ್ತಿಪರ ಜಾತಿಗಳಾಗಿ ಮುಂದುವರಿದಿದ್ದಿರಬಹುದು. ಈ ವ್ಯವಸ್ಥೆಯನ್ನು ಅಂದಿನ ದಿನಗಳಲ್ಲಿ ಪರಸ್ಪರರು ತಂತಮ್ಮ ಅಭಿಮತಗಳೊಂದಿಗೂ, ಐಚ್ಛಿಕವಾಗಿಯೂ ನಡೆಸಿಕೊಂಡು ಬಂದಿದ್ದಿರಬಹುದು. ಈ ರೀತಿಯ ಪೀಳಿಗೆ ಪರಂಪರೆಯ ವೃತ್ತಿ ಕೌಶಲ್ಯಗಳೇ ಕರ್ಮಾನುಸಾರ ಜಾತಿಗಳಾಗಿ ಬೇರೂರಿದ್ದಿರಬಹುದು. ಅನ್ಯೋನ್ಯತೆಯಿಂದಲೇ ಇದ್ದಿರಬಹುದಾದ ಈ ವೃತ್ತಿ ಜಾತಿಯ ವ್ಯವಸ್ಥೆಯು ಕಾಲಕ್ರಮೇಣ ಮೇಲ್ಜಾತಿ, ಮಧ್ಯಮ ಜಾತಿ ಮತ್ತು ಕೆಳಜಾತಿಗಳಾಗಿ ಭಾವಿಸಲ್ಪಟ್ಟು, ಕಾಲಾನುಕ್ರಮದಲ್ಲಿ ಸ್ಪೃಶ್ಯರೂ, ಅಸ್ಪೃಶ್ಯರೂ, ಪರಿಶಿಷ್ಟರು ಎಂಬುದಾಗಿ ವಿಂಗಡಣೆಯಾಗಿದ್ದಿರಬಹುದು. ಆದಾಗ್ಯೂ ಆಯಾಯಾ ವೃತ್ತಿಗಳಲ್ಲಿ ತೃಪ್ತಿ ಕಂಡುಕೊಂಡು ಮೌಢ್ಯವಾಗಿ ರೂಢಿಸಿಕೊಂಡು ಬಂದಿದ್ದಿರಬಹುದು. ಈ ಜಾತಿಗಳ ವರ್ಗೀಕರಣ ಮೇಲ್ವರ್ಗದವರಲ್ಲಿಯೂ ವಿಭಜಿಸಲ್ಪಟ್ಟಿದ್ದು, ಅನೈತಿಕತೆಗಳ ಪರಿಣಾಮವಾಗಿಯೇ ಭಾರತ ದೇಶವು ಪರಕೀಯರ ದಾಳಿಗೆ ಅನೇಕ ಬಾರಿ ತುತ್ತಾಗಿ ದೇಶದ ಸಂಪತ್ತು ಲೂಟಿಯಾಗಿರುವುದಲ್ಲದೆ ಭಾರತೀಯ ಧರ್ಮೀಯರ ಮಾನಭಂಗಗಳು, ಮತಾಂತರಗಳು, ಬಲತ್ಕಾರಗಳು, ಪರಿವರ್ತನೆಗಳು ಅವ್ಯಾಹತವಾಗಿ ಆಗಿದ್ದಿರಬಹುದು. ಆದಾಗ್ಯೂ ಹಿಂದೂ ಸಂಸ್ಕೃತಿಯು ಪರ ಧರ್ಮದ ಸಹಿಷ್ಣತೆಯನ್ನು ಪಾಲಿಸಿಕೊಂಡು ಬಂದಿದೆ. ಜಾತಿ ವ್ಯವಸ್ಥೆಯು ಭಾರತದಲ್ಲಿ ಇರದಿದ್ದರೆ ಇಂತಹ ದುರ್ಘಟನೆಗಳು ಆಗಿಂದಾಗ್ಗೆಯೇ ನಿರ್ಮೂಲನೆಯಾಗುತ್ತಿದ್ದುವೆ?

ಭಾರತದಲ್ಲಿ ಈ ರೀತಿಯ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆಗೊಳಿಸಿ ಪರಸ್ಪರರಲ್ಲಿ ಭಾವೈಕ್ಯತೆಯನ್ನು ಉಂಟು ಮಾಡಲಿಕ್ಕಾಗಿಯೇ ಗೌತಮ ಬುದ್ಧರಾದಿಯಾಗಿ ಬಸವಣ್ಣನವರವರೆಗೆ ಅನೇಕ ಮಹನೀಯರು ಧಾರ್ಮಿಕವಾಗಿ ಶ್ರಮಿಸಿದ್ದಾರೆ; ಆದಾಗ್ಯೂ ಸಮಗ್ರ ಬದಲಾವಣೆಗಳಾಗದೇ ಹಿಂದೂ ಸಮಾಜದ ಜಾತಿ ವ್ಯವಸ್ಥೆ ಉಳಿದುಕೊಂಡೇ ಬಂದಿತು. ಬ್ರಿಟಿಷರ ಅಧಿಪತ್ಯವಿದ್ದಾಗಲೂ ಪರಿಶಿಷ್ಟ ಜಾತಿಗೆ ಸೇರಿದವರ ಜೀವನಮಟ್ಟವನ್ನು ಸುಧಾರಿಸಲು ಪರಿಶಿಷ್ಟ ಜಾತಿಯವರಿಗೆ ಉತ್ತಮ ವಸತಿ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಪ್ರತ್ಯೇಕ ಬಡಾವಣೆಗಳನ್ನು ನಿರ್ಮಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುದನ್ನು ನಗರ ಪಟ್ಟಣಗಳಲ್ಲಿ ಈಗಲೂ ಕಾಣಬಹುದು.

* ಚಿಕ್ಕಬಾಣಗೆರೆ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

ಸ್ವಾತಂತ್ರೋತ್ತರ ದಿನಗಳಲ್ಲಿ ಭಾರತ ಸರ್ಕಾರವು ಪರಿಶಿಷ್ಟ ಜಾತಿಯವರಿಗೆ ಸೇರಿದ ಸಮುದಾಯವನ್ನು ಮೇಲ್ಮಟ್ಟಕೇರಿಸಲು ಉಚಿತ ಜಮೀನು ಮಂಜೂರು, ಉಚಿತ ವಸತಿ ಮತ್ತು ಮೂಲ ಸೌಕರ್ಯ ಮುಂತಾದ ಅನೇಕಾನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿಕೊಂಡು ಬಂದಿರುತ್ತದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯವರ ಜೀವನಮಟ್ಟವು ಸುಧಾರಿಸುವಂತಾಗಲು ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ಮಟ್ಟವನ್ನು ವೃದ್ಧಿಗೊಳಿಸುವ ನಿಟ್ಟಿನಲ್ಲಿ ಪ್ರತ್ಯೇಕವಾದ ಕಾರ್ಯಕ್ರಮಗಳನ್ನು ಅವ್ಯಾಹತವಾಗಿ ಹಮ್ಮಿಕೊಳ್ಳುತ್ತಲೇ ಇದೆ. ಅವುಗಳಲ್ಲಿ ವಸತಿ ಸೌಕರ್ಯಗಳ ನಿರ್ಮಾಣವು ಆದ್ಯತೆಯಲ್ಲಿದೆ.

ಪರಿಶಿಷ್ಟ ಜಾತಿಯುವರು, ಹಿಂದುಳಿದವರು, ಅಲ್ಪಸಂಖ್ಯಾರು ಮತ್ತು ಎಲ್ಲಾ ವರ್ಗಗಳು, ಆರ್ಥಿಕವಾಗಿ ಹಿಂದುಳಿದವರೂ ಸಮಾಜದಲ್ಲಿ ಸಹಬಾಳ್ವೆ ಮಾಡುವಂತಾಗಬೇಕು, ಆರ್ಥಿಕವಾಗಿ, ಬೌದ್ಧಿಕವಾಗಿ ಮೇಲ್ಮಟ್ಟಕ್ಕೆ ಬರಬೇಕೆಂಬಿತ್ಯಾದಿ ಚಿಂತನೆಗಳು, ಬಹುತೇಕ ಭಾರತೀಯರಲ್ಲಿ ಮಹಾತ್ಮ ಗಾಂಧೀಜಿ, ಡಾ: ಅಂಬೇಡ್ಕರ್, ರಾಮಮನೋಹರ್ ಲೋಹಿಯಾ ಮುಂತಾದ ರಾಜಕೀಯ ನಾಯಕರನೇಕರಲ್ಲಿ ಮೇಲ್ಜಾತಿಯ ಮುಖಂಡರಲ್ಲಿ ಮತ್ತು ಪರಿಶಿಷ್ಟ ವರ್ಗದ ಮುಖಂಡರಲ್ಲಿ ವ್ಯಕ್ತಪಟ್ಟಿರುವುದೂ ಇದೆ. "ಮಾನವ ಕುಲವೊಂದೇವಲಂ" ಎಂಬ ಕವಿ ಪಂಪರಾದಿಯಾಗಿ ಕುವೆಂಪುರವರೆಗೂ ಕವಿವಾಣಿಗಳು ಬಿತ್ತರಗೊಂಡಿವೆ. ಈ ಹಿನ್ನಲೆಯಲ್ಲಿ ಸರ್ಕಾರದಿಂದ ಮಂಜೂರಾದ ಎಲ್ಲಾ ವಸತಿ ಯೋಜನೆಗಳ ಫಲಾನುಭವಿಗಳಿಗೆ ನಿವೇಶನಗಳ ಹಾಗೂ ವಸತಿಗಳನ್ನು ಜಾತ್ಯಾತೀವಾಗಿ ಹಂಚಿಕೆ ಮಾಡಿ ಎಲ್ಲರೂ ಸಹಕಾರ, ಸಮನ್ವಯದಿಂದ ಬಾಳುವಂತಹ ಪರಿಸರ ನಿರ್ಮಾಣವಾದಾಗ ... ನಾವೆಲ್ಲ ಒಂದೇ, ಭಾರತ ಒಂದೇ ಎಂಬ ಆಶಯ ವಾಸ್ತವವಾದೀತು ಅಲ್ಲವೇ ...?

❑

---

## ಮೊಬೈಲ್ ಸಂಖ್ಯೆ ನಮೂದಿಸಿ ......

ಗ್ರಾಮೀಣಾಭಿವೃದ್ಧಿಯ ಬಗ್ಗೆ ಮತ್ತು ಸಂಬಂಧಿಸಿದಂತೆ ಆಸಕ್ತ ವಿಚಾರಗಳನ್ನು ಲೇಖಕರು ಹಾಗೂ ಆಸಕ್ತರು ಲೇಖನಗಳ ರೂಪದಲ್ಲಿ 'ಕರ್ನಾಟಕ ವಿಕಾಸ' ಪತ್ರಿಕೆಗೆ ತಲುಪಿಸುತ್ತಿದ್ದಾರೆ. ಪತ್ರಿಕೆಗೆ ಆಯ್ಕೆಯಾದ ಲೇಖನಗಳ ಕರಡನ್ನು ಪರಿಶೀಲಿಸುವಲ್ಲಿ ಲೇಖಕರಿಂದ ಕೆಲವೊಮ್ಮೆ ಸ್ಪಷ್ಟೀಕರಣವನ್ನು ಅಥವಾ ಅಧಿಕ ಮಾಹಿತಿಯನ್ನು ಪಡೆಯುವ ಸಂದರ್ಭವಿರುತ್ತದೆ,

**ಆದ್ದರಿಂದ ಲೇಖಕರು/ ಆಸಕ್ತರು ಲೇಖನವನ್ನು ಪತ್ರಿಕೆಗೆ ತಲುಪಿಸುವಾಗ ಲೇಖಕರ ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಕೋರಿದೆ.**

ಲೇಖನಗಳನ್ನು 'ನುಡಿ' ಉಚಿತ ತಂತ್ರಾಂಶವನ್ನು ಬಳಸಿ **karnatakavikasa@ymail.com** ವಿಳಾಸಕ್ಕೆ ಈ-ಮೇಲ್ ಮುಖಾಂತರವೂ ಕಳುಹಿಸಬಹುದಾಗಿದೆ. ಅಂಚೆಯ ಮೂಲಕ ತಲುಪಿಸಬಯಸುವವರು ಕೆಳಕಂಡ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಮುಖ್ಯ ಸಂಪಾದಕರು**
**'ಕರ್ನಾಟಕ ವಿಕಾಸ'**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001. ದೂರವಾಣಿ : (080) 22353857
www.rdpr.kar.nic.in email:karnatakavikasa@ymail.com

ಲೇಖನ

# ನಮ್ಮ ಹಳ್ಳಿಗಳು ಮತ್ತು ಸ್ವಚ್ಛತೆ



ಶರತ್‌ಕುಮಾರ. ಎ. *

ನಮ್ಮ ದೇಶವು ಬಡತನದಿಂದ ಮುಕ್ತ ಹೊಂದಿ ಅಭಿವೃದ್ಧಿಯಾಗಬೇಕಾದರೆ ಜನರ, ಸಮುದಾಯದ ಸ್ವಭಾವದಲ್ಲಿ ಬದಲಾವಣೆಯಾಗಬೇಕು ಆಗ ಮಾತ್ರ ಸುಂದರ ಭಾರತದ ಭವಿಷ್ಯ ನಿರ್ಮಾಣ ಸಾಧ್ಯ

ಭಾರತ ಒಂದು ಬಹು ಹಳ್ಳಿಗಳಿಂದ ಕೂಡಿದ ಸುಂದರ ರಾಷ್ಟ್ರ ಯುದ್ಧಕ್ಕೆ ಅಣಿಯಾಗಿ ನಿಂತಿರುವ ಸೈನಿಕನಂತೆ ಭಾಸವಾಗುವ ಭಾರತದ ನಕಾಶೆಯ ಕಲ್ಪನೆಯು ಅತಿ ಸುಂದರ ಪೂರ್ವಕ್ಕೆ ಹಚ್ಚ ಹಸಿರಿನ ನಿತ್ಯ ಹರಿದ್ವರ್ಣಗಳಿಂದ ಕೂಡಿದ ಕಾಡುಗಳು, ಪಶ್ಚಿಮಕ್ಕೆ ಬಿಸಿಯಾದ ಮರುಭೂಮಿ, ಉತ್ತರಕ್ಕೆ ವಜ್ರದಂತೆ ಕಂಗೊಳಿಸುವ ಹಿಮಾಲಯದ ಹಿಮಛಾದಿತ ಶಿಖರಗಳು ಮತ್ತು ದಕ್ಷಿಣಕ್ಕೆ ನೀಲಿ ಬಣ್ಣದ ಮಹಾಸಾಗರ ಇಂತಹ ದೇಶ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿರುವುದು ದೇಶದ ನಡೆ ನುಡಿಯಲ್ಲಿ ಎಲ್ಲಾ ಕೂಡ ವಿಶ್ವವೂ ನಿಬ್ಬೆರಗಾಗಿ ನೋಡುವಂತೆ ಮಾಡಿದೆ. ಭಾರತವೇ ಒಂದು ನಿಸರ್ಗ ಶಾಲೆಯಿದ್ದಂತೆ ಇಲ್ಲಿ ಹುಟ್ಟಿದ ಪ್ರತಿಯೊಬ್ಬರು ತನ್ನಿಂತಾನೇ ಜೀವನದ ನಡೆ ನುಡಿಗಳನ್ನು ಕಲಿಯುತ್ತಾರೆ. ಪರಿಸರದಿಂದ, ಗಿಡ ಮರ ಬಳ್ಳಿಗಳಿಂದ ಪ್ರಾಣಿ ಪಕ್ಷಿಗಳಿಂದ ಅಂದರೆ ನವಿಲಿನಂತೆ ಕುಣಿಯುವುದನ್ನು, ಹುಲಿಯಿಂದ ಧೈರ್ಯವನ್ನು, ಜಿಂಕೆಯಿಂದ ಓಡುವುದನ್ನು, ಇರುವೆಯಿಂದ ಸಹಬಾಳ್ವೆಯನ್ನು ಹಾಗೂ ಕಾಗೆಯಿಂದ ಸಮಪಾಲು, ಸಮಬಾಳು ಎಂಬ ತತ್ವವನ್ನು ಆದರೆ ಇಂದು ನಮ್ಮ ಹಳ್ಳಿಗಳಲ್ಲಿ ಇನ್ನು ಎರಡು ಜೀವಿಗಳಿಂದ ನಾವು ಕಲಿಯಬೇಕಾದುದು ಬಹಳ ಉಳಿದಿದೆ. ಅವು ಯಾವ ಜೀವಿಗಳು? ಅವುಗಳೇ ಚಿಟ್ಟೆ ಮತ್ತು ಬೆಕ್ಕು.

ಚಿಟ್ಟೆ ಪರಿಕಲ್ಪನೆ ಎಷ್ಟು ಚಂದ ಸ್ವಚ್ಛ ಪರಿಸರ, ಹೂ ತೋರಣ, ಶುದ್ಧಗಾಳಿಯಲ್ಲಿ ಸ್ವಚ್ಛಂದವಾಗಿ ತೇಲಾಡುತ್ತಿದ್ದರೆ ಅದರ ಹಿಂದೆ ಓಡುವ ಹುಡುಗರ ಪಡೆ ಇದು ನಿಜವಾದ ಹಳ್ಳಿಯ ಸುಂದರ ಬದುಕು ಆದರೆ? ಹೇಗೆ ವಾಯು ಮಾಲಿನ್ಯವಾದರೆ ಕಲ್ಲೂ ಹೂ ಇಲ್ಲವಾಗುತ್ತದೋ ಹಾಗೆ ಇಂದು ಹಳ್ಳಿಗಳಲ್ಲಿ ಚಿಟ್ಟೆಗಳು ಕಾಣುವುದು ಬಹು ಅಪರೂಪ ಇದಕ್ಕೆಲ್ಲಾ ಹೊಣೆಗಾರ ಈ ಜಗತ್ತಿನಲ್ಲಿ ಅಲ್ಪನಾದರು ಇಡೀ ಜಗತ್ತನ್ನೆ ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡು ವಿಶ್ವದ ಸಂತುಲನೆಯನ್ನು ಬಿಗಡಾಯಿಸುತ್ತಿರುವ ಮಾನವ.

ಏಕೆಂದರೆ ಜೀವನ ಸ್ಥಿತಿಗತಿ ಬದಲಾಯಿಸಿದಂತೆ ಹಾವಭಾವ, ಆಹಾರದಲ್ಲಿ ಬದಲಾವಣೆ, ಆಹಾರದ ಆಯ್ಕೆ ಮಾತ್ರ ಪಕ್ಕಾ ! ಆದರೆ ಅದನ್ನು ಹಾಕುವುದು ಮಾತ್ರ ಹೊರಕ್ಕಾ !! ಅದು ನಮ್ಮ ಗ್ರಾಮದ ಸುತ್ತಮುತ್ತ.

ನಮ್ಮ ಹಳ್ಳಿಯಲ್ಲಿ ಸುಮಾರು ಶೇ. 90% ಕ್ಕಿಂತ ಹೆಚ್ಚು ಜನರು ಮೂತ್ರ ಮಲಮೂತ್ರ ವಿಸರ್ಜನೆಯನ್ನು ಬಯಲಿಗೆ ಧಾರೆಯರೆಯುತ್ತಾರೆ. ಇದರಿಂದಾಗುವ ದುಷ್ಪರಿಣಾಮ, ರೋಗ, ತೊಂದರೆ, ಇದ್ಯಾವುದರ ಬಗ್ಗೆಯೂ ಚಿಂತಿಸುವುದಿಲ್ಲ. ಒಂದು ವ್ಯಕ್ತಿ ದಿನಕ್ಕೆ 200–250 ಕಿ.ಗ್ರಾಂ ಮಲ ವಿಸರ್ಜಿಸಿದರೆ ಸುಮಾರು 1000 ಜನಸಂಖ್ಯೆ ಇರುವ ಗ್ರಾಮ ತೆಗೆದುಕೊಂಡರೆ 200000 ಕಿ.ಗ್ರಾಂ. ಮಲ ಬಯಲಲ್ಲಿ ವಿಸರ್ಜನೆಯಾಗುತ್ತದೆ. ಇದು

* ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ್ ಶಾಖಾ ಕುಶನೂರು – 585436, ತಾ|| ಔರಾದ (ಬಿ), ಜಿ|| ಬೀದರ್.

ಸೇರುವುದು ಎಲ್ಲಿ ನಮ್ಮ ಕೆರೆ, ನೀರಿನ ಮೂಲಗಳಾದ ಬಾವಿ, ಕೊಳವೆ ಬಾವಿ ಹಾಗೂ ನಾಲೆ, ದನಗಳ ಮೂಲಕ ಮನೆಗಳಿಗೆ, ಅದೇ ರೀತಿ ನೊಣಗಳ ಮೂಲಕ ನಮ್ಮ ಹೊಟ್ಟೆಗೆ ಸೇರುತ್ತದೆ. UNICEF ವರದಿಯ ಪ್ರಕಾರ 1gm ಮಲದಲ್ಲಿ ಒಂದು ಕೋಟಿ ವೈರಾಣು, 10 ಲಕ್ಷ ರೋಗಾಣು, 1000, 100 ರೋಗಾಣು ಮೊಟ್ಟೆಗಳಿರುತ್ತದೆ.

ಇವುಗಳಿಂದ ಪೋಲಿಯೋ, ಜಾಂಡೀಸ್, ಆಮಶಂಕೆ, ಕಾಲರಾ ರಕ್ತಹೀನತೆ, ವಿಶಮಶೀತ ಜ್ವರ, ಚಿಕನ್‌ಗುನ್ಯ, ಇಲಿ ಜ್ವರದಂತಹ ಭಯಾನಕ ಮಹಾ ಮಾರಿಗಳು ಆವರಿಸಿ ಕೊಳ್ಳುತ್ತವೆ.

ಇದರಿಂದ ನಮ್ಮ ಹಳ್ಳಿಯ ಜನರ ಸ್ಥಿತಿಗತಿ ದಿನಾಲು ಚಿಂತಾಜನಕವಾಗುತ್ತಿದೆ ಹೊರತು ಅವರು ಬಡತನದಿಂದ ಮೇಲೆ ಬರಲು ಸಾಧ್ಯವಿಲ್ಲ.

ನಮ್ಮ ಹಳ್ಳಿಯ ಅಕ್ಕ ತಂಗಿಯರು, ತಾಯಂದಿರು ಮಲವಿಸರ್ಜನೆಗೆ ಪಡುವ ಕಷ್ಟ ಅಷ್ಟಿಷ್ಟಲ್ಲ ಸೂರ್ಯನ ಬೆಳಕು ಇಲ್ಲದಾಗ ಮಾತ್ರ ಬಯಲಿಗೆ ಹೋಗಬೇಕು ಅಲ್ಲಿಯವರೆಗೆ ಮಲವನ್ನು ಹೊಟ್ಟೆಯಲ್ಲಿಟ್ಟುಕೊಂಡೆ ಕಾಯಬೇಕು, ಇಲ್ಲವೇ ಬಯಲಿಗೆ ಹೋದಾಗ ಯಾರಾದರು ಬಂದರೆ ಏಳಬೇಕು ಕೂರಬೇಕು ಇದರಿಂದ ಗರ್ಭಾಷಯ ಹಾಗೂ ಗರ್ಭಕೋಶ, ಮೂತ್ರಕೋಶದ ಮೇಲೆ ಒತ್ತಡ ಬಿದ್ದು ಹೆರಿಗೆ ಸರಳವಾಗದಿರುವುದು ಹಾಗೂ ಒಂದೊಂದು ಸಾರಿ ಮಗುವಿನ ಮೇಲೆ ಪರಿಣಾಮ ಬೀರುವುದು ಕಂಡುಬರುತ್ತದೆ.

ಅಲ್ಲದೇ ಬಯಲಿನಲ್ಲಿನ ಮಲದಿಂದ ಗಬ್ಬುನಾರುವ ವಾಸನೇ ಊರಲ್ಲಿ ಹರಡುವುದಲ್ಲದೇ, ಕೊಕ್ಕೆ ಹುಳು ಎಂಬ ಜಂತು ಪಾದದ ಮೂಲಕ ಸೇರಿ ಮಕ್ಕಳಲ್ಲಿ ಕರುಳಿನ ರಕ್ತ ಹೀರುವುದು, ಅಲ್ಲದೇ ಪೋಲಿಯೋ, ವೈರಾಣು, ಚಿಕ್ಕುನಗುನ್ಯ ವೈರಾಣುಗಳೂ ಕೂಡ ಇದರಿಂದ ಬರುವುದು ಅಲ್ಲದೇ ಹಳ್ಳಿಗಳಲ್ಲಿ ಇಂದಿಗೂ ಊರದೇವತೆಯ ಪ್ರಕೋಪ ಸಿಟ್ಟು ಎಂದು ರೋಗ ಬಂದಾಗ ಪ್ರಾರ್ಥಿಸುವುದು ರೂಢಿಯಲ್ಲುಂಟು, ಆದರೆ ಆ ದೇವರು ಯಾರು ಇಲ್ಲ ಹುಟ್ಟಿಸಿದ ದೇವರು ಎಂದಾದರು ಕೋಪಿಸಿಕೊಳ್ಳುವುದೇ ಇಲ್ಲ ಅದೆಲ್ಲ ಬಯಲಿನಲ್ಲಿರುವ ಮಲದ ಮಹಿಮೆ.

ಚಿಕೂನ್‌ಗುನ್ಯಾ ಬಂದಾಗ ಗ್ಲೂಕೋಸ್, ಕೊಕ್ಕೆಹುಳು ಬಂದಾಗ ಅಲ್ಬಂಡ್‌ಜೋಲ್, ಪೋಲಿಯೋ ಬಂದಾಗ ಎರಡು ಹನಿ, ವಾಂತಿ ಭೇದಿ ಬಂದಾಗ ORS ಇದೆಲ್ಲಾ ಬೇಕಾ ನಮಗೆ? ಇಲ್ಲ ಇವುಗಳನ್ನೆಲ್ಲಾ ದೂರವಿಡಬೇಕಾದರೆ ನಮ್ಮ ಹೊಟ್ಟೆಯಲ್ಲಿರುವ ಅನುಪಯುಕ್ತ ವಸ್ತುವನ್ನು ನಾವು ಬಯಲಿಗೆ ಹಾಕಬಾರದು ಬದಲಾಗಿ ಬೆಕ್ಕಿನಂತೆ ಅದನ್ನು ಮುಚ್ಚಬೇಕು ಅಂದರೆ ಬಯಲಲ್ಲಿ ಮಲವಿಸರ್ಜಿಸಿದರು ಕೂಡಾ ಅದು ಯಾವುದೇ ಮಾಧ್ಯಮಗಳಿಂದ ಹರಡಬಾರದು ಇದು ಪ್ರಥಮ ಹಂತ ಆದರೆ ಇದನ್ನು ಸಂಪೂರ್ಣವಾಗಿ ಬಯಲು ಮುಕ್ತ ಮಾಡಬೇಕೆಂದರೆ ಶೌಚಾಲಯ ನಿರ್ಮಾಣ ಮಾಡಬೇಕು ಅಂದರೆ? ತಲೆ ತಲಾಂತರಗಳಿಂದ ಬಂದ ಈ ಪದ್ದತಿಯನ್ನು ಬಿಡಲು ಸಾಧ್ಯವೇ ! ಹೌದು ಸಾಧ್ಯ ! ನಾವು ಹುಟ್ಟಿದ ಮೇಲೆ ಇಲ್ಲದಿದ್ದ ಸಂಗತಿಗಳಿಗೆ ನಾವು ಹೇಗೆ ಹೊಂದಿಕೊಂಡಿದ್ದೇವೆಯೋ ಇದು ಹಾಗೇ, ಮೊಬೈಲ್, ಗುಟ್ಕಾಗಳು ನಮ್ಮ ಜೀವನದ ಪಕ್ಕಾ ಅವಿಭಾಜ್ಯ ಅಂಗಗಳಾಗಿ ಬಿಟ್ಟವೆ ಆದರೆ ಇವುಗಳಿಂದ ಯಾವುದೇ ಲಾಭವಿಲ್ಲ ಅಂದರೆ ಜೀವನವೇನು ನಿಲ್ಲುವಂತಹದಲ್ಲ. ಆದರೆ ಹೀಗೆ ಬಯಲು ವಿಸರ್ಜನೆ ಮುಂದುವರೆದರೆ ಹಳ್ಳಿಯ ಉದ್ದಾರ ಅಸಾಧ್ಯ ಏಕೆಂದರೆ ಸುಮಾರು 80% ರೋಗಗಳು ಬರುವುದು ಬಯಲು ಮಲ ವಿಸರ್ಜನೆಯಿಂದಲೇ ಅಂದರೆ ಇದು ಎಷ್ಟು ಗಂಭೀರ ವಿಷಯವೆಂದು ಎಲ್ಲರೂ ಯೋಚಿಸಬೇಕಾದ ವಿಷಯ.

ಆದ ಕಾರಣ ನಮ್ಮ ದೇಶವು ಬಡತನದಿಂದ ಮುಕ್ತ ಹೊಂದಿ ಅಭಿವೃದ್ಧಿಯಾಗಬೇಕಾದರೆ ಜನರ, ಸಮುದಾಯದ ಸ್ವಭಾವದಲ್ಲಿ ಬದಲಾವಣೆಯಾಗಬೇಕು ಆಗ ಮಾತ್ರ ಸುಂದರ ಭಾರತದ ಭವಿಷ್ಯ ನಿರ್ಮಾಣ ಸಾಧ್ಯ ಬನ್ನಿ ಎಲ್ಲಾ ರೋಗಗಳಿಗೂ ಮೂಲ ಕಾರಣವಾದ ಬಯಲು ಮಲ ವಿಸರ್ಜನೆಯನ್ನು ಬಿಟ್ಟು ನಮ್ಮ ನಮ್ಮ ಮನೆ ಮನಗಳಲ್ಲಿ ಶೌಚಾಲಯ ನಿರ್ಮಿಸಿಕೊಳ್ಳೋಣ ಹಾಗೂ ಜನರು ಕೂಡ ಶೌಚಾಲಯ ನಿರ್ಮಿಸಿಕೊಳ್ಳಲು ಪ್ರೋತ್ಸಾಹಿಸೋಣ ಹಾಗೂ ಸುಂದರ, ಸ್ವಚ್ಛಂದ ಪರಿಸರವನ್ನು ನಿರ್ಮಿಸಿ ಹಳ್ಳಿಗಾರರ ಬಾಳು ಹಸನಾಗಿ ಹೊಸ ಹೊಂಬಣ್ಣ ಚಿತ್ತಾಕರ್ಷಕ ಚಿಟ್ಟೆಗಳು ನಮ್ಮ ಬಯಲಲ್ಲಿ ನಮ್ಮ ಬದುಕಲ್ಲಿ ಹಾರಾಡುವಂತೆ ನಾವೆಲ್ಲಾ ಜನ, ಸಮುದಾಯ ಮಾಡಿ ತೋರಿಸೋಣ ಬನ್ನಿ ನಾವೆಲ್ಲಾ ಸ್ವಂತ ಶಕ್ತಿಯಿಂದ ಶೌಚಾಲಯ ನಿರ್ಮಿಸಿಕೊಳ್ಳೋಣ ಹಾಗೂ ಅದನ್ನು ದಿನಾಲು ಬಳಸೋಣ !!

❑

# ಕೊಡಗು ಜಿಲ್ಲೆಯ ಅಭಿವೃದ್ಧಿ ಮುನ್ನಡೆ



ಎನ್. ಕೃಷ್ಣಪ್ಪ ಕೋಡಿಪಾಳ್ಯ *

ಕರ್ನಾಟಕದ ಕಾಶ್ಮೀರ ಎಂದು ಪ್ರಸಿದ್ಧಿಯಾದ ಪುಟ್ಟ ಜಿಲ್ಲೆ. ಕೊಡಗಿನ ಸಮಗ್ರ ಅಭಿವೃದ್ಧಿ ಚಿತ್ರಣದ ಸಂಕ್ಷಿಪ್ತ ವಿವರ.

1956ರ ವರೆವಿಗೂ ಪ್ರತ್ಯೇಕ ರಾಜ್ಯವಾಗಿ ಗುರುತಿಸಿಕೊಂಡ ವಿಶಿಷ್ಟ ಸಂಸ್ಕೃತಿ ಕಾಫಿ, ಕಿತ್ತಳೆ, ಶ್ರೀಗಂಧ, ತೇಗ, ಹೊನ್ನೆ ಮರಗಳಿಂದ ಶೋಭಿತವಾಗಿರುವ ಧೀರರು, ಶೂರರು, ಕ್ರೀಡಾಪಟುಗಳಿಗೆ ಜನ್ಮ ನೀಡಿರುವ ದೇಶದ ಪ್ರಥಮ ಸೇವಾ ದಂಡನಾಯಕ ಜನರಲ್ ಕಾರ್ಯಪ್ಪರವರ ಜನ್ಮ ಭೂಮಿಯಾದ ಕೊಡಗು ಜಿಲ್ಲೆ 3 ತಾಲ್ಲೂಕುಗಳಾದ ವೀರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ತಾಲ್ಲೂಕುಗಳನ್ನು ಒಳಗೊಂಡಿದ್ದು, ಅತ್ಯಂತ ಕಡಿಮೆ ಪ್ರಮಾಣದ 5,48,561 ಜನ ಸಂಖ್ಯೆ ಹೊಂದಿರುವ ಪುಟ್ಟ ಜಿಲ್ಲೆಯಾದರೂ ಇಲ್ಲಿ ಹರಿಯುವ ಕಾವೇರಿ, ಲಕ್ಷ್ಮಣತೀರ್ಥ, ಸುವರ್ಣವತಿ, ಹೇಮಾವತಿ ನದಿಗಳು ಜಿಲ್ಲೆಯು ಹಚ್ಚ ಹಸುರಿನ ಬೀಡಾಗಿದ್ದು, ಸುಮಾರು 130ಕ್ಕೂ ಹೆಚ್ಚು ಗಿಡಮೂಲಿಕೆ ಹೊಂದಿದೆ.

1–ನಗರಸಭೆ, 2–ಪುರಸಭೆ, 1–ಪಟ್ಟಣ ಪಂಚಾಯತಿ, 98–ಗ್ರಾಮ ಪಂಚಾಯತಿಗಳನ್ನು ಒಳಗೊಂಡಿದ್ದು, 2009–11ರ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಾದ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಜಲಾನಯನ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳು ಹೆಚ್ಚು ರಚನಾತ್ಮಕವಾಗಿ ಅನುಷ್ಠಾನಗೊಂಡು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿದೆ. ಅಂತೆಯೇ ರಾಷ್ಟ್ರೀಯ ತೋಟಗಾರಿಕಾ ಮಿಷನ್, ಸರ್ವಶಿಕ್ಷಣ ಅಭಿಯಾನದಡಿ ವಿಶೇಷ ಸಾಧನೆ ಮಾಡಿ ಜಿಲ್ಲೆಯ ಅಭಿವೃದ್ಧಿ ಪಥದತ್ತ ಸಾಗಿದೆ.

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

| ಕ್ರ. ಸಂ. | ತಾಲ್ಲೂಕು | ಪೂರ್ಣಗೊಂಡ ಕಾಮಗಾರಿ | ಅನುದಾನ ವೆಚ್ಚ |
|---|---|---|---|
| 1. | ಸೋಮವಾರಪೇಟೆ | 1302 | 10.27 ಕೋಟಿ |
| 2. | ವೀರಾಜಪೇಟೆ | 1812 | 11.64 ಕೋಟಿ |
| 3. | ಮಡಿಕೇರಿ | 1781 | 7.90 ಕೋಟಿ |
| | **ಒಟ್ಟು** | **4895** | **29.81 ಕೋಟಿ** |

## ಅನುಷ್ಠಾನವಾದ ಕಾಮಗಾರಿಗಳು

| ಕ್ರ.ಸಂ. | | |
|---|---|---|
| 1. | ಜಲಾನಯನ ಅಭಿವೃದ್ಧಿ ಕಾಮಗಾರಿಗಳು | 357 |
| 2. | ರೈತರಿಗೆ ತೋಟಗಾರಿಕಾ ಕಾಮಗಾರಿ | 1164 |
| 3. | ನೈರ್ಮಲ್ಯ ಚರಂಡಿ ಕಾಮಗಾರಿಗಳು | 1260 |
| 4. | ಅರಣ್ಯೀಕರಣ ಕಾಮಗಾರಿಗಳು | 177 |
| 5. | ನೊಂದಣಿಯಾದ ಕುಟುಂಬ | 55,505 |
| 6. | ಉದ್ಯೋಗ ಚೀಟಿ ವಿತರಣೆಯಾದ ಸಂಖ್ಯೆ | 54,465 |

* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಕೊಡಗು.



## ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು

ಜಿಲ್ಲೆಯ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ರೂ. 125.00 ಲಕ್ಷ ವೆಚ್ಚ ಮಾಡಿ 15 ಕೃಷಿ ಹೊಂಡ ಮತ್ತು 12 ಕಿಂಡಿ ಅಣೆಕಟ್ಟು ನಿರ್ಮಿಸಲಾಗಿದೆ. 1040 ಹೆಕ್ಟೇರ್ ಜಮೀನಿಗೆ ನೀರುಣಿಸಲು ನೀರು ಸಂಗ್ರಹಣಾ ಗುಂಡಿ ನಿರ್ಮಿಸಲಾಗಿದೆ. ರೂ. 55.00 ಲಕ್ಷ ವೆಚ್ಚಮಾಡಿ 94 ನಾಲಾ ಬಂಡ್ಸ್/ಚೆಕ್ ಡ್ಯಾಂ ನಿರ್ಮಿಸಲಾಗಿದೆ.

## ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ ನೀರಾವರಿ ಸೌಲಭ್ಯ

ಜಿಲ್ಲೆಯಲ್ಲಿ 40 ಪರಿಶಿಷ್ಟ ಜಾತಿ ಕುಟುಂಬದವರಿಗೆ ನೀರಾವರಿ ಕೊಳವೆ ಬಾವಿ ನಿರ್ಮಿಸಿ ರೈತರಿಗೆ ನೀರು ಒದಗಿಸಿದೆ. ಅಂತೆಯೇ 48 ಪರಿಶಿಷ್ಟ ವರ್ಗದ ಕುಟುಂಬದವರಿಗೆ ಕೊಳವೆ ಬಾವಿ ತೋಡಿಸಿ ನೀರು ಒದಗಿಸಿದೆ.



## ಸ್ವರ್ಣ ಜಯಂತಿ ಗ್ರಾಮ ಸ್ವರಾಜ್‌ಗಾರ್ ಯೋಜನೆ

2010–11ರ ಸಾಲಿಗೆ 708 ಗುಂಪು ಫಲಾನುಭವಿಗಳಿಗೆ ನೀಡಬೇಕಾದ ಗುರಿ ಇದ್ದು, 1,136 ಫಲಾನುಭವಿಗಳಿಗೆ ಎಸ್.ಜಿ.ಎಸ್.ವೈ. ಯೋಜನೆಯಡಿ ಸಾಲ ಮತ್ತು ಸಹಾಯ ಧನ ಒದಗಿಸಿ, ಆರ್ಥಿಕ ಚಟುವಟಿಕೆ ಕೈಗೊಂಡು ಸ್ವಾವಲಂಬಿಗಳನ್ನಾಗಿಸಲು ಮಹಿಳಾ ಸಬಲೀಕರಣ ಮಾಡಲಾಗಿದೆ.

## ನಿರ್ಮಲ ಗ್ರಾಮ ಪುರಸ್ಕಾರ ಯೋಜನೆ

2009–10ರ ಸಾಲಿನಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನದಡಿ ಜಿಲ್ಲೆಯಲ್ಲಿ 22 ಗ್ರಾಮ ಪಂಚಾಯ್ತಿಗಳು



ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ. ಇದುವರೆವಿಗೂ ಒಟ್ಟು 98 ಗ್ರಾಮ ಪಂಚಾಯ್ತಿಗಳ ಪೈಕಿ 55 ಗ್ರಾಮ ಪಂಚಾಯ್ತಿಗಳಲ್ಲಿ ಶೇ. 100ರಷ್ಟು ನೈರ್ಮಲ್ಯ ಸಾಧನೆ ಮಾಡಿ ಸ್ವಚ್ಛತಾ ಆಂದೋಲನಕ್ಕೆ ಮೆರಗು ನೀಡಿ ಉಳಿದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಶೇ. 100ರಷ್ಟು ವೈಯಕ್ತಿಕ ಶೌಚಾಲಯ ನಿರ್ಮಿಸಲು ಕ್ರಮ ವಹಿಸಲಾಗಿದೆ.

ಒಟ್ಟು 46,277 ಶೌಚಾಲಯಗಳನ್ನು ನಿರ್ಮಿಸಲಾಗಿದೆ. 260 ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 97 ಶಾಲೆಗಳಿಗೆ ಶೌಚಾಲಯ ಒದಗಿಸಲಾಗಿದೆ.



## ಸರ್ವಶಿಕ್ಷಣ ಅಭಿಯಾನ

ಜಿಲ್ಲೆಯಲ್ಲಿ 80 ಮುಖ್ಯ ಶಿಕ್ಷಕರ ಕೊಠಡಿಗಳನ್ನು ನಿರ್ಮಿಸಿ, ರೂ. 296.00 ಲಕ್ಷ ವೆಚ್ಚ ಮಾಡಲಾಗಿದೆ. ಸಂಬಂಧಿಸಿದ ಎಸ್.ಡಿ.ಎಂ.ಸಿ.ಗಳು ನಿರ್ಮಿಸಿರುತ್ತಾರೆ. 96 ಪ್ರತ್ಯೇಕ ಹೆಣ್ಣು ಮಕ್ಕಳ ಶೌಚಾಲಯ ನಿರ್ಮಿಸಿ ರೂ. 24.00 ಲಕ್ಷ ವೆಚ್ಚ ಮಾಡಲಾಗಿದೆ. ಹೆಚ್ಚುವರಿಯಾಗಿ 18 ಕೊಠಡಿಗಳನ್ನು ನಿರ್ಮಿಸಿದೆ.

## ಗ್ರಾಮೀಣ ನೀರು ಸರಬರಾಜು ಯೋಜನೆ

ಜಿಲ್ಲೆಯಲ್ಲಿ ಒಟ್ಟು 22 ನಲ್ಲಿ ನೀರು ಸರಬರಾಜು ಕಾಮಗಾರಿ ಪೂರ್ಣಗೊಳಿಸಲಾಗಿದೆ. 13 ಕಿರು ನೀರು ಸರಬರಾಜು ಯೋಜನೆ ಪೂರ್ಣಗೊಳಿಸಿದೆ. ಜಿಲ್ಲೆಯ ಎಲ್ಲಾ ಜಲಮೂಲ ಪರಿಶೀಲನೆ ನಡೆಸಿ, ನೈಟ್ರೇಟ್ ಕ್ಯಾಲ್ಸಿಯಂ ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.



## ಪರಿಶಿಷ್ಟರಿಗೆ ಸಾಮಾಜಿಕ ನ್ಯಾಯ

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಜಿಲ್ಲೆಯಲ್ಲಿ ಕುಟುಂಬಗಳಿಗೆ

| | | |
|---|---|---|
| 1. | ಕೃಷಿ ಇಲಾಖೆ | 126 ಕುಟುಂಬಗಳಿಗೆ |
| 2. | ತೋಟಗಾರಿಕೆ ಇಲಾಖೆ | 200 ಕುಟುಂಬಗಳಿಗೆ |
| 3. | ಮೀನುಗಾರಿಕೆ ಇಲಾಖೆ | 100 ಕುಟುಂಬಗಳಿಗೆ |
| 4. | ಪಶುಸಂಗೋಪನೆ ಇಲಾಖೆ | 30 ಕುಟುಂಬಗಳಿಗೆ |
| 5. | ಎಸ್.ಜಿ.ಎಸ್.ವೈ. ಯೋಜನೆಯಡಿ | 88 ಕುಟುಂಬಗಳಿಗೆ |

ಸಾಲ ಸೌಲಭ್ಯ ನೀಡಿ ಬಡತನ ರೇಖೆಯಿಂದ ಮೇಲೆತ್ತಲು ಕ್ರಮವಹಿಸಲಾಗಿದೆ.



## ಸುವರ್ಣ ಗ್ರಾಮ ಯೋಜನೆ

2008–09ರ ವರ್ಷದಲ್ಲಿ ಪ್ರಾರಂಭವಾದ ಸುವರ್ಣ ಗ್ರಾಮ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 14 ಗ್ರಾಮಗಳಿಗೆ ಮಂಜೂರಾತಿಯಾಗಿ ಇದುವರೆವಿಗೂ ರೂ. 9.69 ಕೋಟಿ ವೆಚ್ಚಮಾಡಿ 14 ಗ್ರಾಮಗಳಲ್ಲಿ ಒಳಚರಂಡಿ, ರಸ್ತೆ, ಸಮುದಾಯ ಭವನ, ಅಂಗನವಾಡಿ ಕಟ್ಟಡ ನಿರ್ಮಿಸಲಾಗಿದೆ. ಗ್ರಾಮದಲ್ಲಿನ ಯುವಕ–ಯುವತಿಯರಿಗೆ ಆದಾಯ ಉತ್ಪನ್ನ ಚಟುವಟಿಕೆ, ಕಂಪ್ಯೂಟರ್ ತರಬೇತಿ ನೀಡಲಾಗಿದೆ.

ಅಂತೆಯೇ 3ನೇ ಹಂತದ ಸುವರ್ಣ ಗ್ರಾಮ ಯೋಜನೆಯಡಿ 16 ಗ್ರಾಮಗಳು ಮಂಜೂರಾಗಿದ್ದು, ಇದುವರೆವಿಗೂ ರೂ. 439.15 ಲಕ್ಷ ವೆಚ್ಚಮಾಡಿ 16 ಗ್ರಾಮಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

❑

# ಭ್ರಷ್ಟಾಚಾರ ಬೇಡವೇ ಬೇಡ ....

ಗ್ರಾಮೀಣ ಪ್ರದೇಶಗಳ ಬಡ ಜನರ ಆರ್ಥಿಕ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಹಲವಾರು ಅಭಿವೃದ್ಧಿ ಯೋಜನೆಗಳು ರಾಜ್ಯಾದ್ಯಂತ ಅನುಷ್ಠಾನಗೊಂಡು ಮುಂದುವರೆದಿರುವುದು ನಮಗೆಲ್ಲ ತಿಳಿದ ವಿಷಯವೇ ಆಗಿದೆ. ಸರ್ಕಾರ ಇವಕ್ಕಾಗಿ ಯಥೇಚ್ಛ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು ಅನುದಾನವನ್ನು ಸಮರ್ಪಕವಾಗಿ ಹಾಗೂ ಪಾರದರ್ಶಕವಾಗಿ ಸದ್ಬಳಕೆ ಮಾಡಿಕೊಂಡು ಯೋಜನೆಯ ಸದುದ್ದೇಶಗಳನ್ನು ಸಾಫಲ್ಯಗೊಳಿಸುವ ಗುರುತರ ಜವಾಬ್ದಾರಿಯನ್ನು ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ.

ಯೋಜನೆಗಳ ಯಶಸ್ವಿ ಅನುಷ್ಠಾನ ಹಾಗೂ ಸೂಕ್ತ ಮಾರ್ಗದರ್ಶನ ನೀಡಲು ಸಂಬಂಧಿಸಿದಂತೆ ಮಾಹಿತಿಯನ್ನು ಕಾರ್ಯಾಚರಣೆ ಕೈಪಿಡಿ, ಮಾರ್ಗಸೂಚಿ, ಸುತ್ತೋಲೆ ಮುಂತಾದ ರೂಪದಲ್ಲಿ ಕಾಲ ಕಾಲಕ್ಕೆ ನಿರ್ದೇಶನಾಲಯದಿಂದ ಒದಗಿಸಲಾಗುತ್ತಿದೆ. ಒಟ್ಟಾರೆ ಯೋಜನೆಗಳಲ್ಲಿ ಸಮಗ್ರ ಪಾರದರ್ಶಕತೆಯನ್ನು ಕಾಪಾಡಿಕೊಂಡು ಯೋಜನೆಗಳ ಸದುದ್ದೇಶಗಳನ್ನು ಗ್ರಾಮೀಣ ಜನರ ಬದುಕನ್ನು ಹಸನಾಗಿಸುವುದು ಸರ್ಕಾರದ ಪ್ರಮುಖ ಆಶಯವಾಗಿರುತ್ತದೆ.

ಆದರೆ ಯೋಜನೆಗಳ ಅನುಷ್ಠಾನ, ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿರುವ ಕೆಲವೇ ಮಂದಿಯ ಭ್ರಷ್ಟಾಚಾರದ ದೂರುಗಳು ಇತ್ತೀಚಿನ ದಿನ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದು ಅತ್ಯಂತ ವಿಷಾದನೀಯ ಸಂಗತಿ. ದೂರುಗಳು ಸಾಬೀತಾಗಿ ಹಲವರಿಗೆ ಶಿಕ್ಷೆ ಆದದ್ದು ಭ್ರಷ್ಟತೆಗೆ ಹಿಡಿದ ಕೈಗನ್ನಡಿ. ಕೆಲವೇ ಮಂದಿಯ ಭ್ರಷ್ಟಾಚಾರದಿಂದ ಸರ್ಕಾರದ ಯೋಜನೆಗಳ ಪಾವಿತ್ರ್ಯತೆಗೆ ಕಪ್ಪು ಚುಕ್ಕೆಯಾಗುತ್ತಿರುವುದು ವಿಪರ್ಯಾಸವೇ ಸರಿ.



## ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು

1. ಗ್ರಾಮೀಣ ಪ್ರದೇಶದ ಬಡ ಜನರ ಏಳ್ಗೆಗಾಗಿ ಯೋಜನೆಗಳ ಅನುದಾನವನ್ನು ಮೀಸಲಾಗಿಟ್ಟಿರುವುದನ್ನು ತಿಳಿದೂ ಸಹ ಜವಾಬ್ದಾರಿಯುತ ಸ್ಥಾನದಲ್ಲಿರುವ ಕೆಲವು ಮಂದಿ ಭ್ರಷ್ಟಾಚಾರಕ್ಕೆ ಮುಂದಾಗುವುದೇಕೆ?
2. ಬದ್ಧತೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯನ್ನು ಮೈಗೂಡಿಸಿಕೊಳ್ಳುವಲ್ಲಿ ಜವಾಬ್ದಾರಿ ಹೊತ್ತ ಕೆಲವು ಮಂದಿ ಸೋಲುವುದೇಕೆ?
3. ಇಂತಹ ಕೆಲವು ಮಂದಿಯ ಭ್ರಷ್ಟಾಚಾರದಿಂದ ಯೋಜನೆಗಳ ಸದುದ್ದೇಶಗಳು ಹಾಳಾಗುವುದಿಲ್ಲವೇ?
4. ಭ್ರಷ್ಟಾಚಾರದ ವಿರುದ್ಧ ದೇಶಾದ್ಯಂತ ಆಂದೋಲನವಾಗುತ್ತಿರುವ ಇತ್ತೀಚಿನ ದಿನಮಾನಗಳಲ್ಲಿಯೂ ಸಹ ಭ್ರಷ್ಟಾಚಾರದ ವರದಿಗಳು ಮುಂದುವರಿಯುತ್ತಿರುವುದೇಕೆ?
5. ಯಾವುದೇ ಯೋಜನೆಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ತಿಳಿದ ತಕ್ಷಣ ಈ ಬಗ್ಗೆ ಎಚ್ಚೆತ್ತು ಸಂಬಂಧಿಸಿದ ಮೇಲಧಿಕಾರಿಗಳಿಗೆ ಅಥವಾ ಸಚಿವಾಲಯಕ್ಕೆ ಸಮಗ್ರ ದಾಖಲೆಯೊಂದಿಗೆ ದೂರು ನೀಡಬೇಕಾಗಿರುವುದು ಸಾರ್ವಜನಿಕರಾದ ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಲ್ಲವೆ?

– ವಿ. ಶ್ರೀನಿವಾಸ

ನಂ. 6. 13ನೇ ಅಡ್ಡರಸ್ತೆ, ಕೇತಮಾರನಹಳ್ಳಿ, ರಾಜಾಜಿನಗರ,
ಬೆಂಗಳೂರು – 560 010.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/– ಬಹುಮಾನ ನೀಡಲಾಗುವುದು.




# ಮೊಡವೆಗಳು



ಡಾ. ಬಿ. ರಮಣರಾವ್ *

ಪ್ರತಿ ತರುಣ ತರುಣಿಯರ ಪಾಲಿನ ದುಃಸ್ವಪ್ನ, ಮೊಡವೆಗಳು; ಹನ್ನೆರಡರಿಂದ ಇಪ್ಪತ್ತರ ವಯಸ್ಸಿನೊಳಗಿನ ಎಲ್ಲ ಹದಿ ಹರೆಯದವರ ಮುಖದಲ್ಲಿ ಕಾಣಿಸಿಕೊಳ್ಳುವ ಚರ್ಮದ ಉದ್ರೇಕ.

ಇವು ಒತ್ತಡ, ಆತಂಕದ ಪರಿಸ್ಥಿತಿಯಲ್ಲಿ ಅಥವಾ ಊಟೋಪಹಾರಗಳು ಸರಿಯಾಗಿಲ್ಲದಿರುವಾಗ ಕಾಣಿಸಿಕೊಳ್ಳುತ್ತವೆ. ಯುವತಿಯರಿಗೆ ಮುಟ್ಟಿನ ಮುಂಚೆ ಅನುಭವಿಸುವ ಆತಂಕದ ವೇಳೆಯಲ್ಲಿಯೂ ಸಾಮಾನ್ಯ. ಇವುಗಳು ಕಾಣಿಸಿಕೊಂಡಾಗ ವ್ಯಕ್ತಿಯ ಸ್ವಾಭಿಮಾನ ಬಾಹ್ಯ ಸೌಂದರ್ಯಕ್ಕೆ ಸೀಮಿತವಾಗಿದ್ದರಂತೂ ಬಹಳಷ್ಟು ಮುಜುಗರ ಮತ್ತು ಸಂಕೋಚಕ್ಕೆ ಕಾರಣವಾಗುತ್ತವೆ.

ಮೊಡವೆಗಳಿಗೆ ಕಾರಣ ಸ್ಪಷ್ಟವಾಗಿ ಹೇಳಲಿಕ್ಕಾಗುವುದಿಲ್ಲ. ಕೆಲವು ಪರಿಸ್ಥಿತಿಗಳು ಇವಕ್ಕೆ ದಾರಿಮಾಡಿಕೊಡುತ್ತವೆ. ಅನುವಂಶಿಕವಾದ ಎಣ್ಣೆ ಚರ್ಮ, ಹಾರ್ಮೋನುಗಳಲ್ಲಿ ಬದಲಾವಣೆ, ಗರ್ಭನಿರೋಧಕಗಳು, ಸೋಂಕು, ಅಲರ್ಜಿ, ಒತ್ತಡ, ಆತಂಕ, ಮಲಬದ್ಧತೆ ಮತ್ತು ಕರಿದ ಪದಾರ್ಥಗಳ ಅಧಿಕ ಸೇವನೆ ಇತ್ಯಾದಿ.

ಮೊಡವೆಗಳ ಚಿಕಿತ್ಸೆಯಲ್ಲಿ ನೀವು ಸೇವಿಸುವ ಆಹಾರದ ಪಾತ್ರ ಬಹಳ ದೊಡ್ಡದು. ಮಾದಕ ಪೇಯಗಳು, ಎಣ್ಣೆ ಪದಾರ್ಥಗಳು, ಬೆಣ್ಣೆ, ಕ್ರೀಮ್, ಕಾಫಿ, ಚಹ, ಕೋಲಾಗಳು, ಚೀಸ್, ಚಾಕೋಲೇಟ್ ಮತ್ತು ಸಿಹಿ ಪದಾರ್ಥವನ್ನು ವರ್ಜಿಸಿ.

ನಿಮ್ಮ ಆಹಾರದಲ್ಲಿ ಸಾಕಷ್ಟು ಹಣ್ಣುಗಳು, ತರಕಾರಿ ಇಡಿಯಾದ ಕಾಳುಗಳು, ಮೀನು (ಮಿತಿಯಾಗಿ ಮಾಂಸ) ನಿಂಬೆರಸ ಬೆಳ್ಳುಳ್ಳಿಗಳಿರಲಿ. ದಿನವೂ ಒಂದರಿಂದ ಎರಡು ಲೀಟರ್ ಶುದ್ಧ ನೀರಿನ ಸೇವನೆ ಅಗತ್ಯ.

ಮೊಡವೆಗಳಿರುವ ಭಾಗವನ್ನು ಸ್ವಚ್ಛವಾಗಿಡುವುದು ಮುಖ್ಯ. ದಿನವೂ ಸ್ವಚ್ಛತೆ ಮತ್ತು ಮೃದುತ್ವ ಉಳಿಸಿಕೊಳ್ಳುವುದರ ಕಡೆ ಗಮನ ಕೊಡಿ. ಅತಿಯಾಗಿ ಉಜ್ಜುವುದು ಬೇಕಿಲ್ಲ. ಚಿವುಟುವುದು, ಒತ್ತುವುದು, ಕೆರೆಯುವುದು ಅಥವಾ ಬಲವಂತವಾಗಿ ಒಡೆಯಲು ಪ್ರಯತ್ನಿಸುವುದರಿಂದ ಮುಖದಲ್ಲಿ ಕಲೆಗಳಾಗುತ್ತವೆ. ಚರ್ಮದಲ್ಲಿ ಸ್ವಲ್ಪ ಪ್ರಮಾಣದ ಎಣ್ಣೆಯಿರುವುದು ಅಗತ್ಯ. ಇದರಿಂದ ಚರ್ಮದ ರಕ್ಷಣೆಯಾಗುವುದಲ್ಲದೆ, ನಯವಾಗಿ ಉಳಿಯುತ್ತದೆ.

ಮೊಡವೆಗಳಿರುವ ಭಾಗವನ್ನು ಸ್ವಚ್ಛವಾಗಿಡುವುದು ಮುಖ್ಯ. ದಿನವೂ ಸ್ವಚ್ಛತೆ ಮತ್ತು ಮೃದುತ್ವ ಉಳಿಸಿಕೊಳ್ಳುವುದರ ಕಡೆ ಗಮನ ಕೊಡಿ.

ಯಾವುದಾದರೂ ಸಂತೋಷದಾಯಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ನಿಮ್ಮ ಆತಂಕವನ್ನು ನಿವಾರಿಸಿಕೊಳ್ಳಿ.

ಝಿಂಕ್ ಮತ್ತು ಬಿ ಕಾಂಪ್ಲೆಕ್ಸ್ ಮಾತ್ರೆಗಳು ಮತ್ತು ಪ್ರಿಮ್‌ರೋಸ್ ಎಣ್ಣೆಯಂಥ ಪೋಷಕಗಳ ಸೇವನೆ ಹಾರ್ಮೋನುಗಳಲ್ಲಿ ಸ್ಥಿಮಿತ ಮತ್ತು ಚರ್ಮ ಗುಣ ಹೊಂದಲು ಸಹಾಯಕಾರಿ. ಈ ಬೊಕ್ಕೆಗಳು ಮಾಯವಾಗಲು ಮನಸ್ಸು ಮತ್ತು ದೇಹದ ಒಳ ಹೊರಗೆ ಗಮನ ಅಗತ್ಯ.

❑

* ಕನ್ಸಲ್ಟಿಂಗ್ ಫಿಸಿಷಿಯನ್ ಅಂಡ್ ಕಾರ್ಡಿಯಾಲಾಜಿಸ್ಟ್, ನಂ. 94 / ಹೆಚ್. 9ನೇ ಕ್ರಾಸ್, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು – 80.

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 90 : ತಾಪಸ : 2011

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ : 21–12–2011

## ಸುತ್ತೋಲೆ

**ವಿಷಯ** : ಸರ್ಕಾರದ ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಬಳಸುವ ಬಗ್ಗೆ.

**ಉಲ್ಲೇಖ** :
1) ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ, 1963
2) ಸರ್ಕಾರಿ ಸುತ್ತೋಲೆ ಸಂಖ್ಯೆ : ಸಿಪಿಎಆರ್ 29 ಕೆಟಿಎಲ್ 2000 ದಿನಾಂಕ : 11–04–2000
3) ಸರ್ಕಾರಿ ಸುತ್ತೋಲೆ ಸಂಖ್ಯೆ: ಸಂಕಇ : 39 : ಕೆಓಎಲ್ : 2002 ದಿನಾಂಕ : 13–06–2002
4) ಸಾರಿಇ 318 ಸಾಇಪ 2009 ದಿನಾಂಕ : 07–01–2009.

* * *

ಕನ್ನಡವು ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿರತಕ್ಕದ್ದೆಂದು ಉಲ್ಲೇಖ(1) ರ ಅಧಿನಿಯಮದಲ್ಲಿ ತಿಳಿಸಲಾಗಿದೆ.

ಉಲ್ಲೇಖ(2)ರಲ್ಲಿ ರಾಜ್ಯ ಸರ್ಕಾರದ ಎಲ್ಲಾ ಅಧಿಕಾರಿಗಳು/ನೌಕರರು ಮತ್ತು ರಾಜ್ಯ ಸರ್ಕಾರದಿಂದ ರಚಿತವಾದ ಪ್ರಾಧಿಕಾರಿಗಳು, ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು, ಸರ್ಕಾರದಿಂದ ಅನುದಾನ ಅಥವಾ ಆರ್ಥಿಕ ನೆರವು ಪಡೆಯುತ್ತಿರುವ ಎಲ್ಲಾ ಸಂಘ ಸಂಸ್ಥೆಗಳು ಕನ್ನಡ ಆಡಳಿತ ಭಾಷೆಯಾಗಿ ಕಟ್ಟು ನಿಟ್ಟಾಗಿ ಜಾರಿಗೆ ತರಲು ತಿಳಿಸಿದೆ. ಉಲ್ಲೇಖ(3) ರಲ್ಲಿ ಆಡಳಿತದಲ್ಲಿ ಕನ್ನಡ ಬಳಕೆ ಮಾಡದೇ ಇರುವ ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಜಾರಿಗೊಳಿಸಲು ತಿಳಿಸಲಾಗಿದೆ. ಹಾಗೂ ಉಲ್ಲೇಖ(4) ರಲ್ಲಿ ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸೂಚಿಸಲಾಗಿದೆ. ಇಷ್ಟಾದರೂ ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಹಲವಾರು ಅಡೆ ತಡೆಗಳನ್ನು ಎದುರಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲಾಗಿದೆ. ರಾಜ್ಯದ ಶ್ರೀ ಸಾಮಾನ್ಯನು ತನ್ನ ದೈನಂದಿನ ವ್ಯವಹಾರವನ್ನು ಮಾತೃಭಾಷೆಯಲ್ಲಿ ವ್ಯವಹರಿಸಲು ಅನುಕೂಲವಾಗುವಂತೆ ರಾಜ್ಯದ ಸಚಿವಾಲಯದಿಂದ ಗ್ರಾಮ ಮಟ್ಟದ ಗ್ರಾಮ ಪಂಚಾಯಿತಿ ವರೆಗೆ ಕನ್ನಡವನ್ನು ಆಡಳಿತದಲ್ಲಿ ವ್ಯವಹಾರಿಕ ಭಾಷೆಯಾಗಿ ಬಳಕೆ ಮಾಡಬೇಕಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಮೇಲಿನ ಹಲವಾರು ಸುತ್ತೋಲೆ/ಆದೇಶಗಳನ್ನು ಹೊರಡಿಸುವುದರ ಜೊತೆಗೆ ಕನ್ನಡವನ್ನು ಆಡಳಿತದಲ್ಲಿ ಪರಣಾಮಕಾರಿಯಾಗಿ ಬಳಕೆಗೆ ತರಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆ.

ಪ್ರಸ್ತುತ ಸಚಿವಾಲಯ ಮಟ್ಟದಿಂದ ಹಿಡಿದು ಗ್ರಾಮ ಪಂಚಾಯತಿವರೆಗೆ ಕನ್ನಡವನ್ನು ಬಳಸಲಾಗುತ್ತಿದೆ. ಇದರಿಂದಾಗಿ ರಾಜ್ಯದ ಮೂಲೆ ಮೂಲೆಗಳಲ್ಲಿರುವ ಜನತೆಗೆ ತಮ್ಮ ಕೋರಿಕೆ, ಬೇಡಿಕೆಗಳನ್ನು ಸರ್ಕಾರಕ್ಕೆ ತಲುಪಿಸಲು ಮತ್ತು ಸರ್ಕಾರ ಈ ಸಂಬಂಧ ಕಲ್ಪಿಸುವ ಸೌಲಭ್ಯಗಳನ್ನು ಮಾತೃ ಭಾಷೆಯಾದ ಕನ್ನಡದಲ್ಲಿ ಪಡೆಯಲು ಅವಕಾಶವಾಗಿದೆ. ಆದರೆ, ರಾಜ್ಯದ ಕೆಲವೊಂದು ಗಡಿ ಭಾಗಗಳಲ್ಲಿನ ಸ್ಥಳೀಯ ಸಂಸ್ಥೆಗಳಲ್ಲಿ (ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್) ಕನ್ನಡವನ್ನು ದಿನನಿತ್ಯದ ವ್ಯವಹಾರ ಭಾಷೆಯನ್ನಾಗಿ ಬಳಸುವಲ್ಲಿ ತಾರತಮ್ಯ ತೋರುತ್ತಿರುವುದು ಕಂಡು ಬರುತ್ತಿದೆ. ಈ ಅಸಡ್ಡೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳು ತಮ್ಮ ದಿನನಿತ್ಯದ ವ್ಯವಹಾರವನ್ನು ಆಡಳಿತ ಭಾಷೆಯಾದ ಕನ್ನಡದಲ್ಲಿಯೇ ಕಡ್ಡಾಯವಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ವಿವಿಧ ಹಂತದ ಪಂಚಾಯತ್ ರಾಜ್ ಸಂಸ್ಥೆಯ ಚುನಾಯಿತ ಪ್ರತಿನಿಧಿಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಜವಾಬ್ದಾರರನ್ನಾಗಿ ಮಾಡಿ, ಅಂತಹವರ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ : 250 : ಗ್ರಾಪಂಅ : 2011

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ : 22–09–2011

## ಸುತ್ತೋಲೆ

**ವಿಷಯ** : ಗ್ರಾಮ ಸಭೆಗಳನ್ನು ವಿಡಿಯೋ ಚಿತ್ರೀಕರಣ ಮಾಡುವ ಬಗ್ಗೆ.

**ಉಲ್ಲೇಖ** : 1. ಸರ್ಕಾರದ ಸುತ್ತೋಲೆ ಸಂಖ್ಯೆ : ಆರ್.ಡಿ.ಪಿ. 220 ಜಿಪಿಎ 2001, ದಿನಾಂಕ : 10–10–2001.

2. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 474 ಗ್ರಾಪಂಅ 2005 ದಿನಾಂಕ : 09–11–2005

* * *

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 3 ಮತ್ತು 3–ಎರಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ 6 ತಿಂಗಳಿಗೆ ಒಂದು ಬಾರಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ನಡೆಸಲು ನಿರ್ದೇಶಿಸಲಾಗಿದೆ. ಮತ್ತು ಸದರಿ ಸಭೆಗಳಲ್ಲಿ ಚರ್ಚಿಸಬೇಕಾದ ಪ್ರಕಾರ್ಯಗಳನ್ನು ವಿವರಿಸಲಾಗಿದೆ. ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳನ್ನು ನಡೆಸುವುದಕ್ಕೆ ಸ್ಪಷ್ಟವಾದ ಮಾರ್ಗದರ್ಶಿ ಸೂತ್ರಗಳನ್ನು ಸಂಖ್ಯೆ : ಆರ್.ಡಿ.ಪಿ. 220 ಜಿಪಿಎ 2001, ದಿನಾಂಕ : 10–10–2001 ರಂದು ಸುತ್ತೋಲೆ ಹೊರಡಿಸಿ ಸೂಚಿಸಲಾಗಿದೆ. ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್ ಸಭೆ ಮತ್ತು ಗ್ರಾಮ ಸಭೆ) ನಿಯಮಗಳನ್ನು, 2004ರಲ್ಲಿ ಸಭೆಯನ್ನು ನಡೆಸುವ ಕುರಿತಂತೆ ವಿವರವಾಗಿ ನಿರ್ದೇಶನಗಳನ್ನು ನೀಡಿದೆ.

ಗ್ರಾಮಗಳ ಅಭಿವೃದ್ಧಿ, ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮುಂತಾದ ಎಲ್ಲಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಸಭೆಗಳನ್ನು ನಡೆಸುವುದು ಕಡ್ಡಾಯಗೊಳಿಸಲಾಗಿದೆ. ಆದರೂ ಸಹ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳು ಈ ಮೇಲೆ ತಿಳಿಸಿರುವ ನಿಯಮ ಹಾಗೂ ಮಾರ್ಗದರ್ಶನಗಳನ್ನು ಸಮರ್ಪಕವಾಗಿ ಪಾಲಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳು ನಡೆಯದಿರುವುದು, ನಡೆದರೂ ಕೂಡಾ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಅಸಮರ್ಪಕ ಹಾಜರಿ ಅಥವಾ ಗೈರು ಹಾಜರಿಯಲ್ಲಿ ನಡೆಯುತ್ತಿದ್ದು, ಸರಿಯಾದ ರೀತಿಯಲ್ಲಿ ನಡೆಯದೆ ಇರುವುದು ಮುಂತಾದ ನ್ಯೂನತೆಗಳು ಕಂಡುಬರುತ್ತಿವೆ.

ಗ್ರಾಮ ಸಭೆಗಳನ್ನು ಸಮರ್ಪಕವಾದ ರೀತಿಯಲ್ಲಿ ನಡೆಸದಿರುವ ಬಗ್ಗೆ ದಿನಾಂಕ : 21–09–2011 ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಸಭೆಯಲ್ಲಿ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ಸಮಗ್ರ ಹಾಗೂ ಪರಿಣಾಮಕಾರಿ ಅಭಿವೃದ್ಧಿಯನ್ನು ನೆರವೇರಿಸಲು ಗ್ರಾಮ ಸಭೆಗಳು ಸಮಂಜಸವಾಗಿ ನಡೆಯುವುದು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳು ಸರಿಯಾಗಿ ನಡೆಯುತ್ತಿವೆ ಎಂಬುದನ್ನು ದೃಢಪಡಿಸಲು ಗ್ರಾಮ ಸಭೆಗಳ ದೃಶ್ಯ ಚಿತ್ರೀಕರಣ (Video Recording) ಮಾಡುವುದು ಅವಶ್ಯಕವಾಗಿದ್ದು, ಈಗಾಗಲೇ ಸರ್ಕಾರವು ದಿನಾಂಕ : 9–11–2005ರ ಸುತ್ತೋಲೆಯಲ್ಲಿ ಗ್ರಾಮ ಸಭೆಯ ಕಲಾಪಗಳನ್ನು ವಿಡಿಯೋ ಚಿತ್ರೀಕರಿಸುವ ಬಗ್ಗೆ ಸೂಚಿಸಲಾಗಿದೆ.

ಆದರೆ ಸದರಿ ಸುತ್ತೋಲೆಯಲ್ಲಿ ಸೂಚನೆಯನ್ನು ಹಲವಾರು ಗ್ರಾಮ ಪಂಚಾಯತಿಗಳು ಸರಿಯಾಗಿ ಪಾಲಿಸದಿರುವುದು ಮತ್ತು ಅದರಲ್ಲಿನ ನಿಬಂಧನೆಗಳನ್ನು ಅನುಸರಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳ ಕಲಾಪವನ್ನು ವಿಡಿಯೋ ಚಿತ್ರೀಕರಿಸುವುದನ್ನು ಕಡ್ಡಾಯಗೊಳಿಸಿ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

1) ಎಲ್ಲಾ ಗ್ರಾಮ ಸಭೆಗಳ ಕಲಾಪವನ್ನು ವಿಡಿಯೋ ಚಿತ್ರೀಕರಿಸಿ ಅದನ್ನು ಸಿ.ಡಿ.ಗಳಲ್ಲಿ ಮುದ್ರಿಸಿ ಅವುಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಲ್ಲಿ ಸುರಕ್ಷಿತವಾಗಿ ಹಾಗೂ ಕ್ರಮಬದ್ಧವಾಗಿ ಇಡುವುದು.

2) ವಿಡಿಯೋ ಚಿತ್ರೀಕರಣವನ್ನು ಯಾವುದೇ ಸಂದರ್ಭದಲ್ಲಾಗಲೀ ಮುಂದೂಡತಕ್ಕದ್ದಲ್ಲ.

3) ಗ್ರಾಮ ಸಭೆಯ ಸಂಪೂರ್ಣ ಕಲಾಪವನ್ನು ಚಿತ್ರೀಕರಿಸತಕ್ಕದ್ದು.

4) ಕೆಲ ಭಾಗವನ್ನು ಚಿತ್ರೀಕರಿಸಿ ಸಂದರ್ಭೋಚಿತವಲ್ಲವೆಂಬ ಕಾರಣ ನೀಡಿ ಉಳಿದ ಭಾಗವನ್ನು ಚಿತ್ರೀಕರಣ ಮಾಡದೆ ಇರತಕ್ಕದಲ್ಲ.

5) ಸದರಿ ಚಿತ್ರೀಕರಣದಲ್ಲಿ ಗ್ರಾಮ ಸಭೆಯು ಜರುಗಿದ ದಿನಾಂಕ, ತಿಂಗಳು ಮತ್ತು ವರ್ಷದ ಮಾಹಿತಿ ದಾಖಲಾಗಿರತಕ್ಕದ್ದು.

6) ಸರ್ಕಾರವು ಅಪೇಕ್ಷಿಸಿದಾಗ ಚಿತ್ರೀಕರಣದ ಸಿ.ಡಿ.ಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

7) ಗ್ರಾಮ ಸಭೆ ನಡೆದ ಒಂದು ತಿಂಗಳೊಳಗಾಗಿ ಈ ಚಿತ್ರೀಕರಣವನ್ನು ಗ್ರಾಮ ಪಂಚಾಯಿತಿಯ ವೆಬ್‌ಸೈಟ್/ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸತಕ್ಕದ್ದು.

8) ವಿಡಿಯೋ ಚಿತ್ರೀಕರಣದ ಬಾಬ್ತಿಗಾಗಿ ಒಂದು ಗ್ರಾಮ ಸಭೆಗೆ ಗರಿಷ್ಟ ₹. 2500/– ಗಳ ಮಿತಿಗೊಳಪಟ್ಟು ವೆಚ್ಚ ಭರಿಸತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿ ನಿಧಿಯಿಂದ ಭರಿಸತಕ್ಕದ್ದು.

9) ಸಾರ್ವಜನಿಕರು ಈ ಸಿ.ಡಿ. ಮುದ್ರಣವನ್ನು ಅಪೇಕ್ಷಿಸಿದರೆ ಪ್ರತಿ ಸಿ.ಡಿ.ಗೆ ₹. 100/– ರಂತೆ ಬೆಲೆ ನಿಗದಿಪಡಿಸಿ ಒದಗಿಸತಕ್ಕದ್ದು.

ಜಿಲ್ಲಾ ಪಂಚಾಯತ್ ವತಿಯಿಂದ ಪ್ರತಿಯೊಂದು ಗ್ರಾಮಸಭೆಗೆ ಜಿಲ್ಲಾ ಪಂಚಾಯಿತಿ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಒಳಗೊಂಡಂತೆ), ತಾಲ್ಲೂಕು ಪಂಚಾಯಿತಿ ಮಟ್ಟದ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಗ್ರಾಮ ಸಭೆಗಳು ಸುಸೂತ್ರವಾಗಿ ನಡೆಸಲು ಕ್ರಮ ವಹಿಸತಕ್ಕದ್ದು.

ಈ ಸುತ್ತೋಲೆಯಲ್ಲಿನ ಸೂಚನೆಯಂತೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳೇ ನೇರವಾಗಿ ಹೊಣೆಗಾರರಾಗುತ್ತಾರೆಂದು ತಿಳಿಸಿದೆ.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 322 ಗ್ರಾಪಂಅ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು. ದಿನಾಂಕ: 24–12–2011

## ಸುತ್ತೋಲೆ

**ವಿಷಯ** : ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮ–2012 ನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ** : ನಿರ್ದೇಶಕರು, ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ/ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇವರ ಪತ್ರ ಸಂಖ್ಯೆ ಸಿ11:ಕೆಎಸ್‌ಎಲ್ ಎಂಎ/ಸಿಆರ್–27:2011–12 ದಿನಾಂಕ: 24.11.2011.

***

ಸಾಕ್ಷರ ಭಾರತ್ ಇದೊಂದು ಮಹತ್ವಾಕಾಂಕ್ಷಿ ಕಾರ್ಯಕ್ರಮ. ಇದು ಸಮಗ್ರ ಮತ್ತು ವ್ಯಾಪಕ ಕಾರ್ಯಕ್ರಮವಾಗಿದೆ. ಮಹಿಳಾ ಸಾಕ್ಷರತಾ ಪ್ರಮಾಣ ಶೇಕಡ 50 ಕ್ಕಿಂತ ಕಡಿಮೆ ಇರುವ ರಾಜ್ಯದ 20 ಜಿಲ್ಲೆಗಳ 117 ತಾಲ್ಲೂಕು, 3788 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಗ್ರಾಮ, ಉಪ ಗ್ರಾಮಗಳ 15 ವರ್ಷಕ್ಕಿಂತ ಮೇಲ್ಪಟ್ಟ 40 ಲಕ್ಷ ಅನಕ್ಷರಸ್ಥರನ್ನು ಕಲಿಕೆಗೆ ಒಳಪಡಿಸಿ ಸಾಕ್ಷರಸ್ಥರನ್ನಾಗಿಸುವುದಾಗಿದೆ.

ಸಾಕ್ಷರ ಭಾರತ್ ಕಾರ್ಯಕ್ರಮ–2012 ನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸುವಲ್ಲಿ ಗ್ರಾಮ ಪಂಚಾಯಿತಿಯ ಪಾತ್ರ ಪ್ರಮುಖವಾಗಿರುತ್ತದೆ. ಸಾಕ್ಷರತಾ ಭಾರತ್ ಕಾರ್ಯಕ್ರಮ–2012 ನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೆಳ ಕಾಣಿಸಿದಂತೆ ಕ್ರಮ ವಹಿಸಲು ಸೂಚಿಸಿದೆ.

1. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಾಸಿಕ ಸಭೆಗಳಲ್ಲಿ ಕಲಿಕಾ ಪ್ರಗತಿ ಪರಿಶೀಲನೆ ಮಾಡುವುದು.
2. ಲೋಕ ಶಿಕ್ಷಣ ಕೇಂದ್ರಗಳಿಗೆ ಪ್ರತ್ಯೇಕ ಕಟ್ಟಡದ ವ್ಯವಸ್ಥೆ ಮಾಡುವುದು.
3. ಪರಿವೀಕ್ಷಣೆಗಾಗಿ ಜಿಲ್ಲಾ, ತಾಲ್ಲೂಕು ಮತ್ತುಗ್ರಾಮ ಪಂಚಾಯಿತಿ ನೋಡಲ್ ಅಧಿಕಾರಿಗಳ ನೇಮಕ ಮಾಡುವುದು.
4. ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಸಿಬ್ಬಂದಿಗಳು ಕಲಿಕಾ ಕೇಂದ್ರಗಳ ಪರಿವೀಕ್ಷಣೆ ಮಾಡುವುದು.
5. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಅನಕ್ಷರಸ್ಥ ಸದಸ್ಯರ ಕಲಿಕೆಗೆ ಕಾರ್ಯಕ್ರಮ ಆಯೋಜಿಸುವುದು.
6. ಇಲಾಖಾ ಯೋಜನೆಗಳ ಫಲಾನುಭವಿಗಳ ಆಯ್ಕೆಯಲ್ಲಿ ಕಲಿಕಾರ್ಥಿ ಮತ್ತು ಸ್ವಯಂ ಸೇವಕರುಗಳಿಗೆ ಆದ್ಯತೆ ನೀಡುವುದು.
7. ಸಾಕ್ಷರ ಭಾರತ್ ಕಾರ್ಯಕ್ರಮದ ಕಲಿಕಾ ವಾತಾವರಣ ನಿರ್ಮಾಣಕ್ಕೆ ಪೂರಕವಾಗಿ ಇಲಾಖಾ ಯೋಜನೆಗಳಲ್ಲಿರುವ ಪ್ರಚಾರ ಕಾರ್ಯಕ್ರಮಗಳನ್ನು ನಡೆಸುವುದು.
8. ಇದಕ್ಕೆ ತಗಲುವ ವೆಚ್ಚವನ್ನು ಸಾಧ್ಯವಾದಷ್ಟು ₹ 10,000/– ದಿಂದ ₹ 25,000/– ರವರೆಗೆ ಸ್ವಂತ ಮೂಲ ಆದಾಯದಿಂದ ಭರಿಸತಕ್ಕದು (ವಾರ್ಷಿಕ ಮಾತ್ರ).

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂ. ಗ್ರಾಅಪ 115 ಗ್ರಾಪಸ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 28.12.2011

## ಸುತ್ತೋಲೆ

**ವಿಷಯ :** 2011–12ನೇ ಸಾಲಿನಲ್ಲಿ 13ನೇ ಆರ್ಥಿಕ ಆಯೋಗದ ಅನುದಾನವನ್ನು ಪಡೆಯಲು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ.

* * *

13ನೇ ಆರ್ಥಿಕ ಆಯೋಗದ ಶಿಫಾರಸ್ಸಿನನ್ವಯ 5 ವರ್ಷಗಳ ಅವಧಿಗೆ ಅಂದರೆ 2010–11ನೇ ಸಾಲಿನಿಂದ 2014–15ನೇ ಸಾಲಿನವರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಅನುದಾನವು ವಾರ್ಷಿಕವಾಗಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ರಾಜ್ಯದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳಿಗೆ 10:20:70 ಅನುಪಾತದಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗು ಗ್ರಾಮ ಪಂಚಾಯತಿಗಳಿಗೆ ಅನುಕ್ರಮವಾಗಿ ಬಿಡುಗಡೆ ಮಾಡಲಾಗುತ್ತಿದೆ. ಈ ಅನುದಾನವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಹುತೇಕ ಅನಿಬಂಧಿತ ಅನುದಾನವಾಗಿರುತ್ತದೆ. ಈ ಅನುದಾನವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಬಹುದಾಗಿದೆ. ಈ ಅನುದಾನವನ್ನು ಎರಡು ವಿಭಾಗಗಳಾಗಿ ಬಿಡುಗಡೆ ಮಾಡಲಾಗುತ್ತಿದೆ.

(1) ಸಾಮಾನ್ಯ ಮೂಲ ಅನುದಾನ (General Basic Grant).

(2) ಸಾಮಾನ್ಯ ನಿರ್ವಹಣಾ ಅನುದಾನ (General Performance Grant).

2010–11ನೇ ಸಾಲಿನಲ್ಲಿ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡಲು ನಿಗದಿಪಡಿಸಿದ್ದ ಮಾನದಂಡದಲ್ಲಿಯೇ ವಾರ್ಷಿಕ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2011–12ನೇ ಸಾಲಿಗೆ ಈ ಅನುದಾನವನ್ನು ಬಿಡುಗಡೆ ಮಾಡಲು ಕನಿಷ್ಠ ಮಾನದಂಡಗಳನ್ನು ನಿಗದಿಪಡಿಸಬೇಕೆಂದು ಕೇಂದ್ರ ಹಣಕಾಸು ಆಯೋಗ ಹಾಗು ರಾಜ್ಯ ಆರ್ಥಿಕ ಇಲಾಖೆ ಸೂಚಿಸಿದ್ದರ ಅನ್ವಯ ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಹಾಗು ಗ್ರಾಮ ಪಂಚಾಯತಿಗಳಿಗೆ ಪಂಚಾಯತ್ ರಾಜ್ ಅಧಿನಿಯಮದ ಅನುಷ್ಠಾನ ಹಾಗು ಉತ್ತರದಾಯಿತ್ವವನ್ನು ತರುವ ಉದ್ದೇಶದಿಂದ 2011–12ನೇ ಸಾಲಿನಲ್ಲಿ ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಬಿಡುಗಡೆ ಮಾಡಲು ಈ ಕೆಳಕಂಡಂತೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಈ ಮಾನದಂಡಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸೂಚಿಸಿದೆ.

### ಜಿಲ್ಲಾ ಪಂಚಾಯತ್:–

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 180 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ 2 ತಿಂಗಳಿಗೆ ಒಂದು ಬಾರಿ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 6 ಸಭೆಗಳು).
2. ಹಿಂದಿನ ಆರ್ಥಿಕ ವರ್ಷದ ಕ್ರೋಢೀಕೃತ ಜಿಲ್ಲಾ ಆಡಳಿತ ವರದಿಯನ್ನು ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 300ರ ಪ್ರಕಾರ ಕಾಲಮಿತಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿರಬೇಕು.
3. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 262ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
4. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 310ರ ಪ್ರಕಾರ ಜಿಲ್ಲಾ ಯೋಜನಾ ಸಮಿತಿಗಳು ರಚನೆಯಾಗಿರಬೇಕು ಹಾಗು ಹಿಂದಿನ ವರ್ಷದಲ್ಲಿ ಕನಿಷ್ಠ 3 ಸಭೆಯಾದರೂ ನಡೆಸಿರಬೇಕು (4 ಸಭೆ ನಡೆಸಲು ಅವಕಾಶವಿದೆ).
5. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 256ರ ಪ್ರಕಾರ ಜಿಲ್ಲಾ ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.
6. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.

**ತಾಲ್ಲೂಕು ಪಂಚಾಯತಿ:–**

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 141 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ 2 ತಿಂಗಳಿಗೆ ಒಂದು ಬಾರಿ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 6 ಸಭೆಗಳು).
2. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 253ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
3. ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿಗಳ ಜಮಾಬಂಧಿಯನ್ನು ಹಿಂದಿನ ಆರ್ಥಿಕ ವರ್ಷದಲ್ಲಿ ಆಗಸ್ಟ್ 15 ರಿಂದ ಸೆಪ್ಟೆಂಬರ್ 15 ರವರೆಗೆ ಪೂರ್ಣಗೊಳಿಸಿರಬೇಕು.
4. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 247ರ ಪ್ರಕಾರ ತಾಲ್ಲೂಕು ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.
5. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.
6. ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಕಳೆದ ಆರ್ಥಿಕ ವರ್ಷದ ಕೂಲಿಕಾರರ ಆಯವ್ಯಯವನ್ನು ತಯಾರಿಸಿರಬೇಕು.

**ಗ್ರಾಮ ಪಂಚಾಯತಿ:–**

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 52 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ ತಿಂಗಳಿಗೊಮ್ಮೆ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 12 ಸಭೆಗಳು).
2. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 246ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
3. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3ಎ ಪ್ರಕಾರ ಹಿಂದಿನ ವರ್ಷದಲ್ಲಿ ಗ್ರಾಮ ಪಂಚಾಯತಿಗಳು ಗ್ರಾಮ ಸಭೆಗಳನ್ನು ನಡೆಸಿರಬೇಕು.
4. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.
5. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 241ರ ಪ್ರಕಾರ ಗ್ರಾಮ ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.
6. ಹಿಂದಿನ ವರ್ಷದ ಒಟ್ಟು ಕಂದಾಯ ಬೇಡಿಕೆಯಲ್ಲಿ ಕನಿಷ್ಠ 40 ರಷ್ಟು ವಸೂಲಾತಿ ಮಾಡಿರಬೇಕು (ಪ್ರತಿ ವರ್ಷ ಶೇ.5 ರಷ್ಟು ಹೆಚ್ಚುವರಿಯಾಗಿ ವಸೂಲಾತಿ ಆಗಿರಬೇಕು ಅಂದರೆ 45%, 50%, 55%, 60%, 65%, 70%, 75%).

13ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಮಾಡಲು ಮೂಲಭೂತವಾಗಿ ಈ ಮಾನದಂಡಗಳನ್ನು ಅಳವಡಿಸಿಕೊಂಡು ಅನುದಾನ ಬಿಡುಗಡೆ ಮಾಡಲಾಗುವುದು. ಈ ಮಾನದಂಡಗಳಲ್ಲಿ ಯಾವುದೇ ಅಂಶಗಳನ್ನು ಅನುಷ್ಠಾನಗೊಳಿಸಲು ವಿಫಲರಾದಲ್ಲಿ ಅಂತಹ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಡ್ಡಾಯವಾಗಿ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

2012–13ನೇ ಸಾಲಿನಿಂದ ಸಾಮಾನ್ಯ ಮೂಲ ಅನುದಾನವನ್ನು (General Basic Grant) ಹಾಗು ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಬಿಡುಗಡೆ ಮಾಡಲು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಈ ಮಾನದಂಡಗಳನ್ನು ಕಡ್ಡಾಯಗೊಳಿಸಲಾಗಿದೆ. ಈ ಷರತ್ತುಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಮು.ಕಾ.ನಿ.ಅಧಿಕಾರಿಗಳು ಪ್ರತಿ ವರ್ಷ ಸೆಪ್ಟೆಂಬರ್ ಅಂತ್ಯದೊಳಗೆ ದೃಢೀಕರಣವನ್ನು ಸರ್ಕಾರಕ್ಕೆ ಸಲ್ಲಿಸಬೇಕು.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/335/ಗ್ರಾಪಂಕಾ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 28–11–2011

## ಸುತ್ತೋಲೆ

**ವಿಷಯ** : ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡುವ ಬಗ್ಗೆ.

* * *

ರಾಜ್ಯದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲ್ಲೂಕು ಪಂಚಾಯತಿಗಳು ಹಾಗು 5627 ಗ್ರಾಮ ಪಂಚಾಯತಿಗಳು ಅಸ್ತಿತ್ವದಲ್ಲಿರುತ್ತವೆ. ಗ್ರಾಮ ಪಂಚಾಯತಿಗಳಲ್ಲಿ 805 ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಖಾಲಿ ಇರುತ್ತವೆ. ಈ ಖಾಲಿ ಹುದ್ದೆಗಳಿಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆಯಡಿಯಲ್ಲಿ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಿಗೆ ಒಬ್ಬರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1ಗೆ ಪ್ರಭಾರದಲ್ಲಿ ಇಡಲಾಗಿದೆ. ಆದರೆ, ಪ್ರತಿಯೊಂದು ಗ್ರಾಮ ಪಂಚಾಯತಿಗೆ ಪ್ರತ್ಯೇಕವಾಗಿ ಒಬ್ಬರಂತೆ (ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–1/ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್–2) ಸ್ವತಂತ್ರ ಜವಾಬ್ದಾರಿ ಹಂಚಿಕೆ ಮಾಡದೇ ಹೋದರೆ ಸಾರ್ವಜನಿಕರಿಗೆ ಹಾಗು ಜನಪ್ರತಿನಿಧಿಗಳಿಗೆ ಆಡಳಿತ ಹಾಗು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅನಾನುಕೂಲತೆ ಆಗುವ ಸಂಭವವಿದ್ದು ನಿಗದಿತ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಧಕ್ಕೆ ಆಗುತ್ತದೆ. ಹಲವಾರು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳಿಗೆ ಪ್ರಭಾರದಲ್ಲಿರಿಸುತ್ತಿರುವುದರಿಂದ ಈ ಅಧಿಕಾರಿಗಳು ಯಾವುದೇ ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕರಿಗೆ ಹಾಗು ಜನಪ್ರತಿನಿಧಿಗಳಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ದೊರಕುತ್ತಿಲ್ಲ. ಆದುದರಿಂದ, ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ ಒಬ್ಬ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಸ್ವತಂತ್ರ ಪ್ರಭಾರದಲ್ಲಿ ಇಡಲು ನಿಯಮಗಳಡಿ ಕ್ರಮ ತೆಗೆದುಕೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಜರುಗಿಸುವುದು (ಒಂದು ಗ್ರಾಮ ಪಂಚಾಯತಿಗೆ ಒಬ್ಬ ಸರ್ಕಾರಿ ಅಧಿಕಾರಿ ಕಡ್ಡಾಯವಾಗಿ ಜವಾಬ್ದಾರಿ ಇರುವಂತೆ ವ್ಯವಸ್ಥೆ ಮಾಡುವುದು. ಹಾಲಿ ಕರ್ತವ್ಯ ನಿರ್ವಹಿಸುತ್ತಿರುವಲ್ಲಿಯೇ ಮೇಲಿನಂತೆ ವ್ಯವಸ್ಥೆ ಮಾಡುವುದು).

ಸ್ವತಂತ್ರ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಕನಿಷ್ಠ ಪ್ರಕಾರ್ಯಗಳಾದ ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ತೆರಿಗೆ ವಸೂಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. ಮುಂದುವರೆದು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 58ರಡಿಯಲ್ಲಿ ವಹಿಸಿರುವ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದೆ.

ಈ ರೀತಿ ಹೆಚ್ಚುವರಿ ಪ್ರಭಾರದಲ್ಲಿ ನೇಮಕಗೊಳ್ಳುವ ಅಧಿಕಾರಿ/ಸಿಬ್ಬಂದಿಗಳು ಆಯಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಹಾಗೂ ಈ ಸಂಬಂಧ ಕಚೇರಿಯ ದಾಖಲೆಗಳನ್ನು ನಿಯಮರೀತ್ಯಾ ಸೂಕ್ತ ರೀತಿಯಲ್ಲಿ ನಿರ್ವಹಿಸಲು ಹೊಣೆಗಾರರಾಗಿರುತ್ತಾರೆ. ಈ ಜವಾಬ್ದಾರಿ ನಿರ್ವಹಿಸುವಲ್ಲಿ ಯಾವುದೇ ವಿಫಲತೆ ಕಂಡುಬಂದಲ್ಲಿ ಅಂತಹ ಅಧಿಕಾರಿ/ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

(ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/404/ಗ್ರಾಪಂಕಾ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 14–12–2011

## ಸುತ್ತೋಲೆ

**ವಿಷಯ** : ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಪ್ರತಿ–ನಿಯೋಜನೆಯ (Redeployment) ಮೇಲೆ ನೇಮಕಾತಿ ಮಾಡುವ ಬಗ್ಗೆ.

* * *

ನೇರ ನೇಮಕಾತಿ ಮುಖಾಂತರ ನೇಮಕಗೊಂಡಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಅವರು ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳಿಂದ 3 ವರ್ಷಗಳವರೆಗೆ ವರ್ಗಾವಣೆ/ನಿಯೋಜನೆ ಮಾಡಬಾರದೆಂದು ಸರ್ಕಾರದಿಂದ ಹಲವಾರು ಸೂಚನೆಗಳನ್ನು ನೀಡಲಾಗಿದೆ.

ಆದರೆ ಇತ್ತೀಚೆಗೆ ಹಲವಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಹಲ್ಲೆ ಪ್ರಕರಣಗಳು ಮತ್ತು ಆತ್ಮಹತ್ಯೆ ಪ್ರಕರಣಗಳು ನಡೆದಿದ್ದು, ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸುಗಮವಾಗಿ ಕರ್ತವ್ಯ ನಿರ್ವಹಿಸುವ ವಾತಾವರಣ ಇರುವುದಿಲ್ಲ. ಇದರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಾನಸಿಕ ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇಂತಹ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ಮಾನಸಿಕವಾಗಿ ಅವರಿಗೆ ತೊಂದರೆ ಉಂಟು ಮಾಡುವಂತಹ ಹಾಗೂ ಜೀವಕ್ಕೆ ತೀವ್ರ ಅಪಾಯಕಾರಿ ಎಂಬಂತಹ ಪ್ರಕರಣಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಣವೇ ತನಿಖೆ ನಡೆಸಿ ಅವರುಗಳು ಸದರಿ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುವುದು ಅವರ ವೈಯಕ್ತಿಕ ಹಿತದೃಷ್ಟಿಯಿಂದ ಸುರಕ್ಷಿತವಲ್ಲವೆಂದು ನಿರ್ಣಯಿಸುವ ಪ್ರಕರಣಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಅಂತಹ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಪ್ರತಿ–ನಿಯೋಜನೆಯ (Redeployment) ಮೇಲೆ ಖಾಲಿ ಇರುವ ಬೇರೆ ಗ್ರಾಮ ಪಂಚಾಯಿತಿಗಳಿಗೆ ಮಾತ್ರ ನೇಮಿಸಲು ಅನುಮತಿ ನೀಡಿದೆ.

ಇಂತಹ ಪ್ರತಿ–ನಿಯೋಜನೆಗಳು ಶೇಕಡ 5 ಕ್ಕೆ ಮೀರದಂತೆ ನೋಡಿಕೊಳ್ಳುವುದು ಮತ್ತು ಪ್ರತಿ–ನಿಯೋಜನೆ ಮೇಲೆ ಮಾಡಿರುವ ನೇಮಕಾತಿ ಬಗ್ಗೆ ತಪ್ಪದೆ ಸರ್ಕಾರಕ್ಕೆ ಮಾಹಿತಿ ಸಲ್ಲಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

(ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿ

**ವಿಷಯ :** 2011-12ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ.ಗ್ರಾಅಪ 129 ಗ್ರಾಪಂಕಾ 2002(3) ದಿನಾಂಕ : 2-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007, ದಿನಾಂಕ: 27-3-2008.
3) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ.ಆಇ 229 ವೆಚ್ಚ-6/2011, ದಿನಾಂಕ : 08-06-2011.
4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ಗ್ರಾಪಂಅ 2011, ದಿನಾಂಕ: 14-6-2011.
5) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ.ಆಇ 229 ವೆಚ್ಚ-6/2011, ದಿನಾಂಕ : 09-08-2011.
6) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ಗ್ರಾಪಂಅ 2011, ದಿನಾಂಕ: 24-8-2011.
7) ಆರ್ಥಿಕ ಇಲಾಖೆ ಅ.ಟಿ.ಸಂಖ್ಯೆ.ಆಇ 229 ವೆಚ್ಚ-6/2011, ದಿನಾಂಕ : 16-12-2011.

* * *

### ಪ್ರಸ್ತಾವನೆ

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಶಾಸನಬದ್ಧ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ (ಜಿಪಂ) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಸರ್ಕಾರವು ಅಧೀಕರಿಸಿದೆ.

2011-12ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನಕ್ಕಾಗಿ ಆಯವ್ಯಯ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿ ಒಟ್ಟಾರೆ ₹. 45,436.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಪ್ರತಿ ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ ತಲಾ ₹.8.00 ಲಕ್ಷಗಳು ಲಭ್ಯವಾಗುತ್ತದೆ. ಈ ಸಾಲಿನ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ವೆಚ್ಚಕ್ಕಾಗಿ ಪ್ರಸ್ತಾಪಿತ ಲೆಕ್ಕ ಶೀರ್ಷಿಕೆಯಿಂದ ಒಟ್ಟು ರೂ.22508.00 ಲಕ್ಷಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (4) ಮತ್ತು (6) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (7) ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮೂರನೇ ತ್ರೈಮಾಸಿಕ ಅನುದಾನ ರೂ.11254.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಹಮತಿ ನೀಡಿದೆ. ಪ್ರಸ್ತುತ ರಾಜ್ಯದಲ್ಲಿ 5627 ಗ್ರಾಮ ಪಂಚಾಯಿತಿಗಳಿದ್ದು ಪ್ರತಿ ಗ್ರಾಮ ಪಂಚಾಯಿತಿಗೆ ಪ್ರತಿ ಕಂತಿಗೆ ₹.2.00 ಲಕ್ಷಗಳಂತೆ ₹.11254.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪರಿಶೀಲಿಸಲಾಗಿದ್ದು, ಸದರಿ ಅನುದಾನದ ಪೈಕಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಂತೆ, ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನಕ್ಕಾಗಿ ಶೇಕಡಾ 40 ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಅಕ್ಟೋಬರ್ 2011 ರಿಂದ ಡಿಸೆಂಬರ್ 2011 ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 105 ಗ್ರಾಪಂಅ 2011, ಬೆಂಗಳೂರು, ದಿನಾಂಕ: 23-12-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2011-12ನೇ ಸಾಲಿನ ಶಾಸನಬದ್ಧ ಅನುದಾನದ ಮೂರನೇ ತ್ರೈಮಾಸಿಕ ಕಂತಿನ ಮೊತ್ತ ₹.11254.00 ಲಕ್ಷಗಳನ್ನು (ಹನ್ನೊಂದು ಸಾವಿರದ ಎರಡ ನೂರ

ಐವತ್ತನಾಲ್ಕು ಲಕ್ಷ ರೂಪಾಯಿಗಳು) 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು, ಇಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಉಳಿತಾಯ ಖಾತೆ ಸಂಖ್ಯೆ: 04462010088409 ಮುಖಾಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ತಲಾ ₹.2.00 ಲಕ್ಷದಂತೆ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಈ ಕೆಳಕಂಡ ಮಾದರಿಯಲ್ಲಿ ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ.


1. ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವ 2.00 ಲಕ್ಷ ಅನುದಾನದ ಪೈಕಿ ಶೇಕಡ 60 ರಷ್ಟು ಮೊತ್ತವನ್ನು ಅಂದರೆ 1.20 ಲಕ್ಷಗಳನ್ನು ಗ್ರಾಮ ಪಂಚಾಯಿತಿಗಳ ಅಕ್ಟೋಬರ್ 2011 ರಿಂದ ಡಿಸೆಂಬರ್ 2011 ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಸಿಂಡಿಕೇಟ್ ಬ್ಯಾಂಕ್‌ನಿಂದ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

2. ಶೇಕಡಾ 40 ರಷ್ಟು ಅನುದಾನವನ್ನು ಅಂದರೆ ತಲಾ 0.80 ಲಕ್ಷಗಳನ್ನು ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನಕ್ಕಾಗಿ ಸಿಂಡಿಕೇಟ್ ಬ್ಯಾಂಕ್‌ನಿಂದ ನೇರವಾಗಿ ಗ್ರಾಮ ಪಂಚಾಯಿತಿಗಳ ಸ್ಥಳೀಯ ಬ್ಯಾಂಕ್ ಖಾತೆಗೆ ಜಮಾ ಮಾಡಲು ಆದೇಶಿಸಿದೆ.

ಮೇಲ್ಕಂಡ ಉದ್ದೇಶಗಳಲ್ಲದೇ ಈ ಅನುದಾನವನ್ನು ಜಿಲ್ಲಾ ಪಂಚಾಯಿತಿ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ. ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ದಿನಾಂಕ: 30-01-2012 ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 229 ವೆಚ್ಚ 6/2011, ದಿನಾಂಕ: 16-12-2011 ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,



**(ಹೆಚ್.ಬಿ. ರಘುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 105 ಗ್ರಾಪಂಅ 2011, ದಿನಾಂಕ: 23-12-

| ಕ್ರ. ಸಂ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲಾ ಪಂಚಾಯಿತಿ ಹೆಸರು | ಗ್ರಾಮ ಪಂಚಾಯಿತಿಗಳ ಸಂಖ್ಯೆ | 2011-12ನೇ ಸಾಲಿನ ಬಜೆಟ್ (₹.. ಲಕ್ಷಗಳಲ್ಲಿ) | 2011-12 ನೇ ಸಾಲಿನ ಮೂರನೇ ತ್ರೈಮಾಸಿಕ ಕಂತಿನ ಅನುದಾನ (₹. ಲಕ್ಷಗಳಲ್ಲಿ) | ಶೇಕಡ 60 ರಷ್ಟು ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವುದು (₹. ಲಕ್ಷಗಳಲ್ಲಿ) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 401 | ಬೆಂಗಳೂರು(ನಗರ) | 86 | 688 | 172.00 | 103. |
| 2 | 402 | ಬೆಂಗಳೂರು (ಗ್ರಾ) | 98 | 784 | 196.00 | 117. |
| 3 | 403 | ಚಿತ್ರದುರ್ಗ | 185 | 1480 | 370.00 | 22 |
| 4 | 404 | ಕೋಲಾರ | 156 | 1248 | 312.00 | 187. |
| 5 | 405 | ಶಿವಮೊಗ್ಗ | 260 | 2080 | 520.00 | 31 |
| 6 | 406 | ತುಮಕೂರು | 321 | 2568 | 642.00 | 385. |
| 7 | 407 | ಮೈಸೂರು | 235 | 1880 | 470.00 | 28 |
| 8 | 408 | ಚಿಕ್ಕಮಗಳೂರು | 226 | 1808 | 452.00 | 271. |
| 9 | 409 | ದಕ್ಷಿಣ ಕನ್ನಡ | 203 | 1624 | 406.00 | 243. |
| 10 | 410 | ಹಾಸನ | 258 | 2064 | 516.00 | 309. |
| 11 | 411 | ಕೊಡಗು | 98 | 784 | 196.00 | 117. |
| 12 | 412 | ಮಂಡ್ಯ | 232 | 1856 | 464.00 | 278. |
| 13 | 413 | ಬೆಳಗಾಂ | 485 | 3880 | 970.00 | 58 |
| 14 | 414 | ಬಿಜಾಪುರ | 199 | 1592 | 398.00 | 238. |
| 15 | 415 | ಧಾರವಾಡ | 127 | 1016 | 254.00 | 152. |
| 16 | 416 | ಉತ್ತರ ಕನ್ನಡ | 207 | 1656 | 414.00 | 248. |
| 17 | 417 | ಗುಲ್ಬರ್ಗಾ | 220 | 1760 | 440.00 | 26 |
| 18 | 418 | ಬಳ್ಳಾರಿ | 189 | 1512 | 378.00 | 226. |
| 19 | 419 | ಬೀದರ್ | 175 | 1400 | 350.00 | 21 |
| 20 | 420 | ರಾಯಚೂರು | 164 | 1312 | 328.00 | 196. |
| 21 | 421 | ಯಾದಗಿರಿ | 117 | 936 | 234.00 | 140. |
| 22 | 451 | ದಾವಣಗೆರೆ | 230 | 1840 | 460.00 | 27 |
| 23 | 452 | ರಾಮನಗರ | 130 | 1040 | 260.00 | 15 |

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# 2012

## ಜುಲೈ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಆಗಸ್ಟ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಸೆಪ್ಟೆಂಬರ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಅಕ್ಟೋಬರ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |


## ನವೆಂಬರ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಡಿಸೆಂಬರ್ 2012

| ಭಾ | ಸೋ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

ಸಾರ್ವತ್ರಿಕ ರಜಾ ದಿನಗಳನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿದೆ




# KARNATAKA VIKASA : JANUARY, 2012

A Monthly Magazine of Rural Development and Panchayat Raj Department, Government of Karnataka

**Regd. No. KA/BGGPO/2531/09-11. Licence to post "Without Prepayment" WPP-32**

**RNI. No. 28103, KAR, KAN-02190, Total No. of Pages 52. Despatch Date : 1st week of every month**



ಬೆಲೆ : 5 ರೂಪಾಯಿಗಳು

**Despatcher**

**OFFICE OF THE CHIEF EDITOR, KARNATAKA VIKASA**

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

**Printed at : GEETANJALI GRAPHICS**

**B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346**